ಸೂಚನೆಯ ಬಗ್ಗೆ

೫-೩೦ ಪಿ. ಎಂ.

ಶ್ರೀ ರಮೇಶ್‌ಕುಮಾರ್.—ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಿಯಮ ೩೧೦ರ ಪ್ರಕಾರ ಒಂದು ಪ್ರಿವಿಲೇಜ್ ನೋಟೀಸ್ ಇದೆ. ಪ್ರಿವಿಲೇಜ್ ನೋಟೀಸ್ ಅನ್ನು ನಾಳೆ ತೆಗೆದುಕೊಳ್ಳುತ್ತೇನೆ. ಈಗ ೩೧೦ರ ಪ್ರಕಾರ ನೀವು ಪ್ರಸ್ತಾಪ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ—ಮಾನ್ಯ ರಮೇಶ್‌ಕುಮಾರ್‌ರವರು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದರೆ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಅವರದು ತೆಗೆದುಕೊಳ್ಳುತ್ತೇನೆ, ಇವರದು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಿವಿಲೇಜ್ ಮೋಷನ್ ಅನ್ನು ಯಾರೇ ಕೊಟ್ಟರಲಿ ಅದನ್ನು ಮೊದಲು ತೆಗೆದುಕೊಳ್ಳಬೇಕಾಗುತ್ತದೆ. ಅವರದು ಇದ್ದರೂ ತೆಗೆದುಕೊಳ್ಳಬೇಕು, ಇವರದು ಇದ್ದರೂ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆ ನಿಯಮ ೩೧೦ರ ಪ್ರಕಾರ ಕೊಟ್ಟಿದ್ದಾರೆ. ನಿಯಮ ೩೧೧ರ ಪ್ರಕಾರ ಕೊಟ್ಟಿದ್ದಾರೆ. ಎರಡೂ ಇವೆ. ಮೊದಲು ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳೋಣ.

ಶ್ರೀ ರಮೇಶ್‌ಕುಮಾರ್.—ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆಯ ದಿವಸ ಸಭೆಯ ಘನತೆಯನ್ನು ಎತ್ತಿ ಹಿಡಿಯತಕ್ಕ ಸಭಾಧ್ಯಕ್ಷರಾದ ತಮ್ಮ ಹಕ್ಕಿಗೆ ಗೌರವಕ್ಕೆ ಮತ್ತು ಸದನದ ಗೌರವಕ್ಕೆ ತಾರೀಖು ೨೭-೨-೧೯೮೬ರಂದು ಸಭೆ ನಡೆಯುವಾಗ ಕ್ಲಾರಿಫಿಕೇಷನ್ ಕೇಳತಕ್ಕ ಸಂದರ್ಭದಲ್ಲಿ ಸಭೆಯಲ್ಲಿ ಕಾವೇರಿದ ವಾತಾವರಣದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಈ ಸದನದಲ್ಲಿ ತಮ್ಮನ್ನು ಉದ್ದೇಶಿಸಿ ಮಾಡಿರತಕ್ಕ ಕೆಲವು ಮಾತುಗಳಿಂದ ಈ ಸಭೆಯ ಮತ್ತು ಸಭಾಧ್ಯಕ್ಷರಾದ ತಮ್ಮ ಗೌರವಕ್ಕೆ ಚ್ಯುತಿ ಬಂದಿತ್ತು ಎಂದು ನಾನು ನೋಟೀಸು ಕೊಟ್ಟಿದ್ದೇನೆ. ನಿನ್ನೆ ನಾನು ವಿಷಯವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ವಿರೋಧಪಕ್ಷದ ನಾಯಕರು ಇರಲಿಲ್ಲ. ಆದ್ದರಿಂದ ವಿಷಯವನ್ನು ಇವತ್ತು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದೇನೆ. ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮೊದಲು ನಾನು ಕೊಟ್ಟಿರತಕ್ಕ ನೋಟೀಸನ್ನು ಓದುತ್ತೇನೆ. ಅದು ಈ ರೀತಿ ಇದೆ.

"That at the conclusion of General Discussion on Budget and reply by the Hon'ble Chief Minister on 27th February 1986...

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಈಗ ತಾನೆ ಆ ಕಡೆ ಕುಳಿತಿರತಕ್ಕ ಮಾನ್ಯ ಶ್ರೀನಿವಾಸ್‌ರವರು ಇಂಗ್ಲೀಷ್‌ನಲ್ಲಿ ಓದಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಾವು ಓದಿ ಹೇಳಿ.

SRI RAMESH KUMAR.—

"That at the conclusion of General Discussion on Budget and reply by the Hon'ble Chief Minister on 27th February 1986, the Hon'ble Speaker allowed the Members of the House to seek clarifications. There were further requests

Hon'ble members for further clarifications and the from the Hon'ble Speaker ruled that no more clarifications would be permitted on this. At this point of time, the Hon'ble Leader of the Opposition, Shri Bangarappa stood up and while casting aspersions on the Chair protested against the ruling of the Chair and wanted the Hon'ble Speaker to allow further clarifications for the members. The Hon'ble Speaker did not agree with the Hon'ble Leader of the Opposition. And there upon the leader of the opposition Shri Bangarappa started shouting at the Chair and threatened that he would not allow the proceedings of the House to be carried on, and when the Hon'ble Speaker pleaded with the Hon'ble Leader of the Opposition to resume his seat, the Hon'ble Leader of the Opposition, Shri Bangarappa did not obey the Hon'ble Speaker and when the Hon'ble Speaker Order not to record, the Leader of the Opposition shouted, "I care two hoots for the records, and thus defied the authority of the Chair and thereby brought down the dignity of the House and the office of the Speaker. It is unbecoming of the Member of the House, that too, the Leader of the Opposition to defy the Chair.

2. This attitude of Shri Bangarappa, Leader of the Opposition amounts to gross misbehaviour and constitutes breach of privilege of this House and hence this notice."

Sir, in this connection I quote from page 71 of Erskine May's Parliamentary Practice :

"The privileges of a legislative Assembly would be entirely ineffectual to enable it to discharge its functions, if it had no power to punish offenders, to impose disciplinary regulations upon its members, or to enforce obedience to its commands"

Sir. in particular, on any account, if an Hon'ble Member shows disregard to the Chair, dis-obedience to your rulings, or if he questions your ruling, it amounts to contempt of the House, contempt of the Speaker and Breach of privilege of this August House. I would also like to quote from page 96 of Kaul and Shakdher's Parliamentary Practice and Procedure :

"Rulings of the Speaker: It is the right of the Speaker to interpret the Constitution and rules, so far as matters in or relating to the House are concerned, and no one, including the Government, can enter into any argument

or controvercy with the Speaker over such interpretation. His rulings constitute precedents by which subsequent Speakers, members and officers are guided. Such precedents are collected and in course of time, formulated as rules of procedure or followed as conventions. The Speaker's rulings, as already stated, cannot be questionated except on a substantive motion, A member who protests against the ruling of the Speaker commits contempt of the House and the Speaker. The Speaker's decision is equally binding whether given in the House or on a departmental file. He is not bound to give reasons for his decisions. Members cannot criticise directly or indirectly, inside or outside the House, any ruling given, opinion expressed or statement made, by the Speaker. If a member desires to make a submission to the Speaker, on the floor of the House regarding a ruling, the Speaker may permit the member to do so after satisfying himself that it does not unduly interfere with the proceedings of the House."

Sir, in a similar situation in Loka Sabha, the Hon'ble Speaker has given a ruling. This is an extract from the Debates of the Loka Sabha dated 28-4-1958, I quote from pages 11944 and 11945.

"MR. SPEAKER.—Order, Order. I am going to charge him for contempt of this House. The Hon'ble Member may take care, I warn him. Hon'ble Members evidently think they can do anything with me. Hon'ble Members must know that I have got the right to decide one way or the other, whoever sits in this Chair has got that right under the Constitution. He hears both sides and after hearing both the sides, he must say 'Yes' or 'no'. Hon'ble Members who want to say "I do not agree"—they may or may not agree—may keep with themselves. He cannot protest like that. If he protests, it is contempt of the House, contempt of the Speaker. I am giving this warning. This is the first impression. Hon'ble Members can go out of this House, if they like. I have no objection and I cannot prevent them. But if, while going they say, "I do not agree with your order. Your order is illogical or improper, I protest." This is an absolute violation of the rules of procedure, it is a contempt of this House and the Speaker. I cannot tolerate it Hon'ble Members can go if they so like."

This is ruling of the Speaker of the Lok Sabha dated 28-4-1958. I would not like to unnecessarily go round, beating the bush.

The Hon'ble Leader of the Opposition who occupies a very important and protocol position in this House should have thrown lot of light and showed us guidance for the Members who have come late to this House as to how we should conduct ourselves in this House. Infact, Kaul and Shakdher comment at one stage, "he shall weigh each word." The Hon'ble Leader of the Opposition is the shadow Chief Minister. He will have to weigh each word, measure each word. Vigilance is his hallmark. Unforunately that is not the position here. ೨೭-೨-೧೯೮೬ ರಂದು ಈ ಸದನದಲ್ಲಿ ನಡೆದ ನಡವಳಿಕೆ ಈ ರೀತಿ ಇದೆ. —

ಅಧ್ಯಕ್ಷರು.—ಬಂಗಾರಪ್ಪನವರೆ, ಈ ರೀತಿ ನೀವು ನನ್ನನ್ನು ಹೆದರಿಸುವುದನ್ನು ಬಿಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ, ತಾವು ಈ ರೀತಿ ನನ್ನನ್ನು ಹೆದರಿಸುವುದನ್ನು ಬಿಡಿ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನೀವು ಎದ್ದು ನಿಂತು ಗಲಾಟೆ ಮಾಡುವುದಾದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ತಾವು ಹೇಳುವುದನ್ನು ಸಾವಧಾನವಾಗಿ ಹೇಳಿ, ಏತಕ್ಕೆ ಸಿಟ್ಟಿಗೆ ಏಳುತ್ತೀರಿ. ದೇವೇಗೌಡರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಸ್. ಬಂಗಾರಪ್ಪ.—ಸಾವಧಾನವಾಗಿ ಕುಳಿತುಕೊಳ್ಳುವುದಕ್ಕೆ ಆಗುವುದೇ ಇಲ್ಲ.

ಅಧ್ಯಕ್ಷರು.— ಬಂಗಾರಪ್ಪನವರೆ, ಸಾವಧಾನವಾಗಿ ಕುಳಿತುಕೊಳ್ಳಿ.. ಎಂದು ವಿನಂತಿಸಿಕೊಂಡಿದ್ದೀರಿ. ಮತ್ತೆ ಬಂಗಾರಪ್ಪನವರು ಹೇಳುತ್ತಾರೆ, ಯಾವುದೂ ದಾಖಲೆ ಹೋಗುವುದಿಲ್ಲವೆಂದು ಹೇಳಿದ್ದೀರಿ ಎಂದು.

MR. SPEAKER.—Nothing will go on record.

SRI S. BANGARAPPA.—I care to hoots for recording. "hoots" ಅಂದರೆ ಅತೃಪ್ತಿ, ಅಸಮಾಧಾನವಾಗಿದೆ ಎಂಬ ಅರ್ಥ ಬರುತ್ತದೆ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ, ಸ್ವಲ್ಪ ಸಮಾಧಾನವಾಗಿ ಕೇಳಿ.

ಶ್ರೀ ರಮೇಶ್ ಕುಮಾರ್.—ಅವಕಾಶಗಳು ಎಲ್ಲರಿಗೂ ಬರುತ್ತವೆ. ಒಂದು ವಿಚಾರ ಪ್ರಸ್ತಾಪ ಮಾಡಿದಾಗ ಕೆಲವೊಮ್ಮೆ ಈ ಸದನದಲ್ಲಿ ಕಾವೇರಿದ ವಾತಾವರಣ ಉಂಟಾಗುತ್ತದೆ. ಅನೇಕ ಸಂದರ್ಭಗಳಲ್ಲಿ ನಾವು ಆಡಿದ್ದು ಉಂಟು, ಅವರೂ ಆಡುತ್ತಾರೆ, ತಾವು ಸಾವಧಾನದಿಂದ ಕೇಳುತ್ತೀರಿ, ಬುದ್ಧಿ ಹೇಳುತ್ತೀರಿ, Willfully ಮಾಡಿದ್ದಾರೆಂಬುದಕ್ಕೆ ಮತ್ತೆ ತಾವು ಹೇಳಿದ್ದನ್ನು ಅವರು ಸಮರ್ಥನೆ ಮಾಡಿದ್ದಾರೆ.

ಬಂಗಾರಪ್ಪ.—ನಾವುಗಳು ಯಾರೂ ಅವರ ಮಾತಿಗೆ ಬೆಲೆ ಕೊಡಬೇಕಾದ ಅವಶ್ಯಕತೆ ಇಲ್ಲ. ಮಾನ್ಯ ಸದಸ್ಯರಿಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಒತ್ತಡ ತಂದ ಸಂದರ್ಭದಲ್ಲಿ ನೀವು ಹೇಳಿದ ಯಾವ ಮಾತುಗಳೂ ದಾಖಲೆಗೆ ಹೋಗುವುದಿಲ್ಲವೆಂದು ಹೇಳಿದಿರಿ. ಆಗ ಅವರು ನಾನು ಹೇಳಿದ್ದು ದಾಖಲೆಗೆ ಹೋಗದಿದ್ದರೆ "I care to hoots for recording" ಎಂದು ಹೇಳಿದ್ದಾರೆ. ನಮಗೆ ಮಾತನಾಡಲಿಕ್ಕೆ ಸಾಕಷ್ಟು ಕಾಲಾವಕಾಶ ಕೊಡಬೇಕೆಂದು ನಿಮ್ಮಲ್ಲಿ ಒತ್ತಡ ತಂದಾಗ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಇಲ್ಲಿ ನಮ್ಮ ಹಕ್ಕನ್ನು ಚಲಾವಣೆ ಮಾಡತಕ್ಕ ಸಂದರ್ಭದಲ್ಲಿ ಅವಾಚ್ಯ ಶಬ್ದ ಉಪಯೋಗಿಸಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ, ಮತ್ತು ಆ ಶಬ್ದಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಹಿಂದಕ್ಕೆ

ತೆಗೆದುಕೊಳ್ಳತಕ್ಕ ಯಾವ ಅವಾಚ್ಯ ಶಬ್ದವನ್ನೂ ಆಡಿಲ್ಲ. ಈ ಹಿಂದೆಯೂ ಅಂಥ ಶಬ್ದಗಳನ್ನು ಬಳಸಿಲ್ಲ. ತಮ್ಮಲ್ಲಿ ಒತ್ತಡ ತರುವಂಥ ಕಾಲದಲ್ಲಿ ಧ್ವನಿಯಲ್ಲಿ ವ್ಯತ್ಯಾಸವಾಗಿರಬಹುದೇ ಹೊರತು ಬೇರೆ ಏನೂ ಆಗಿಲ್ಲ. ಶಬ್ದಗಳ ಮೇಲೆ ಹತೋಟಿ ಇದ್ದೇ ಇರುತ್ತದೆ. ಇಲ್ಲದಿದ್ದರೆ ನಾನು ಬಹಳ ಹಿಂದಕ್ಕೆ ಹೋಗಬೇಕಾಗಿತ್ತು. ನಾನು ಮಾತನಾಡಿದಂಥ ಧಾಟಿಯ ಏರಿಳಿತದ ಆಧಾರದ ಮೇಲೆ ಮಾನ್ಯ ಸಚಿವರು ಪೂರ್ವ ಚರಿತ್ರೆಯನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ವಾಧಿಕಾರಿ ತರಹ ಇದ್ದಾರೆಂದು ಹೇಳಿದ್ದಾರೆ ಮತ್ತೆ ಕೃಷ್ಣನ್ ಅವರು ಮಾತನಾಡಿ hoots ಎಂಬುದು ಅವಾಚ್ಯ ಶಬ್ದ ಅಲ್ಲ, ಈ ಸಭೆಯ ಗೌರವಕ್ಕೆ ಚ್ಯುತಿ ತರತಕ್ಕ ಮಾತು ಅಲ್ಲ, ಅಧ್ಯಕ್ಷರ ಸ್ಥಾನಕ್ಕೆ ಅಗೌರವ ಮಾಡತಕ್ಕದ್ದು ಅಲ್ಲ ಎಂದು ಹೇಳಿದ್ದಾರೆ. ಮತ್ತೆ ಲಕ್ಷ್ಮೀಸಾಗರ್‌ರವರಿಗೆ ಇದು ಹೇಗೆ ಹೊಯಿತೋ ಅರ್ಥವಾಗುತ್ತಿಲ್ಲ, ಅವರು ಪೂರ್ವ ಇತಿಹಾಸವನ್ನು ಹೇಳಿದರು, ಡಿಕ್ಟೇಟರ್ ಅಲ್ಲವೆಂದು ಹೇಳಿದ್ದಾರೆ. ಅವರಿಗೆ ಅವಾಚ್ಯ ಶಬ್ದ ಬಳಸುವುದು ಬಿಟ್ಟು ಒಳ್ಳೆಯ ಶಬ್ದ ಬಳಸುವ ಅಭ್ಯಾಸ ಇಲ್ಲ ಎಂದು ಹೇಳಿದ್ದಾರೆ. ಮಾನ್ಯ ಗೃಹ ಸಚಿವರಾದ ರಾಚಯ್ಯನವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಯಾವ ಒಂದು ನಂದಕುಮಾರ್ ಅವರ ಹೇಳಿಕೆಯನ್ನು ಓದಿ ಹೇಳಿದ್ದಾರೆ...

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ, ಅವರು ಏನು ಹೇಳುತ್ತಾರೊ ಹೇಳಲಿ.

ಶ್ರೀ ಎಂ. ಎಸ್. ಪಾಟೀಲ್.—ಆ ವಿಷಯಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವವರು ತಾವೋ ಅಥವಾ ಮಲ್ಲಾರಿಗೌಡ ಪಾಟೀಲರೋ ?

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷ ಸ್ಥಾನದಲ್ಲಿರುವವರು ಅವರು ನಾನಲ್ಲ.

ಶ್ರೀ ರಮೇಶ್ ಕುಮಾರ್.—ವಿರೋಧ ಪಕ್ಷದ ನಾಯಕರಿಗೆ ಸಮರ್ಥನೆ ಮಾಡಿಕೊಳ್ಳತಕ್ಕ ಒಂದು ಕಾರ್ಯ ವೈಖರಿ ಬಹಳ ಚೆನ್ನಾಗಿ ಗೊತ್ತು. ೧೯-೮-೧೯೮೫ ರಂದು ಇದೇ ಸದನದಲ್ಲಿ ರೂಲ್ ೩೩೪ರ ಕೆಳಗೆ ಒಂದು ಸೂಚನೆಯನ್ನು ಕೊಟ್ಟು ರಂಗನಾಥ್ ಅವರಿಗೆ ದಲಿತ ಕಾಂಗ್ರೆಸ್ ಕಾರ್ಯಕರ್ತರು ನಿಮಗೆ ಅಪಾಯ ಇದೆ ಎಂದು ಟೆಲಿಗ್ರಾಂ ಕಳುಹಿಸಿರುವುದರಿಂದ ಅವರಿಗೆ ರಕ್ಷಣೆ ಕೊಡಬೇಕೆಂದು ಕೇಳಿದ್ದೆ.

ಅಧ್ಯಕ್ಷರು.—ಆ ವಿಷಯವನ್ನು ಈಗ ಹೇಳಬೇಡಿ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಕ್ರಿಯಾಲೋಪ ಎತ್ತುತ್ತೇನೆ. Rule 193(1) of Rules of Procedure reads.—"The Speaker if he gives consent under rule 190 and holds that the matter proposed to be discussed is in order, shall after the questions and before the list of business is entered upon, call the member concerned, who shall rise in his place and while asking for leave to raise the question of privilege make a short statement relevant thereto." ಆ ಪ್ರಿವಿಲೇಜ್ ಇಶ್ಯೂ ಅನ್ನು ರೈಸ್ ಮಾಡುವುದಕ್ಕೆ ಅನುಮತಿ ಕೋರಿ ಅವರು ಹೇಳಿಕೆ ಕೊಡುತ್ತಿದ್ದಾರೆ. ಆದ್ದರಿಂದ ಅವರು ಅದಕ್ಕೆ ಸೀಮಿತವಾದ ಮತ್ತು ಕ್ಲುಪ್ತವಾದ ಹೇಳಿಕೆಯನ್ನು ಕೊಡಬೇಕೇ ಹೊರತು, ಬೇರೆ ಯಾವುಯಾವುದೋ ವಿಷಯಕ್ಕೆ ಹೋಗುವುದು ಈ ರೂಲ್ಸ್‌ನ ವ್ಯಾಪ್ತಿಯಲ್ಲಿ ಸರಿ ಹೋಗುವುದಿಲ್ಲ. ಈಗಾಗಲೇ ಎಷ್ಟು ಹೇಳಬೇಕಾಗಿತ್ತೋ ಅಷ್ಟನ್ನು ಹೇಳಿದ್ದಾರೆ, ಇನ್ನು ಹೇಳುವುದಕ್ಕೇನೂ ಉಳಿದಿಲ್ಲ. ಆದರ ಮೇಲೆ ತಾವು ತೀರ್ಮಾನ ತೆಗೆದುಕೊಳ್ಳಿ

ಶ್ರೀ ರಮೇಶ್ ಕುಮಾರ್.—ಅದಕ್ಕೆ ಸೀಮಿತಗೊಂಡದ್ದೋ ಅಲ್ಲವೋ ಆ ಬಗ್ಗೆ ತೀರ್ಮಾನ ಕೊಡತಕ್ಕ ಅಧಿಕಾರ ತಮಗಿದೆ. ನಾನು ಇಷ್ಟು ಪ್ರಸ್ತಾಪ ಮಾಡಿದ್ದೇನೆ. ನಾನು ಅವಾಚ್ಯ ಶಬ್ದಗಳನ್ನು ಬಳಸಿಲ್ಲವೆಂದು ಹೇಳುತ್ತೇನೆ. I am trying to strengthen my case by giving out all the details. The Hon'ble Leader of the Opposition is in the habit of...

(Interruptions)

SRI M. MALLIKARJUNA KHARGE.—Sir, Hon"ble Member Sri K. H. Srinivas has raised a Point of Order and you have to give your ruling first. Afterwards hon'ble Member Sri Ramesh Kumar can speake.

SRI RAMESH KUMAR.—He cannot insist like this.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಖರ್ಗೆಯವರು ಸ್ವಲ್ಪ ಹೊತ್ತು ಸಹಕಾರ ಕೊಡಲಿ, ಅವರು ಅದೇ ಕ್ರಿಯಾಲೋಪದ ಮೇಲೆ ಮಾತನಾಡುತ್ತಿದ್ದಾರೆ. ಅದು ಕ್ರಿಯಾಲೋಪ ಆಗುವುದಿಲ್ಲ ಎಂಬುದನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ದಯವಿಟ್ಟು ರಮೇಶ್ ಕುಮಾರ್ ಅವರಿಗೆ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ರಮೇಶ್ ಕುಮಾರ್.—ನಾನು ವಿಷಯಾಂತರ ಮಾಡತಕ್ಕ ಪ್ರಯತ್ನ ಮಾಡುವುದಿಲ್ಲ.

ಶ್ರೀ ಎಂ. ರಘುಪತಿ.—ಶ್ರೀನಿವಾಸ್ ಅವರು ಎತ್ತಿದ ಕ್ರಿಯಾಲೋಪದ ಬಗ್ಗೆ ಮತ್ತೆ ಹೇಳುತ್ತಿದ್ದಾರೆ.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಿ ಮತ್ತು ರೆಕಾರ್ಡ್ ಆಗಿದ್ದು ಇದೆ. ಅದರ ಮೇಲೆ ಅಷ್ಟೇ ಮಾತನಾಡಿ.

ಶ್ರೀ ರಮೇಶ್ ಕುಮಾರ್.—ಅದರ ಮೇಲೆ ಅಷ್ಟೇ ಮಾತನಾಡುತ್ತಿದ್ದೇನೆ. ಈ ಸದನದ ಗೌರವಕ್ಕೆ ಚ್ಯುತಿ ಬಂದಿದೆ ಎಂದು...

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಮ್ಮ ಮೂಲಕ ರಮೇಶ್ ಕುಮಾರ್‌ರವರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಅವರು ಹೀಗೆ ರೇಗುತ್ತಾ ಹೋದರೆ ಬ್ರೀಚ್ ಆಫ್ ಪ್ರಿವಿಲೇಜ್ ಮಾಡತಕ್ಕ ಸಂದರ್ಭ ಬರುತ್ತದೆ. ಆದ್ದರಿಂದ ಅವರು ಬೇಗ ಮುಗಿಸುವುದು ಒಳ್ಳೆಯದು.

ಅಧ್ಯಕ್ಷರು.—ನೋಟೀಸನ್ನು ಓದಿ ಹೇಳಿದ್ದೀರಿ. ರೆಕಾರ್ಡಿಂಗ್...

ಶ್ರೀ ರಮೇಶ್ ಕುಮಾರ್.—ನಾನು ಹೇಳತಕ್ಕಂಥ ಮಾತನ್ನು ಪುಷ್ಟೀಕರಿಸುವುದಕ್ಕೆ ನನಗೆ ಅವಕಾಶಬೇಕು.

ಶ್ರೀ ಜಿ. ಎಂ. ಕಾನಡೆ.—ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡ್ತೀರಾ ?

ಅಧ್ಯಕ್ಷರು.—ಇಷ್ಟಕ್ಕೇ ಸೀಮಿತವಾಗಿ ಮಾತನಾಡಿ.

ಶ್ರೀ ರಮೇಶ್‌ಕುಮಾರ್.—ನಾನು ಸೀಮಿತವಾಗಿ ಇಂಥ ಸಂದರ್ಭದಲ್ಲಿ ಮಾತನಾಡಲಿಲ್ಲವೆಂದು ತೋರಿಸಿಕೊಟ್ಟು ಮಾತನಾಡಬೇಡಿ ಎಂದು ಹೇಳಿದರೆ ತಮ್ಮ ಆಜ್ಞೆಯನ್ನು ಉಲ್ಲಂಘಿಸಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಅವಾಚ್ಯ ಶಬ್ದಗಳನ್ನು ಬಳಸಿಲ್ಲ ಎಂದು ಏನು ಹೇಳುತ್ತಾರೆ, ಅದು ಸರಿಯಲ್ಲ ಅವರಿಗೆ ಅವಾಚ್ಯ ಶಬ್ದಗಳನ್ನು ಬಳಸತಕ್ಕಂಥ ಅಭ್ಯಾಸ ಇದೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವಾಚ್ಯ ಶಬ್ದಗಳನ್ನು ಬಳಸತಕ್ಕಂಥ ಅಭ್ಯಾಸ ಇದೆ ಎಂದು ಹೇಳುತ್ತಿದ್ದಾರೆ. He will be creating another breach of privilege.

ಶ್ರೀ ರಮೇಶ್ ಕುಮಾರ್.—ಏನು ಆಗುತ್ತದೆ ಎಂದು ಗೊತ್ತಿದೆ. ನಾಚಿಕೆಯಾಗಬೇಕು ಎಂದು...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡ್ರಿ. ಬ್ರೀಚ್ ಆಫ್ ಪ್ರಿವಿಲೇಜ್ ಬಗ್ಗೆ ಅಷ್ಟೇ ಮಾತನಾಡಿ. ಅವರು ನೋಟೀಸ್ ಕೊಟ್ಟಿದ್ದಾರೆ. ನೀವು ನೋಟೀಸ್ ಕೊಟ್ಟಿದ್ದೀರಿ,

(ಶ್ರೀ ರಮೇಶ್‌ಕುಮಾರ್‌ರವರು ತಮ್ಮಲ್ಲಿರುವ ಕ್ಯಾಸೆಟ್ಟನ್ನು ತೋರಿಸಿದರು)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾ ಲೋಪವನ್ನು ಎತ್ತಿದ್ದೇನೆ. ನನ್ನ ಕ್ರಿಯಾಲೋಪವೇನೆಂದರೆ, ಈ ಮನೆಯಲ್ಲಿ ಅವರು ಹಕ್ಕುಬಾಧ್ಯತಾ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದಾರೆ, ತೆಗೆದುಕೊಂಡು ಬರುವುದಕ್ಕೂ ಅಧಿಕಾರ ಇದೆ, ವಿರೋಧ ಇಲ್ಲ. ಆದರ ಬಗ್ಗೆ ತಮಗೆ ನೋಟೀಸನ್ನು ಕೊಟ್ಟಿದ್ದಾರೆ. ಡಾಕ್ಯುಮೆಂಟ್‌ನ್ನು ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮಾತನಾಡುತ್ತಿದ್ದರೆ ತೊಂದರೆ ಏನೂ ಕಂಡುಬರುತ್ತಿರಲಿಲ್ಲ. ಆದರೆ ಮಾತನಾಡುತ್ತಾ ಮಾತನಾಡುತ್ತಾ ಜೇಬಿನಿಂದ ಏನೋ ತೆಗೆದು ತೋರಿಸಿದರು, ಟೇಪ್ ಇದ್ದರೆ ಅದರ ಜವಾಬ್ದಾರಿಯನ್ನು ಇಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ. ತಾವು ಆದರ ಬಗ್ಗೆ ತೀರ್ಪು ಕೊಡಬೇಕು. ಟೇಪನ್ನು ಪ್ರದರ್ಶನ ಮಾಡುವುದು ಸರಿಯಿಲ್ಲ. ಇಲ್ಲಿದೆ ಇಲ್ಲಿದೆ ಎಂದು ಆ ರೀತಿ ಪ್ರದರ್ಶನ ಮಾಡುವುದು ಸರಿಯಲ್ಲ. ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು.—ಇಷ್ಟಕ್ಕೇ ಮಾತ್ರ ಸೀಮಿತವಾಗಿ ಮಾತನಾಡಿ. ನಿಮ್ಮದು, ಅವರದನ್ನು ಆಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ರಮೇಶ್ ಕುಮಾರ್.—ಶ್ರೀಮಾನ್ ಕೃಷ್ಣನ್‌ರವರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಈ ಟೇಪನ್ನು ಎತ್ತಿ ತೋರಿಸಿ ಹೆದರಿಸುವುದಕ್ಕೆ ತಂದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಪಕ್ಷದ ಇನ್ನೊಬ್ಬ ಸದಸ್ಯರ ಜೊತೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಹರಿಜನರು ಎಂದು ಹೇಳಿ ನಿಮ್ಮ ವರ್ಗದ ಬಗ್ಗೆ ದೂಷಣೆ ಮಾಡುತ್ತಾ ಶ್ರೀ ಕೆ.ಹೆಚ್. ರಂಗನಾಥ ಅವರ ಮೇಲೆ ಹಲ್ಲೆ ಮಾಡಬೇಕು...

(ಗೊಂದಲ)

SRI S. BANGARAPPA.—I am sorry.

ಅಧ್ಯಕ್ಷರು.—ರಮೇಶ್‌ಕುಮಾರ್‌ರವರೇ, ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

SRI M. RAGHUPATHY.—Ae should be hanged .

SRI R. VENKATARAMAIAH.—I am on a point of order.

MR. SPEAKER.—Nothing will go on record.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳುವುದು...

ಶ್ರೀ ನಾರಾಯಣಕುಮಾರ್.—ಪರಿಶಿಷ್ಟ ವರ್ಗ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕೂಡ್ರಿ, ನಾರಾಯಣಕುಮಾರ್‌ರವರೇ,

(ಗೊಂದಲ)

MR. SPEAKER.—Nothing will go on record. ಕೂಡ್ರಿ ನನಗೆ ಗೊತ್ತಿದೆ.

ಶ್ರೀ ಎಂ. ಎಸ್. ಪಾಟೀಲ್.—ನನ್ನ ಕ್ರಿಯಾಲೋಪ ಇದೆ. ಆ ಟೇಪನ್ನು ಸೀಜ್ ಮಾಡಬೇಕೆಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಬ್ರೀಚ್ ಆಫ್ ಪ್ರಿವಿಲೇಜ್ ಇದೆಯೋ ಇಲ್ಲವೋ ಹೇಳಿ.

SRI M. RAGHUPATHY.—He should be hanged.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕ್ರಿಯಾಲೋಪ ಎತ್ತಿದ್ದೆ. ಅದಕ್ಕೆ ಏನು ರೂಲಿಂಗ್ ಕೊಟ್ಟಿದ್ದೀರೋ ಗೊತ್ತಿಲ್ಲ. ರೂಲಿಂಗ್ ಕೊಟ್ಟಿಲ್ಲ. ಏತಕ್ಕೆ ನಾನು ಕ್ರಿಯಾಲೋಪ ಎತ್ತಿದ್ದೆ ಎಂದರೆ

ಅವರ ಜೇಬಿನಿಂದ ತೆಗೆದು ಇದು ಸರಿ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರ ಬಗ್ಗೆ ತಾವು ತೀರ್ಮಾನ ಮಾಡಿ. ವಿರೋಧ ಇಲ್ಲ. ಎರಡನೆಯದು...

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಅಡಕವಾಗಿರುವ ಅಂಶಗಳ ಬಗ್ಗೆ ಗೊತ್ತಿಲ್ಲ. ಹಾಗೆ ಹೇಳಿದರೆ ತೊಂದರೆ ಬರುತ್ತದೆ. ಈ ಜಂಜಾಟದಲ್ಲಿ ಮಾನ್ಯ ರಘುಪತಿಯವರು ಕೆಲವು ಮಾತನ್ನು ಹೇಳಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದ್ದರೆ ಕಷ್ಟ, 'He should be hanged' ಎಂದು ಹೇಳಿದ್ದಾರೆ. Who should be hanged, I don't know...

(ಗೊಂದಲ)

ಅಧ್ಯಕ್ಷರು.—ಬೊಮ್ಮಾಯಿಯವರೇ ಮಾತನಾಡಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಮೊದಲು ಮಾನ್ಯ ಕೃಷ್ಣನ್‌ರವರು ಒಂದು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದಾರೆ. ಅವರ ಪಾಯಿಂಟ್ ಆಫ್ ಆರ್ಡರ್‌ಗೆ...

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಟೇಪನ್ನು ಪ್ರದರ್ಶನ ಮಾಡಲಿಕ್ಕೆ ಅವಕಾಶ ಮಾಡಿದ್ದೀರಾ? ಮಾನ್ಯ ಅಧ್ಯಕ್ಷರೇ, ಅದನ್ನು ನಾವು ಇಲ್ಲಿ ಕೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಒಂದು ವಿಧಿಬಿಂದುವನ್ನು ಎತ್ತಿದ್ದಾರೆ.

ಶ್ರೀ ಎಂ.ಎಸ್. ಪಾಟೀಲ್.—ತಾವು ನನಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಹೇಳಿದ್ದೀರಲ್ಲ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ

Sri. M. S. Krishnan,—My point of order should be disposed of beforehis point of order is taken up.

ಶ್ರೀ ಎಸ್, ಆರ್. ಬೊಮ್ಮಾಯಿ.—ಕೃಷ್ಣನ್‌ರವರ ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಂ.ಎಸ್. ಪಾಟೀಲ್.—ಪಾಯಿಂಟ್ ಆಫ್ ಆರ್ಡರ್ ಮೇಲೆ ಅವಕಾಶ ಕೊಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ,—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಏನು ಎತ್ತಿದ್ದಾರೆ, ಅದಕ್ಕೆ ತಾವು ತಮ್ಮ ಅಪ್ಪಣೆ ಕೊಟ್ಟಿಲ್ಲ. ಅದ್ದರಿಂದ ಅವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಆದಾದ ಮೇಲೆ ಬಾಕಿ ಪಾಯಿಂಟ್ ಆಫ್ ಆರ್ಡರ್‌ಗೆ ತಾವು ಅವಕಾಶ ಕೊಡಬೇಕು. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿರುವುದರಿಂದ ಬೇರೆ ಪ್ರಶ್ನೆ ಉದ್ಭವವಾಗುವುದಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಧೈರ್ಯ ಇದ್ದರೆ, ತಾಕತ್ತು ಇದ್ದರೆ...

(ಗೊಂದಲ)

Mr, Speaker.—Nothing will go on record.

೬–೦೦ ಪಿಎಂ.

ಶ್ರೀ ಎಂ, ವೀರಪ್ಪ ಮೊಯಿಲಿ.—ದಯುಮಾಡಿ ಕಾನೂನನ್ನು ಪರಿಪಾಲಿಸಬೇಕು.

Mr. Speaker.-Nothing will go on record. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ he is a senior parliamentarian, ಅವರ ವಾದವನ್ನೂ ಕೇಳಿದ್ದೇನೆ. ತಾವೂ ಹೇಳಿದ್ದೀರಿ. ನೋಡಿ ಸೀಮಿತವಾಗಿ ಮಾತನಾಡಿ ಎಂದು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೇಳಿ

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:—ಅಧ್ಯಕ್ಷರೇ, ಈ ಸದನದಲ್ಲಿ ಎಲ್ಲರಿಗೂ ಸರಿಯಾದ ನ್ಯಾಯ ಸಿಗಬೇಕಾಗುತ್ತದೆ. ಏತಕ್ಕೆಂದರೆ ಶ್ರೀನಿವಾಸ್ ಅವರು......

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ,—ಪಾಯಿಂಟ್ ಆಫ್ ಆರ್ಡರ್ ಇವರೂ ಎತ್ತಿದ್ದಾರೆ. ಈ ಬಗ್ಗೆ ನ್ಯಾಯುವಾದ ತೀರ್ಮಾನವನ್ನು ತಾವು ದಯಪಾಲಿಸಬೇಕು. ಏತಕ್ಕೆಂದರೆ ರಮೇಶ್‌ಕುಮಾರ್ ಅವರು ಪ್ರಿವಿಲೈಜ್ ಮೋಷನ್‌ನಲ್ಲಿ ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ಅನುಮತಿ ಕೊಟ್ಟಿದ್ದೀರಿ. ನಾವೂ ಕೂಡ ಅದಕ್ಕೆ ಆಕ್ಷೇಪಣೆ ಮಾಡಲಿಲ್ಲ. ಅನುಮತಿ ಕೊಟ್ಟ ಮೇಲೆ ಅವರು ಎದ್ದುನಿಂತು ನಡವಳಿಕೆ, ಪ್ರಿವಿಲೈಜ್ ಮೋಷನ್ ಟೆಕ್ಸ್ಟ ತಮ್ಮ ಮುಂದೆ ಓದಿದರು. ಅದಕ್ಕೂ ಆಕ್ಷೇಪಣೆ ಮಾಡಲಿಲ್ಲ. ಆಮೇಲೆ ಆ ವಿಚಾರವನ್ನು ಬಿಟ್ಟು ಬೇರೆ ವಿಚಾರಕ್ಕೆ ವಿಸ್ತರಣೆಗೆ ಹೋದಾಗ ಪಾಯಿಂಟ್ ಆಫ್ ಆರ್ಡರನ್ನು ಮಾನ್ಯ ಕೆ.ಎಚ್. ಶ್ರೀನಿವಾಸ್ ಅವರು ಎತ್ತಿದರು. ಸಂಪೂರ್ಣವಾಗಿ ರೂಲ್ಸ್ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ಎತ್ತಿದ ಮೇಲೆ ತಾವು ಅದಕ್ಕೆ ರೂಲಿಂಗ್ ಕೊಡಬೇಕು. ರೂಲಿಂಗ್ ಕೊಟ್ಟರೆ ಸಾಕಾಗುವುದಿಲ್ಲ. ರೂಲಿಂಗ್ ಪ್ರಕಾರ ಸನ್ಮಾನ್ಯ ಸದಸ್ಯರು ವರ್ತನೆ ಮಾಡತಕ್ಕ, ನಡೆದುಕೊಳ್ಳತಕ್ಕ ನೀತಿಯನ್ನು ಪಾಲಿಸಬೇಕಾಗುತ್ತದೆ. ರೂಲಿಂಗ್ ಕೊಟ್ಟು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಒಂದು ವೇಳೆ ಸನ್ಮಾನ್ಯ ಸದಸ್ಯರು ಎದ್ದು ನಿಂತು ಹಿಂದೆ ನಡೆದಂಥ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ರೂಲಿಂಗ್ ಕೊಟ್ಟಿದ್ದರೆ ಮತ್ತು ಆ ನೀತಿಯನ್ನು ಪಾಲಿಸಿದ್ದರೆ ಈ ಪ್ರಶ್ನೆ ಉದ್ಭವ ...

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರ ಅಭಿಪ್ರಾಯ ಏನು? ಅವರು ರಾಜೀನಾಮೆ ಕೊಡುತ್ತಾರಾ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ರೂಲಿಂಗ್ ಕೊಟ್ಟ ಮೇಲೆ ಹಿರಿಯ ಸಚಿವರು ಹೇಳುವುದು ಉದ್ಭವವಾಗುವುದಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಬಾಯಿ ಮುಚ್ಚಿಕೊಂಡು ಕೂತಿದ್ದಾರೆ ಅವರು.

(ಗೊಂದಲ)

ಅಧ್ಯಕ್ಷರು.—ಬೊಮ್ಮಾಯಿಯವರು ಮಾತನಾಡಲಿ. ನಾರಾಯಣಕುಮಾರ್ ಏನ್ರಿ ನಿಮ್ಮದು?

ಶ್ರೀ ಎಂ.ಎಸ್. ಪಾಟೀಲ್.—ಅಧ್ಯಕ್ಷರೇ...

ಅಧ್ಯಕ್ಷರು.—ನಿಮ್ಮದು ಪೆಂಡಿಂಗ್ ಇದೆ, ನಿಮ್ಮದು ಪೆಂಡಿಂಗ್ ಇಟ್ಟು ಅವರಿಗೆ, ಮೊಯಿಲಿಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಸದನ ನಡೆಸುವುದಕ್ಕೆ ಈ ಕಡೆ ಅನುಭವಸ್ಥರ ಆ ಕಡೆ ಅನುಭವಸ್ಥರ ಅಭಿಪ್ರಾಯ ಬೇಕಾಗುತ್ತದೆ,

ಶ್ರೀ ಕೆ, ಎಚ್, ಶ್ರೀನಿವಾಸ್.—ನನ್ನ ಕ್ರಿಯಾಲೋಪದ ಮೇಲೆ ತಾವು ರೂಲಿಂಗ್ ಕೊಟ್ಟಿಲ್ಲ, ಎರಡು ವಿಷಯ ನಾನು ಎತ್ತಿದ್ದೇನೆ. ಒಂದು...

ಅಧ್ಯಕ್ಷರು.—ದಯವಿಟ್ಟು ಕೂರಿ, ಮೊಯಿಲಿಯವರು ಯಜಮಾನರು, ಅನುಭವಸ್ಥರು ಎಂದು ಕೇಳಿದ್ದೇನೆ. ಅದೇ ಪ್ರಕಾರ ಬೊಮ್ಮಾಯಿಯವರು ಅನುಭವಸ್ಥರು, ಸೀನಿಯರ್ ಪಾರ್ಲಿಮೆಂಟೇರಿಯನ್ ಅವರು ಹೇಳಿದ್ದೂ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಕೆ.ಎಚ್.ಶ್ರೀನಿವಾಸ್ ಅವರು ವಿಧಿ ಬಿಂದು ಎತ್ತಿದಾಗ ನನ್ನ ತಿಳುವಳಿಕೆ ಮಟ್ಟಿಗೆ ಅದರ ಬಗ್ಗೆ ನಿರ್ಣಯವನ್ನು ಕೊಟ್ಟಿದ್ದೀರಿ. ಆಮೇಲೆ ಮಾನ್ಯ ಸದಸ್ಯರಾದ ಕೃಷ್ಣನ್ ಅವರು ವಿಧಿಬಿಂದು ಎತ್ತಿದ್ದಾರೆ. ಅದರ ಬಗ್ಗೆ ತಮ್ಮ ತೀರ್ಪನ್ನು ಕೊಡ ಬೇಕಾಗುತ್ತದೆ. ಕೃಷ್ಣನ್ ಅವರು ಎತ್ತಿದ್ದು ಟೇಪ್ ಇಲ್ಲಿ ತೋರಿಸಬಹುದೇ ಎಂದು. ಪ್ರಿವಿಲೈಜ್ ಮೋಷನ್ ಹೇಳುವಾಗ ಟೇಪ್ ತೋರಿಸಬಹುದೇ, ಅದು ರಿಲೆವೆಂಟೆ? ಅದರ ಬಗ್ಗೆ ತೀರ್ಪು ಕೊಡಿ ಎಂದು ಹೇಳಿದ್ದಾರೆ. ಈ ಸದನದಲ್ಲಿ ಹಿಂದೆ ಕೂಡ ನಡೆದಿರುವಂಥ ನಡವಳಿಕೆಯನ್ನು ನೋಡಿದರೆ ತಮ್ಮ ವಾದವನ್ನು ಸಮರ್ಥಿಸುವುದಕ್ಕೆ ಸದಸ್ಯರು ಟೇಪ್ ಕೊಡಬಹುದು, ಪೇಪರ್ ಕಟಿಂಗ್ ಕೊಡಬಹುದು, ಬೇರೆ ಡಾಕ್ಯುಮೆಂಟ್ ಕೊಡಬಹುದು...

(ಗೊಂದಲ)

ಶ್ರೀ ಎಂ.ಎಸ್. ಪಾಟೀಲ್.—ಬಹಳ ಹಳೆಯ ಸಂಪ್ರದಾಯ ಹಾಕುತ್ತಿದ್ದಾರೆ ಅವರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂಥ ಸಂದರ್ಭದಲ್ಲಿ ಸಭಾಪತಿಗಳೇ, ತಮ್ಮ ಚೇಂಬರ್‌ನಲ್ಲಿ ಆ ಕಡೆ ಮತ್ತು ಈ ಕಡೆಯ ಸದಸ್ಯರನ್ನು ಕರೆದು ಆ ಟೇಪನ್ನು ಪ್ಲೇ ಮಾಡಿ ಕೇಳಿ ಮುಂದೆ ನಿರ್ಣಯ ಕೊಟ್ಟ ಉದಾಹರಣೆಗಳೂ ಇವೆ. ತಾವೂ ಕೂಡ...

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಿವಿಲೈಜ್ ಮೋಷನ್‌ಗೆ ಏನು ರಿಲೆವೆನ್ಸ್ ಇದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಟೇಪ್‌ನಲ್ಲಿ ಏನಿದೆಯೋ ನನಗೆ ಗೊತ್ತಿಲ್ಲ. ಪ್ರಿವಿಲೈಜ್ ಮೋಷನ್‌ಗೆ ಸಂಬಂಧಪಟ್ಟ ವಿಚಾರಗಳು ಅಲ್ಲಿದ್ದರೆ ಕೇಳಬೇಕಾಗುತ್ತದೆ.

ಆ ಟೇಪ್‌ನಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ನನಗೂ ಗೊತ್ತಿಲ್ಲ. ಅವರಿಗೆ ಗೊತ್ತಿರಬಹುದು. ಯಾವುದೇ ಟೇಪ್ ಕೇಳಬೇಕು ಎಂದು ಆ ವಿಚಾರದ ಬಗ್ಗೆ ಹೇಳಿದಾಗ ತಾವು ೫–೭ ಜನ ಸದಸ್ಯರನ್ನು ತಮ್ಮ ಛೇಂಬರ್‌ನಲ್ಲಿ ಕರೆದು ಆ ಟೇಪನ್ನು ಪ್ಲೇ ಮಾಡತಕ್ಕದು ಮತ್ತು ಕೇಳುವುದಕ್ಕೆ ಅವಕಾಶ ಮಾಡಿಕೊಡಿ. ಅದು ಬಂಗಾರಪ್ಪನವರ ಧ್ವನಿಯೋ ? ಯಾರ ಜೊತೆ ಮಾತನಾಡಿದ್ದಾರೋ ಕೇಳಿ. ಆ ಕಡೆ ಸದಸ್ಯರು, ಈ ಕಡೆ ಸದಸ್ಯರು ಕೇಳಲಿ.

(ಗೊಂದಲ)

ಶ್ರೀ ಎಂ.ಎಸ್. ಪಾಟೀಲ್.—ಈ ವಿಷಯಕ್ಕೆ ಏನು ಸಂಬಂಧ ಇದೆ ?

ಅಧ್ಯಕ್ಷರು.—ಕೇಳಿ

ಶ್ರೀ ಎಂ. ಎಸ್. ಪಾಟೀಲ್.—ಸದನವನ್ನು ಬೇರೆ ದಾರಿಗೆ ಎಳೆಯುವುದು ಸರಿಯಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನನ್ನ ಸಲಹೆ ಇಷ್ಟು ಟೇಪ್ ಆಧಾರದಿಂದ ಹೇಳೋಣ. ತಮ್ಮ ಛೇಂಬರ್‌ನಲ್ಲಿ ಪ್ಲೇ ಮಾಡುವುದಕ್ಕೆ ಅವಕಾಶ ಕೊಡಿ. ಆ ಕಡೆ ಸದಸ್ಯರು, ಈ ಕಡೆ ಸದಸ್ಯರು ಕೇಳಿ ರಿಲೆವೆಂಟ್ ಅಲ್ಲದಿದ್ದರೆ ಆಮೇಲೆ ನಿರ್ಣಯ ಕೊಡಬಹುದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಜನತಾ ಸರ್ಕಾರದ ಬಂಡವಾಳವಾಗಿರುವ, ಬಾಟ್ಲಿ ಟೇಪಾ? ಅದು ಒಳ್ಳೆ ಕೆಲಸ ಏನೂ ಇಲ್ಲ...

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಇದು ನಿಮ್ಮ ಯೋಗ್ಯತೆ ತೋರಿಸುತ್ತದೆ. ನೀವೇನು, ನಿಮ್ಮ ಕಥೆ ಏನು ಎಂದು ತೋರಿಸುತ್ತಿದೆ.

Sri K, B. Shanappa.—Mr. Speaker, you should study the tape becauseeach and every time he is showing it.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿರ ತಕ್ಕ ಸಂದರ್ಭದಲ್ಲಿ ಎರಡು ಮಾತು ಹೇಳಿದ್ದೆ. ಒಂದು, ಸ್ಟೇಟ್‌ಮೆಂಟ್ ಬ್ರೀಫ್ ಆಗಿರಬಹುದು, ಇನ್ನೊಂದು, ಯಾವ ವಿಷಯ ಎತ್ತಿದ್ದಾರೋ ಅದಕ್ಕೆ ರಿಲೆವೆಂಟ್ ಆಗಿರಬಹುದು. ರಮೇಶ್‌ಕುಮಾರ್ ಅವರ ಥೀಸಿಸ್, ಅವರು ಹೇಳುತ್ತಾ ಇರತಕ್ಕದ್ದು ಬಂಗಾರಪ್ಪನವರು ಪ್ರಯೋಗ ಮಾಡಿರುವ ವಾಕ್ಯ ಅದು ಸರಿಯಾದ ವಾಕ್ಯ ಅಲ್ಲ, ಅವಾಚ್ಯ ಶಬ್ದಗಳೆಂದು ಹೇಳಬೇಕು, ಅದನ್ನು ತಮಗೆ ಮನವರಿಕೆ ಮಾಡಿಕೊಡುವ ಹಂತದಲ್ಲಿ ಅವರ ವಾದ ಇತ್ತು. ಆ ಹಂತದಲ್ಲಿ ಅವರು ಪ್ರಯೋಗ ಮಾಡಿರತಕ್ಕ ವಾಕ್ಯಗಳನ್ನು ಇಟ್ಟುಕೊಂಡು ಅದು ಅವಾಚ್ಯವಾದುದು, ಈ ಸದನಕ್ಕೆ ಅಗೌರವವಾದುದು ಎಂದು ಮನವರಿಕೆ ಮಾಡಿಕೊಡುವುದಕ್ಕೆ ವಾದ ಮಾಡಿದರು, ನಾವು ತಾಳ್ಮೆಯಿಂದ ಕೇಳುವುದಕ್ಕೆ ತಯಾರಿದ್ದೇವೆ. ಆದರೆ ಅವರ ಮಾತಿನ ಮೇಲೆ ಹೇಳುವುದಾದರೆ ಯಾವ ಥೀಸಿಸ್ ಬಿಲ್ಡ್ ಅಪ್ ಮಾಡುತ್ತಿದ್ದಾರೆಂದರೆ ಬಂಗಾರಪ್ಪನವರಿಗೆ ಅವಾಚ್ಯವಾಗಿ ಮಾತನಾಡುವ ಅಭ್ಯಾಸ ಇದೆ ಎಂದು ತೆಗೆದುಕೊಂಡು ಅನಂತರ...

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಅದಕ್ಕೆ ಸಂಬಂಧಪಟ್ಟ ಟೇಪ್ ತೆಗೆದುಕೊಂಡು putting forth such an argument is not admissible in support of this privilege motion ಆ ರೀತಿಯ ವಾದಕ್ಕೆ ಅವಕಾಶ ಕೊಡಬಾರದೆಂದು ತಮ್ಮನ್ನು ನಾನು ಒತ್ತಾಯಪಡಿಸುತ್ತೇನೆ.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರು ಎಷ್ಟು ಬೇಕಾದರೂ ಹೇಳಲಿ; ಅಂಜಿಕೆ ಇಲ್ಲ, ಸ್ವಾಭಾವಿಕವಾಗಿ ಕೂಡ ಅವಾಚ್ಯ ಎಂದು ಹೇಳುವುದಕ್ಕೆ ಸರಿಯಿಲ್ಲ.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ವೆಂಕಟರಾಮಯ್ಯನವರು ಮಾತನಾಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ನಿಯಮ ೧೯೧ ಈ ರೀತಿ ಹೇಳುತ್ತದೆ.

೧೯೧. ಹಕ್ಕು ಭಾಧ್ಯತೆ ಪ್ರಶ್ನೆ ಸಂಬಂಧದಲ್ಲಿ ಸೂಚನಾ ಪತ್ರ :

ಹಕ್ಕು ಬಾಧ್ಯತೆ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು, ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಸೂಚನಾ ಪತ್ರವನ್ನು ಕೊಡತಕ್ಕದ್ದು. ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದರೆ, ಸೂಚನಾ ಪತ್ರ ದೊಂದಿಗೆ ಸಂಬಂಧಪಟ್ಟ ದಸ್ತಾವೇಜು ಇರತಕ್ಕದು,

ಇಲ್ಲಿ ಆ ಟೇಪ್‌ನಲ್ಲಿ ಗಹನವಾದ ವಿಚಾರ ಇದೆ ಎಂದು ಹೇಳುತ್ತಿದ್ದಾರೆ. ಟೇಪ್ ಬಗ್ಗೆ ಕರ್ನಾಟಕದಲ್ಲಿ ಚರಿತ್ರೆ ಉಂಟು. ಅದರ ಒಳಗೆ ಏನು ಇದೆಯೋ ಅದು ನಮಗೆ ಗೊತ್ತಿಲ್ಲ. ಅದರಲ್ಲಿ ಗಹನವಾದ ಸಮಸ್ಯೆಗಳು ಇರಬಹುದು. ಇದು ಬಹಳ ಗಂಭೀರವಾದ ಸಮಸ್ಯೆ ಎಂದು ಹೇಳುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಏನು ಹೇಳುತ್ತಿದ್ದಾರೆ...

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅದು ಪ್ರೂವ್ ಆದಮೇಲೆ ಕೆಲವೆಂಟೋ ಇಲ್ರೆಲವೆಂಟೋ ತೀರ್ಮಾನ ಮಾಡಿ.

(ಗೊಂದಲ)

ಅಧ್ಯಕ್ಷರು.— ಈಗ ಜೆ. ಹೆಚ್. ಪಟೇಲ್ ಅವರು ಏನೋ ಹೇಳುವವರಿದ್ದಾರೆ. ಅದನ್ನು ಹೇಳಲಿ.

(ಗೊಂದಲ)

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ರಮೇಶ್ ಕುಮಾರ್ ಅವರು ಪ್ರಿವಲೇಜ್ ಮೋಷನ್ ಕಳುಹಿಸಿ ಮಾನ್ಯ ವಿರೋಧ ಪಕ್ಷದ ನಾಯಕರು ಆ ದಿನ ಉಪಯೋಗ ಮಾಡಿದ ಶಬ್ದಗಳ ಬಗ್ಗೆ ಸದನದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಾ ಯಾವುದೋ ಒಂದು ಟೇಪ್ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಶ್ರೀನಿವಾಸ್ ಅವರು ಎತ್ತಿರತಕ್ಕ ಕ್ರಿಯಾಲೋಪ ಒಂದು ದೃಷ್ಟಿಯಿಂದ ಸರಿ ಇದೆ. ಅದನ್ನು ತಳ್ಳಿಹಾಕುವುದಿಲ್ಲ. ಆದರೆ ಸದನದ ಮುಂದೆ ಇವತ್ತು ನನಗೆ ಗೊತ್ತಿರುವ ಹಾಗೆ ಎರಡು ನೋಟೀಸ್‌ಗಳು ಇವೆ. ನಿಯಮ ೩೦೧ರ ಕೆಳಗೆ ವಿರೋಧ ಪಕ್ಷದವರಿಂದ ಒಂದು ಮೋಷನ್ ಬಂದಿದೆ. ಮತ್ತೆ ರಮೇಶ್ ಕುಮಾರ್ ಅವರಿಂದ ಒಂದು ಮೋಷನ್ ಬಂದಿದೆ. ಮಾನ್ಯ ಗೃಹ ಸಚಿವರಾದ ರಾಚಯ್ಯ ನವರು ಸದನದಲ್ಲಿ ಮಂಡಿಸಿದ ದಿವಂಗತ ನಂದಕುಮಾರ್ ಅವರ ಹೇಳಿಕೆ ಪ್ರಕಾರ ಮಾನ್ಯ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರು ರಂಗನಾಥ್ ಅವರ ಮೇಲೆ ಹಲ್ಲೆಗೆ ಕಾರಣ ಎನ್ನುವ ಆಪಾದನೆ. ಆ ಆಪಾದನೆಯಿಂದ ಉದ್ಭವವಾಗಿರುವ ಸ್ಥಿತಿಯನ್ನು ಚರ್ಚೆ ಮಾಡಬೇಕೆಂದು ನಿಯಮ ೩೦೧ರ ಕೆಳಗೆ ವಿರೋಧ ಪಕ್ಷದವರು ಸೂಚನೆ ಕಳುಹಿಸಿದ್ದಾರೆ. ಆದುದರಿಂದ ನಿಯಮ ೩೦೧ರ ಪ್ರಕಾರ ನೀವು ಇಲ್ಲಿ ತೀರ್ಮಾನ ಕೊಟ್ಟಾಗ ಆಗ ಅವರು ಟೇಪನ್ನು ನಿಮಗೆ ಕೊಡಬೇಕೆಂದೇನೂ ಇಲ್ಲ, ಈಗಲೇ ತಾವು ಅದನ್ನು ತೆಗೆದುಕೊಂಡು ತಮ್ಮ ಛೇಂಬರ್‌ನಲ್ಲಿ ಪ್ಲೇ ಮಾಡಬಹುದು. ಈಗ ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದು ಬೇಡ.

ಅಧ್ಯಕ್ಷರು.—ಈಗ ನಾನು ೩೦೧ರ ಮೋಷನ್ ತೆಗೆದುಕೊಂಡಿಲ್ಲ. ಈಗ ತೆಗೆದುಕೊಂಡಿರುವುದು ಪ್ರಿವಿಲೇಜ್ ಮೋಷನ್. ೩೦೧ನ್ನು ತೆಗೆದುಕೊಂಡಾಗ ಆಗ ಹೇಳಲಿ. ಅದನ್ನು ಆಗ ನೋಡೋಣ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದಕ್ಕೆ ಸಂಬಂಧ ಇಲ್ಲ ಪಿವಿಲೇಜ್ ಮೋಷನ್ ಬಗ್ಗೆ ಮಾತನಾಡಲಿ ಎಂದು ಹೇಳುತ್ತಿದ್ದಾರೆ ನಿಯಮ ೩೦೧ರ ಪ್ರಕಾರ ಈಗ ಮಾತನಾಡುವ ಹಾಗೆ ಇಲ್ಲ.

ಅಧ್ಯಕ್ಷರು.—ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಾದರೆ ಮಾನ್ಯ ರಮೇಶ್‌ಕುಮಾರ್ ಅವರು ಇಲ್ಲಿಯವರೆಗೆ ಮಾತನಾಡಿದ್ದನ್ನು ಎಕ್ಸ್‌ಪಂಜ್ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ನೋಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದೆಲ್ಲಾ ಎಕ್ಸ್‌ಪಂಜ್ ಆಗಲೇಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಟೇಪನ್ನು ತೋರಿಸಿದ ಮೇಲೆ ಅದನ್ನು ಮತ್ತೆ ಒಳಗೆ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. It it the Property of the House. He has got to pass it on to the Speaker. ಇಲ್ಲದಿದ್ದರೆ ಅದನ್ನು ರೀಪ್ಲೇಸ್ ಮಾಡುವುದಕ್ಕೆ ಅವಕಾಶ ಇದೆ. I do not know.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಟೇಪನ್ನು ಯಾರದಾದರೂ ಕುತ್ತಿಗೆಗೆ ಕಟ್ಟಿ ಜನತಾ ಟೇಪ್ ಎಂದು ಮಾಡಲಿ,

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಟೇಪನ್ನು ತಾವು ತರಿಸಿಕೊಳ್ಳಬೇಕು. ಅದನ್ನು ತರಿಸಿಕೊಳ್ಳದೇ ಇದ್ದರೆ it again becomes the violation of the Rules of procedure ಅವರು ರೆಕಾರ್ಡ್ ತೋರಿಸಿದರೆ ಅದನ್ನು ಅವರು ಇಟ್ಟುಕೊಳ್ಳುವ ಅಧಿಕಾರ ಇಲ್ಲ. If anybody has got a document to pass it on. ದಯಮಾಡಿ ತಮಗೆ ಟೇಪನ್ನು ಪಾಸ್ ಮಾಡಲಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ಟೇಪನ್ನು ತಮಗೆ ಕೊಡಬೇಕೆಂದು ಯಾವ ರೂಲ್ಸ್‌ನಲ್ಲಿ ಇದೆ ?

SRI M. S. KRISHNAN.—It becomes the property of the House.

ಶ್ರೀ ಯು. ಭೂಪತಿ.—ಅದರಲ್ಲಿ ಏನು ಇದೆ ಎಂದು...

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಈ ಬ್ಯಾಗನ್ನು ತೋರಿಸುತ್ತೇನೆ. ಅದನ್ನು ತಮ್ಮ ಕಸ್ಟಡಿಗೆ ತೆಗೆದುಕೊಳ್ಳುತ್ತೀರಾ ?

(ಗೊಂದಲ)

ಶ್ರೀ ಪಂಪಾಪತಿ.—ಅದರ ಒಳಗೆ ಪಿಸ್ತೂಲು ಇದೆ ಎಂದು ಹೇಳಿದರೆ ಅದನ್ನು ಕಸ್ಟಡಿಗೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಯಾವುದೇ ವಿಷಯ ಚರ್ಚೆ ಆಗುವ ಕಾಲದಲ್ಲಿ ಸದನದ ಮುಂದೆ...

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ಮಾನ್ಯ...

ಅಧ್ಯಕ್ಷರು.—ಈಗ ಜೆ. ಎಚ್. ಪಟೇಲ್ ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ತಮ್ಮ ಮಾತನ್ನು ಮುಗಿಸಲಿ.

ಶ್ರೀ ಜೆ. ಎಚ್. ಪಟೇಲ್.—ಯಾವುದೇ ವಿಷಯ ಪ್ರಸ್ತಾಪ ಆಗುವಾಗ ಆ ವಿಷಯಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು, ಯಾವುದೇ ದಸ್ತಾವೇಜುಗಳು ಇದ್ದರೆ ಅದನ್ನು ಟೇಬಲ್ ಮೇಲೆ ಇಡಬೇಕು, ಸದಸ್ಯರಿಗೆ ಇಡಲು ಇಚ್ಛೆಯಿಲ್ಲದಿದ್ದಲ್ಲಿ ತಾವು ಕೂಡಾ ತರಿಸಿ ಇಟ್ಟುಕೊಳ್ಳಬಹುದು. ತಮ್ಮ ಆಜ್ಞೆ ಪ್ರಕಾರ—

(ಗೊಂದಲ)

ಶ್ರೀ ಜಿ. ಎಂ. ಕಾನಡೆ.—ನನ್ನದೊಂದು ಕ್ರಿಯಾಲೋಪ ಇದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಮಾನ್ಯ ಸಚಿವರಾದ ಕೆ.ಎಚ್. ಪಟೇಲರು ಎತ್ತಿದ್ದಾರೆ. ಮಾನ್ಯ ಸದಸ್ಯರು ಏನು ಟೇಪನ್ನು ತೋರಿಸಿದರು ಅದನ್ನು ತಮ್ಮ ಕಸ್ಟಡಿಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈಗ ತಮ್ಮ ಮುಂದೆ ಏನು ಪ್ರಿವಿಲೇಜ್ ಮೋಷನ್ ಬಗ್ಗೆ ಕಾರ್ಯಕಲಾಪ ಇದೆ ಅದು ತಮಗೆ ಗೊತ್ತಿದೆ. ಅದೂ ಕೂಡಾ ಸದನದ ಹೊರಗಡೆ ನಡೆದ ಬಗ್ಗೆ ಪ್ರಸ್ತಾಪ ಇಲ್ಲ. ಹೊರಗಡೆ ಏನು ನಡೆಯಿತು ಎಂದರೆ ಡಾಕ್ಯುಮೆಂಟ್ ಪ್ರೊಡ್ಯೂಸ್ ಮಾಡುವುದಕ್ಕೆ ಅದು ಬೇರೆ ವಿಷಯ ಆಗುತ್ತದೆ, ಯಾವುದರ ಮೇಲೆ ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಈ ಸದನದಲ್ಲಿ ಕಳೆದ ೨೭ನೇ ತಾರೀಖು ಏನು ಕಾರ್ಯಕಲಾಪಗಳು ನಡೆದಿವೆ ಎಂಬುದು ರೆಕಾರ್ಡ್‌ನಲ್ಲಿ ಇದೆ, ಸನ್ಮಾನ್ಯ ಸದಸ್ಯರಾದ ರಮೇಶ್ ಕುಮಾರ್ ಅವರೂ ಕೂಡಾ ಅದನ್ನು ಓದಿದ್ದಾರೆ ಹಾಗೂ ವಿಚಾರ ಮಾಡಿದ್ದಾರೆ. ಅದರ ಸ್ಪಷ್ಟವಾದ ಸ್ವರೂಪ ತಮ್ಮ ಮುಂದೆ ಇದೆ. ಅದಕ್ಕೆ ಸಂಬಂಧಪಟ್ಟ ದಸ್ತಾವೇಜನ್ನು ಲಗ್ತಾಕರಿಸಬೇಕೆಂದು ಮಾನ್ಯ ವೆಂಕಟರಾಮಯ್ಯನವರು ಹೇಳಿದ ಪ್ರಕಾರ ನಿಯಮ ೧೯೧ರಲ್ಲಿ ನಮೂದಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಸ್ತಾವೇಜು ಇದೇ ೨೭ನೇ ತಾರೀಖು ಸದನದಲ್ಲಿ ನಡೆದ ರೆಕಾರ್ಡ್. ಅವತ್ತು ಇಲ್ಲಿ ನಡೆದಂತಹ ಪ್ರೊಸೀಡಿಂಗ್ಸ್ ನಿಮ್ಮ ಕಸ್ಟಡಿಯಲ್ಲೇ ಇದೆ. ಹೊರಗಿನವರು ಅದನ್ನು ತಮ್ಮ ಕಸ್ಟಡಿಗೆ ಒಪ್ಪಿಸತಕ್ಕ ಪ್ರಶ್ನೆ ಅಲ್ಲ. ತಾವು ಏನು ರೆಕಾರ್ಡ್ ಮಾಡಿದ್ದೀರಿ ಅದಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ಅವರದ್ದು ಬೇರೆ ವರ್ಷನ್ ಇದ್ದರೆ ಅದನ್ನು ಅವರು ಕೊಡಬಹುದು. ಟೇಪ್‌ರೆಕಾರ್ಡ್ ಮಾಡಿದ ಪ್ರೊಸೀಡಿಂಗ್ಸ್, ಟೇಪ್‌ರೆಕಾರ್ಡ್ ತಮ್ಮ ಕೈಯ್ಯಲ್ಲೇ ಇದೆ. ಆದುದರಿಂದ ಆ ಸಂಬಂಧವಾಗಿ ಇನ್ನೊಂದು ಟೇಪ್ ರೇಕಾರ್ಡನ್ನು ತೆಗೆಯತಕ್ಕ ಪ್ರಶ್ನೆ ಬರುವುದಿಲ್ಲ. ಆದುದರಿಂದ ಇನ್ನೇನಾದರೂ ದಸ್ತಾವೇಜು ಇದ್ದರೆ ನಿಯಮ ೧೯೧ರ ಪ್ರಕಾರ...

ಶ್ರೀ ಜಿ. ನಾರಾಯಣಕುಮಾರ್.—ಅವರಿಗೆ ಈ ಬಗ್ಗೆ ಏಕೆ ಗಾಬರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಯಮ ೧೯೧ರ ಪ್ರಕಾರ ಏನು ಹೇಳಿದ್ದಾರೆ ಎಂದರೆ.—

"ಹಕ್ಕು ಬಾಧ್ಯತೆ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು, ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕೆ

ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಸೂಚನಾ ಪತ್ರವನ್ನು ಕೊಡತಕ್ಕದ್ದು. ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದಲ್ಲಿ, ಸೂಚನಾ ಪತ್ರದೊಂದಿಗೆ ಸಂಬಂಧಪಟ್ಟ ದಸ್ತಾವೇಜು ಇರತಕ್ಕದ್ದು.''

ಇದು ತಮ್ಮಲ್ಲೇ ಇದೆ. ಇದಕ್ಕೆ ಪೂರಕವಾಗಿ ಏನಾದರೂ ಕೊಡುವುದಕ್ಕೆ ಇದೆಯೇ ? Are you investigating into the criminal motive of that ? ಇಂತಹ ಪ್ರಶ್ನೆ ಉದ್ಭವ ವಾಗುವುದಿಲ್ಲ. ಆದುದರಿಂದ ನಿನ್ನೆ ದಿವಸ ಏನು ನಿರ್ಣಯವನ್ನು ಕೊಟ್ಟಿದ್ದೀರಿ ಅದರ ಬಗ್ಗೆ ಪುನರ್ ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ದಿವಸ ದಿವಸಕ್ಕೆ ಹೊಸ ಹೊಸ ಸಂಪ್ರದಾಯ ಹಾಕುತ್ತಿರುವುದು ಸರಿಯಲ್ಲ. ಪ್ರಿವಿಲೇಜ್ ಮೋಷನ್‌ಗೆ ಸೀಮಿತವಾಗಿ ಅವರಿಗೆ ಅವಕಾಶವನ್ನು ಕೊಟ್ಟಿದ್ದೀರಿ. ನಮಗೂ ಅವಕಾಶ ಕೊಡಬೇಕು. ಇದಕ್ಕೆ ಅನುಮತಿಯನ್ನು ಕೊಡುವುದಕ್ಕೆ ಅವಕಾಶವಿಲ್ಲವೆಂದು ಹೇಳುವುದಕ್ಕೆ ಸಾಕಷ್ಟು ಪುರಾವೆ ಇದೆ. ದಸ್ತಾವೇಜುಗಳು ನನ್ನ ಹತ್ತಿರ ಇವೆ. ಟೇಪ್ ರೆಕಾರ್ಡ್‌ಗೆ ಸಂಬಂಧಪಟ್ಟ ಈ ವಿಚಾರಗಳಿದ್ದರೆ ಕಾನೂನು ಪ್ರಕಾರ, ನಿಯಮಾವಳಿಯ ಪ್ರಕಾರ ತಾವು ಇದನ್ನು ಇಲ್ಲಿ ಹೇಳಬೇಕಾಗಿದೆ. ನಿಯಮಾವಳಿಯ ಪ್ರಕಾರ ನಿಮ್ಮ ಮನವೊಲಿಸಲಿ. ಅವರು ಹೇಳಿದಂಥ ವಿಚಾರಕ್ಕೆ ನಾವು ಇನ್ನೂ ವಿರುದ್ಧವಾಗಿ ಹೇಳುವುದಕ್ಕೆ ಇದೆ. ಇದಕ್ಕೂ ತಾವು ಅವಕಾಶ ವನ್ನು ಕೊಡಬೇಕು. ಪ್ರಿವಿಲೇಜ್‌ಗೆ ಸಂಬಂಧಪಟ್ಟ ವಿಚಾರಕ್ಕೆ ದಸ್ತಾವೇಜು ಮತ್ತು ಟೇಪ್ ರೆಕಾರ್ಡ್ ಇದೆ. ಇದಕ್ಕೂ ಅವಕಾಶ ಕೊಡಬೇಕು ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಮಾತನಾಡುವುದಕ್ಕೆ ನಮಗೂ ಅವಕಾಶ ಕೊಡಬೇಕೆಂದು ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಮಾಡಿದಂಥ ವಾದವನ್ನು ನಾನು ಬಹುತೇಕ ಒಪ್ಪುತ್ತೇನೆ. ಮಾನ್ಯ ರಮೇಶ್ ಕುಮಾರ್‌ರವರು ಒಂದು ಹಕ್ಕುಬಾಧ್ಯತಾ ವಿವರವನ್ನು ಇಲ್ಲಿ ಎತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕಡತದಲ್ಲಿನ ಉದ್ಧರಣವನ್ನೂ ಅವರು ಕೊಟ್ಟಿದ್ದಾರೆ ಉಪ ನಿಯಮದ ಪ್ರಕಾರ ಅವರು ಮಾಡಬೇಕಾದ್ದನ್ನು ಮಾಡಿದ್ದಾರೆ ಮತ್ತು ಸಂಕ್ಷಿಪ್ತದಲ್ಲಿ ಯಾವರೀತಿ ತಮ್ಮ ಮತ್ತು ಈ ಮನೆಯ ಗೌರವಕ್ಕೆ ದಕ್ಕೆ ಬರತಕ್ಕ ರೀತಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ವಾಕ್ಯಗಳನ್ನು ಆಡಿದ್ದಾರೆ ಎಂಬುದನ್ನೂ ಹೇಳಿದ್ದಾರೆ. ಇನ್ನು ತಾವು ಒಂದು ನಿರ್ಣಯ ಮಾಡಬೇಕು. ಟೇಪ್‌ನಲ್ಲಿ ಏನಿದೆಯೋ ಅದು ಇದಕ್ಕೆ ಸಂಬಂಧಪಟ್ಟ ವಿಚಾರವೋ ಅಥವಾ ಅದು ಬೇರೆ ಯಾವುದೋ ಸಂದರ್ಭಕ್ಕೆ ಸಂಬಂಧಪಟ್ಟಿದ್ದೋ ನಮಗೆ ಗೊತ್ತಿಲ್ಲ. ಆದುದರಿಂದ ಈ ಟೇಪಿನ ವ್ಯವಹಾರ ಬಹುಶಃ ಈ ಸಂದರ್ಭದಲ್ಲಿ ಪ್ರಸ್ತುತ ವಾಗುವುದಿಲ್ಲ. ಆದ್ದರಿಂದ ಅವರು ಏನು ಹೇಳಿದ್ದಾರೆ ಅದರ ಬಗ್ಗೆ ನಾವು ಒಂದು ನಿರ್ಣಯವನ್ನು ಕೊಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ದಸ್ತಾವೇಜು ಎಂದರೆ ಅದಕ್ಕೆ ಸಂಬಂಧಪಟ್ಟ ಟೇಪು ಇದ್ದರೆ ಅದನ್ನೂ ತೆಗೆದುಕೊಳ್ಳಬಹುದು,

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ, ಶಕ್ಧರ್ ಅಂಡ್ ಕೌಲ್ ಪುಸ್ತಕದಲ್ಲಿರುವ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಸದಸ್ಯರಾದ ಮೊಯ್ಲಿಯವರು ಒಂದು ಮಾತನ್ನು ಹೇಳಿದರು. ಅದನ್ನು ಸಮರ್ಥನೆ ಮಾಡಿ ಮಾನ್ಯ ಮುಖ್ಯ ಮಂತ್ರಿಯವರೂ ಕೂಡ ಒಂದು ಮಾತನ್ನು ಹೇಳಿದರು. ಆ ಟೇಪಿನಲ್ಲಿ ಏನು ಇದೆಯೋ ಗೊತ್ತಿಲ್ಲ. ಅದು ನಮಗೆ ತಿಳಿದಿಲ್ಲ, ಆದ್ದರಿಂದ ನಾವು ಇದರ ಬಗ್ಗೆ ಗಮನ ಹರಿಸಬೇಕಾಗಿಲ್ಲ ಎಂದು ಹೇಳಿದರು. ಇದನ್ನೇ ಮಾನ್ಯ ಮೊಯ್ಲಿಯವರೂ ಹೇಳಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಶಕ್ಧರ್ and Kaul in Page-222 ಏನು ಹೇಳುತ್ತಿದ್ದಾರೆಂದರೆ.

"Presenting False, Forged or Fabricated Documents to the House or its Committees.

"It is a breach of privilage and contempt of the House to present false, forged or fabricated documents to either House or to a Committee there of with a view to deceive them. the necessity of preventing the production before the House of

false or fabricated document was empasised by Speaker Mavalankar in the Sinha Case when he stated in Lok Sabha·

> ...it is necessry in the first instance, to examine the genuiness or otherwise of the documents laid on the Table of the House by Dr. Sinha. Such an examination is necessary to prevent the production before the House of any documents which are not genuine or are fabricated, and to see that no member misleads intentionally or unintentionally any section of the House by referring to or placing on the Table of the House documents which are not genuine and are ultimately found to be forged or fabricated."

This is what the decision of the Lok Sabha. My feeling is, "tape" is a document. It would not have become the document if he had not spoken a few words contained in the tape. He spoke its contents. Whether he has led or misled, I don't know. But I don't want to be either led or misled or both. The honest opinion is to examine whether that particular tape produced is leading or misleading or He has spoken its contents and it becomes the property of the House. Under these circumstances and on the basis of the ruling, the tape may be taken by you and you decide in whatever manner you want. But let it not be decided based on, either what the Chief Minister said or Mr. Moily said,

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಬಹಳ ಹಳೆಯ ಸದಸ್ಯರು ಹಾಗೂ ಹಿರಿಯ ಸದಸ್ಯರು. ಅವರು ಈಗ ಹೇಳಿದಂಥ ಮಾತು ಅಷ್ಟೊಂದು ಸರಿಯಾದಂದಲ್ಲವೆಂದು ನನ್ನ ಭಾವನೆ ಈಗ ನನ್ನ ಹತ್ತಿರ ಒಂದು ಡಾಕ್ಯುಮೆಂಟ್ ಇದೆ. ಅದು ನನ್ನ ಹತ್ತಿರ ಇದೆ ಎಂದ ಕೂಡಲೇ ಅದು ಈ ಮನೆಯ ಪ್ರಾಪರ್ಟಿಯಾಗುವುದಿಲ್ಲ. ಡಾಕ್ಯುಮೆಂಟ್‌ನಲ್ಲಿರುವುದನ್ನು ಓದಿ ಹೇಳಿದನಂತರ ಅದು ಈ ಮನೆಯ ಪ್ರಾಪರ್ಟಿಯಾಗುತ್ತದೆ.

(ಗೊಂದಲ)

ಶ್ರೀ ಯಂ. ಭೂಪತಿ.— ಟೇಪ್‌ನಲ್ಲಿರುವುದನ್ನು ಅವರು ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.— ಅವರು ಓದಿ ಹೇಳಿದಂಥ ಡಾಕ್ಯುಮೆಂಟ್ ಏನು ? ರೆಕಾರ್ಡ್ ಆದಂಥ ಸ್ಪೀಚ್‌ನ ಕಾಪಿ ಅದರ ನಕಲನ್ನು ಅವರು ಓದಿ ಹೇಳಿದ್ದಾರೆ. ಅದು ಈ ಮನೆಯ ಪ್ರಾಪರ್ಟಿಯಾಗುತ್ತದೆ. ಅಕಸ್ಮಾತ್ತಾಗಿ ತಾವು ಈ ಒಂದು ಸೂಚನೆಯ ಮೇರೆಗೆ ಇದು ಈ ಮನೆಯ ಮತ್ತು ತಮ್ಮ ಘನತೆಗೆ ಧಕ್ಕೆ ಬರತಕ್ಕಂಥಾದ್ದಾಗಿದೆ ಎನ್ನತಕ್ಕ ಆಧಾರದಮೇಲೆ ಪ್ರಿವಿಲೇಜ್ ಕಮಿಟಿಗೆ ಇದನ್ನು ರೆಫರ್ ಮಾಡಿದರೆ, ಪ್ರಿವಿಲೇಜ್ ಕಮಿಟಿಯವರು ಇದು ಅವಶ್ಯಕ ಎಂದು ಹೇಳಿದರೆ ಆಗ ಟೇಪನ್ನು ಕೊಡಬಹುದು. ಆದರೆ ಈಗ ಈ ಸಭೆಯ ಟೇಬಲ್ ಮೇಲೆ ಟೇಪನ್ನು ಇಡತಕ್ಕ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಬಿ. ಎಸ್ ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ. ನಾನು ಈ ಮನೆಯ ಸದಸ್ಯ. ನಾನು ಹಕ್ಕುಬಾಧ್ಯತಾ ನಿರ್ಣಯವನ್ನು ತಂದಿದ್ದೇನೆ. ದಯವಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನನ್ನ ಒಂದೇ ಒಂದು ಪ್ರಾರ್ಥನೆ ಏನೆಂದರೆ, ೨೭-೨-೮೭ರಂದು ಈ ಸದನದ ಕಾರ್ಯಕಲಾಪಗಳ ಬಗ್ಗೆ ಉಪಯೋಗಿಸಿರತಕ್ಕ ಶಬ್ದಗಳ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದಾರೆ. ಟೇಪ್ ರೆಕಾರ್ಡ್‌ನ ಪ್ರಸ್ತಾಪ ಮಾಡಲಿಲ್ಲ. ಅದಾದನಂತರ ಮಾನ್ಯ ರಮೇಶ್‌ಕುಮಾರ್‌ರವರು

ಮತ್ತು ಬಂಗಾರಪ್ಪನವರು ಏನು ಮಾಡಬೇಕೆಂದು ಹೇಳಿದ್ದಾರೆ, ಆ ಸಂದರ್ಭದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಅದನ್ನು ಪ್ರೊಡ್ಯೂಸ್ ಮಾಡಲಿ. ಈ ಸದನದಲ್ಲಿ ನಡೆದಂಥ ಘಟನೆಯ ಬಗ್ಗೆ ಇದು ಪ್ರಸ್ತಾಪವಾಗಿರುವುದು. ಈಗ ಆ ಪ್ರಸ್ತಾಪ ಬರುವುದಿಲ್ಲ. ಮುಂದೆ ಮಾನ್ಯ ಬಂಗಾರಪ್ಪನವರು ಹೇಳಿದಂಥ ಮಾತು ಅವಶ್ಯಕವೆಂದು ಕಂಡುಬಂದರೆ ಆಗ ತೆಗೆದುಕೊಳ್ಳಿ...

ಶ್ರೀ ರಮೇಶ್‌ಕುಮಾರ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಎತ್ತಿದಂಥ ಮತ್ತು ಮಾನ್ಯ ಶ್ರೀನಿವಾಸ್‌ರವರು ಎತ್ತಿದಂಥ ಕ್ರಿಯಾಲೋಪ...

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ, ಆ ಟೇಪಿನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರೂ ಮತ್ತು ಮಾನ್ಯ ಯಡಿಯೂರಪ್ಪನವರು ಹೇಳಿದ್ದನ್ನು ನಾನು ಕೇಳಿದೆ. ನನಗೆ ಕನ್ವಿನ್ಸ್ ಆಗಲಿಲ್ಲ. ಮಾನ್ಯ ಬಂಗಾರಪ್ಪನವರು ಅಲಿಗೇಷನ್ ಮಾಡಿದರು. ಅದರಿಂದ ಹರಿಜನರಿಗೆ ಅಪಮಾನವಾಗಿದೆ ಎಂದು ಹೇಳಿದರು. ಅದು ರೆಕಾರ್ಡ್‌ಗೆ ಹೋಗಿದೆ. ಅಂದಮೇಲೆ ಅದು ಈ ಸದನದ ಪ್ರಾಪರ್ಟಿ ಆಗುವುದಿಲ್ಲವೆ ? ಅವನ್ನು ನಾವು ನೋಡಬಾರದೆ ? ಇಲ್ಲದಿದ್ದರೆ ಅವರು ಹೇಳಿದ್ದು ತಪ್ಪು ಎಂದು ಅದನ್ನು ಎಕ್ಸ್‌ಪಂಜ್ ಮಾಡಿ, ಅದೂ ಇಲ್ಲದಿದ್ದರೆ ಆ ಟೇಪನ್ನು ತೆಗೆದುಕೊಂಡು ತಮ್ಮ ಹತ್ತಿರ ಇಟ್ಟುಕೊಳ್ಳಬೇಕಾಗುತ್ತದೆ. ಅನಂತರ ಬೇಕಾದರೆ ತಾವು ಇದನ್ನು ತೀರ್ಮಾನ ಮಾಡಿ ಇಲ್ಲದಿದ್ದರೆ ಮಾನ್ಯ ವಿರೋಧಪಕ್ಷದ ನಾಯಕರು ಈ ಸದನಕ್ಕೆ ಅಪಚಾರ ಮಾಡಿದಂತಾಗುತ್ತದೆ...

ಶ್ರೀ ಕೆ. ಹೆಚ್. ಪಾಟೀಲ್.— ಸ್ವಾಮಿ, ನಮ್ಮ ಎದುರಿಗೆ ಹಕ್ಕುಬಾಧ್ಯತಾ ನಿರ್ಣಯವನ್ನು ಇಡಿ. ನಿಯಮ ೩೦೧ ರ ಪ್ರಕಾರ ನಾಳೆ ತೆಗದುಕೊಳ್ಳುತ್ತೇವೆಂದು ಹೇಳಿದ್ದೀರಿ. ಇದು ಇವತ್ತು ಹಕ್ಕುಬಾಧ್ಯತೆಯಾಗುತ್ತದೆಯೋ ? ಇಲ್ಲವೇ ? ಎಂಬುದನ್ನು ಹೇಳಬೇಕು. ಮಾನ್ಯ ಸಭಾ ನಾಯಕರು ಮತ್ತು ಮಾನ್ಯ ವೀರಪ್ಪಮೊಯ್ಲಿಯವರೂ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಎತ್ತಿದಂಥ ವಿಚಾರ ಏನಿದೆ ಅದು ಈ ಸಂದರ್ಭಕ್ಕೆ ಬಹಳ ರೆಲಿವೆಂಟ್ ಆಗಿದೆ. ಇವತ್ತು ಅವರು ಹೇಳಿದ್ದಾರೆ. ೨೭ನೇ ತಾರೀಖು ಈ ಸದನ ನಡೆದ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಸರಿಯಾದ ಶಬ್ದವನ್ನು ಬಳಸಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

೬—೩೦ ಪಿ. ಎಂ.

ಮತ್ತೆ ಅದಕ್ಕೆ ಸೂಕ್ತವಾದ ಡಾಕ್ಯುಮೆಂಟ್ಸನ್ನು ಹಾಜರುಪಡಿಸಿದ್ದಾರೆ. ಅದಕ್ಕಿಂತ ಹೆಚ್ಚಿನ ವಿವರಣೆ ಏನು ಬೇಕು. ಈಗ ಅವರು ಹಕ್ಕುಬಾಧ್ಯತೆ ಆಗಬೇಕೆಂದು ಹೇಳುತ್ತಾರೆ. ಹಕ್ಕುಬಾಧ್ಯತೆ ಇಲ್ಲವೆಂದು ವಿರೋಧಪಕ್ಷದವರು ಹೇಳುತ್ತಾರೆ. ಅದರ ಮೇಲೆ ರೂಲಿಂಗ್ ಕೊಡತಕ್ಕಂಥ ಅಧಿಕಾರ ತಮಗೆ ಇದೆ. ಅದರ ಮೇಲೆ ವಾದ ವಿವಾದ ಬೇಕಿಲ್ಲ, ಹಕ್ಕುಬಾಧ್ಯತೆ ಇಲ್ಲ ಅಥವಾ ಇದೆ ಎಂದು ನಿರ್ಣಯ ಕೊಡತಕ್ಕಂಥ ಅಧಿಕಾರ ತಮಗೆ ಇದೆ. ಇದು ಅಲ್ಲದೆ ಹಕ್ಕುಬಾಧ್ಯತೆ ಇದೆ ಎಂದು ಈ ಸದನದ ಸದಸ್ಯರುಗಳಿಗೆ ಅನಿಸಿದರೆ ಅಷ್ಟರ ಮಟ್ಟಿಗೆ ಅದರ ವ್ಯಾಪ್ತಿಯ ಒಳಗೆ ಮಾತ್ರ ಮಾತನಾಡಬೇಕು. ಮಾನ್ಯ ಕೃಷ್ಣನ್‌ರವರು ಹಿರಿಯ ಸದಸ್ಯರು, ಅವರು ಇವತ್ತಿನದಿವಸ ಒಂದು ಮಾತನ್ನು ಹೇಳಿರತಕ್ಕಂಥದ್ದು ಏನೆಂದರೆ, ಈ ಒಂದು ಡಾಕ್ಯುಮೆಂಟ್‌ನ್ನು ಮಾನ್ಯ ಅಧ್ಯಕ್ಷರು ತಮ್ಮ ಅಬಾದಿಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದರಲ್ಲಿ ಏನು ಇದೆ, ಡಾಕ್ಯುಮೆಂಟನ್ನು ಯಾವಾಗ ತೆಗೆದುಕೊಳ್ಳಬೇಕಾಗುತ್ತದೆ if he intends to produce ಅಥವಾ ಅದನ್ನು ಆಧರಿಸಿ ಅವರು ಏನಾದರೂ ಹೇಳಿದರೆ, ವಿರೋಧಪಕ್ಷದವರು, ಯಾವ ಡಾಕ್ಯುಮೆಂಟ್ ಇರುತ್ತದೆ ಆ ಡಾಕ್ಯುಮೆಂಟನ್ನು ಓದಿ ಪೂರ್ತಿಯಾಗಿ ಹೇಳಿದ್ದರೆ, ಹೇಳಿದಂಥ ಡಾಕ್ಯುಮೆಂಟ್ ಮತ್ತೆ ಹೊರಗೆ ಹೋಗಲಿಕ್ಕೆ ಅವಕಾಶ ಕೊಡಬಾರದು. It becomes a property of the House. ಈ ದೃಷ್ಟಿಯಿಂದ ತಾವು ಟೇಪ್ ಎಂದು ಏನು ಹೇಳಿದ್ದೀರಿ ಆ ಟೇಪ್‌ನ್ನು ಓದಲಿಕ್ಕೆ ಬರುವುದಿಲ್ಲ. ಟೇಪ್ ಟೇಪ್‌ನಲ್ಲಿ ಇದೆ ಎಂದು ಹೇಳಬೇಕಾಗುತ್ತದೆ. ನಾವು ಭಗವದ್‌ಗೀತೆಯನ್ನು ಕತೆಯಲ್ಲಿ ಇದೆ ಎಂದು ಹೇಳಬಹುದೇ ಹೊರತು ಭಗ್‌ವದ್‌ಗೀತೆ ಕೊಡುವುದಕ್ಕೆ ಆಗುವುದಿಲ್ಲ. ಟೇಪ್‌ನ ಒಳಗೆ ಮಂಗ ಇದೆಯೋ ನರಿ ಇದೆಯೋ, ಅಥವಾ ನಾಯಿ ಇದೆಯೋ ಅದು ಅವರಿಗೆ ಗೊತ್ತು ಟೇಪ್ ರೆಕಾರ್ಡ್ ಇದ್ದಾಕ್ಷಣಕ್ಕೆ it cannot become the property of the House. ಈ ದೃಷ್ಟಿಯಿಂದ ಮಾನ್ಯ ಸಭಾಧ್ಯಕ್ಷರೇ, ಟೇಪ್ ಯಾವಾಗ ಉಪಯೋಗ ಮಾಡಿಕೊಳ್ಳಬೇಕು ಆವಾಗ ಉಪಯೋಗ ಮಾಡಿ

ಕೊಳ್ಳಲಿ. ಆದರೆ ಈವತ್ತಿನದಿವಸ ಈ ಸದನದ ಡಾಕ್ಯುಮೆಂಟ್ ಎಂದು ಏನು ಹಾಜರು ಮಾಡಿದ್ದಾರೆ ಅಷ್ಟರಮಟ್ಟಿಗೆ ಅವರು ಸಾಕಷ್ಟು ವ್ಯಾಪ್ತಿ ಹೇಳಿದ್ದಾರೆ. ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಈವತ್ತು ವಾಸ್ತವಿಕತೆಯನ್ನು ನೋಡಿದರೆ ಅನೇಕ ಜನ ಆ ಕಡೆಯುವರು ಮತ್ತು ಈ ಕಡೆಯುವರು ಕೂಡ ಪ್ರಿವಿಲೇಜ್ ಮಾಡುತ್ತಾರೆ. ಈ ಸದನದ ಘನತೆ ಗಂಭೀರತೆಯನ್ನು ಕಾಪಾಡುವುದು ನಿಮ್ಮ ಜವಾಬ್ದಾರಿ ಇದೆ. ತಮ್ಮ ಎದುರಿಗೆ ಇದು ಬರುವುದರೊಳಗೆ ಏನೇನು ಆಗುತ್ತದೊ. ಈವತ್ತು ಅವರೇ ಹೇಳಿದ್ದಾರೆ. ಅವರು ಪುನರಪಿ ಈ ಸದನದ ಮಹತ್ವದ ಸಮಯವನ್ನು ಅರಿತು ಕೊಳ್ಳದೆ ಈವತ್ತು ಹಕ್ಕುಬಾಧ್ಯತೆಯ ಬಗ್ಗೆ ಹೇಳಿದ್ದಾರೆ. ನಮ್ಮ ಪಕ್ಷದವರಿಗೆ ಹಕ್ಕುಬಾಧ್ಯತೆಯ ಬಗ್ಗೆ ಯಾವರೀತಿ ಇರುತ್ತದೆಯೋ ಅವರ ಪಕ್ಷದವರಿಗೂ ಅಷ್ಟರಮಟ್ಟಿಗೆ, ಅದರ ವ್ಯಾಪ್ತಿಯೊಳಗೆ ಇದು ವಿಚಾರಣೆಯಾಗಬೇಕೆಂದು ಇದೆ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೊಮ್ಮಾಯಿಯವರು ಏನು ಹೇಳುತ್ತಾರೆ ಕೇಳಿ.

(ಗೊಂದಲ)

ಶ್ರೀ ರಮೇಶ್ ಕುಮಾರ್.—ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ಏನು ಇದು, ದಯವಿಟ್ಟು ಕೇಳಿ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರೇ ತಾವು ಏನು ಹೇಳುತ್ತೀರಿ ಹೇಳಿ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ, ದಯವಿಟ್ಟು ನನಗೆ ಅವಕಾಶವನ್ನು ಕೊಡಿ. ನಾನು ಕನ್‌ಕ್ಲೂಡ್ ಮಾಡಬೇಕಾಗಿರುತ್ತದೆ. ಮಾನ್ಯ ಶ್ರೀನಿವಾಸ್‌ರವರು ಮಾತನಾಡುತ್ತಾ ......

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ಕೇಳಿ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್‌ರವರು ಸೀರಿಯಸ್ ಆಗಿರತಕ್ಕಂಥ ಕೆಲವು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಹೇಳಿರುತ್ತಾರೆ.

(ಗೊಂದಲ)

ಅಧ್ಯಕ್ಷರು.—ಹೀಗೆ ಮಾತನಾಡಿದರೆ ನಾನು ಹೇಗೆ ಸಭೆಯನ್ನು ನಡೆಸಬೇಕು, ಈಗ ಹಕ್ಕು ಬಾಧ್ಯತೆಯ ಬಗ್ಗೆ ನೀವು ನೋಟೀಸ್ ಕೊಟ್ಟಿದ್ದೀರಿ. ನೋಟೀಸ್‌ನಲ್ಲಿ ಎಲ್ಲವನ್ನು ಬರೆದಿದ್ದೀರಿ. ಆಮೇಲೆ ಡಾಕ್ಯುಮೆಂಟ್ಸ್ ಕೂಡ ಇಟ್ಟಿದ್ದೀರಿ. ಟೇಪ್‌ಗೂ ಇದಕ್ಕೂ ಸಂಬಂಧವಿಲ್ಲ. ಅದು ಬೇರೆ ಸಂದರ್ಭದಲ್ಲಿ ನೋಡತಕ್ಕಂಥದ್ದು. ಅಕಸ್ಮಾತಾಗಿ ನಾವೇ ಕೇಳಿದರೆ ಹೇಳುವವರಿದ್ದೀರಿ ಅಥವಾ ಕಮಿಟಿಗೆ ಮಾನ್ಯ ಮುಖ್ಯಮಂತ್ರಿಗಳು ರೆಫರ್‌ಮಾಡಿ ಎಂದರೆ ಕೊಡುವಿರಂತೆ. ಈಗ ಏನು ನೋಟೀಸ್ ಕೊಟ್ಟಿದ್ದೀರಿ ಆ ನೋಟೀಸ್ ಬಗ್ಗೆ ಡಾಕ್ಯುಮೆಂಟ್ಸ್ ಇಟ್ಟಿದ್ದೀರಲ್ಲ ಆ ಬಗ್ಗೆ ಅಷ್ಟು ಮಾತ್ರ ಹೇಳಿ ಮುಗಿಸಿಬಿಡಿ.

ಶ್ರೀ ರಮೇಶ್ ಕುಮಾರ್.—ಈಗ ತಾವು ಆದೇಶ ಕೊಟ್ಟಿದ್ದೀರಿ. ಮಾನ್ಯ ಸದಸ್ಯರಾದ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರು ಹೇಳಿದರು ......

ಅಧ್ಯಕ್ಷರು.—ನೀವು ಅದನ್ನು ಬಿಟ್ಟುಬಿಡಿ. ತಾವು ಕುಳಿತುಕೊಳ್ಳಿ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ, ನಾನು ಟೇಪ್ ಬಗ್ಗೆ ಹೇಳಬೇಕೋ ಬೇಡವೋ ಹೇಳಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಟೇಪ್ ಬಗ್ಗೆ, ರೇಕಾರ್ಡ್ ಆಗಿರುವ ಬಗ್ಗೆ ಹೇಳಿದ್ದರೆ ಇಲ್ಲಿ ಅದನ್ನೆಲ್ಲ ಎಕ್ಸ್‌ಪಂಜ್ ಮಾಡಿ, ಇಲ್ಲದಿದ್ದರೆ ಈ ಮನೆಯ ಗೌರವಕ್ಕೆ ಅದು ಸರಿಯಾದುದಲ್ಲ. ನಾನು ಹೇಳುತ್ತೇನೆ ಅವರು ಹೇಳಿದ್ದು, ನಾನು ಕೇಳಿದ್ದು ಏನೆಂದರೆ, ಹರಿಜನರಿಗೆ ಅಪಮಾನ ಆಗುವ ರೀತಿಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. It is a very serious charge against the Leader of the Opposition. ಅದನ್ನು ಎಕ್ಸ್‌ಪಂಜ್ ಮಾಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಎಕ್ಸ್‌ಪಂಜ್ ಮಾಡತಕ್ಕಂಥ ಅವಶ್ಯಕತೆ ಬರುವುದಿಲ್ಲ. ಏತಕ್ಕೆಂದರೆ ಮಾನ್ಯ ವಿರೋಧಪಕ್ಷದ ನಾಯಕರು ಅನ್‌ಪಾರ್ಲಿಮೆಂಟರಿ ವರ್ಡ್ಸ್ ಉಪಯೋಗಿಸಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡಬಹುದಾಗಿತ್ತು. ಆದರೆ ಅವರು ಸೀರಿಯಸ್ ಅಲಿಗೇಷನ್ ಮಾಡಿದ್ದಾರೆ. ಆ ಅಲಿಗೇಷನ್ ಪ್ರೂಫ್ ಮಾಡುವ ಜವಾಬ್ದಾರಿ ಅವರಿಗೆ ಇದೆ. ಇಲ್ಲದಿದ್ದರೆ ಇನ್ನೊಂದು ಪ್ರಿವಿಲೈಜ್ ಮೋಷನ್‌ಗೆ ಅವಕಾಶವಾಗಬಹುದು. ಎಕ್ಸ್‌ಪಂಜ್ ಮಾಡುವುದು ಯಾವಾಗ ಅಂದರೆ ಅವರು ಏನಾದರೂ ಅನ್‌ಪಾರ್ಲಿಮೆಂಟರಿ ವರ್ಡ್ಸ್‌ನ್ನು ಉಪಯೋಗಿಸಿದ್ದರೆ ಮಾತ್ರ ಎಕ್ಸ್‌ಪಂಜ್ ಮಾಡಲಿಕ್ಕೆ ಸಾಧ್ಯ. ಇಂಥಾದ್ದು ಎಕ್ಸ್‌ಪಂಜ್ ಮಾಡಲಿಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ವೆಂಕಟರಾಮಯ್ಯನವರು ತಿಳಿದುಕೊಳ್ಳದೆ ಮಾತನಾಡುತ್ತಿದ್ದಾರೆ. ನಾನು ಹೇಳುವುದು ಇಷ್ಟೇ. ಏನೆಂದರೆ, ಬ್ರೀಚ್ ಆಫ್ ಪ್ರಿವಿಲೈಜ್ ಎತ್ತುವುದಕ್ಕೆ ಅವರಿಗೆ ಅಧಿಕಾರವಿದೆ. ಅವರು ಕನ್‌ಕ್ಲೂಡ್ ಮಾಡಿದ್ದರೆ ಈ ಪ್ರಶ್ನೆ ನಾವು ಎತ್ತುವುದಕ್ಕೆ ಬರುತ್ತಿರಲಿಲ್ಲ. ಅವರು ಟೇಪ್ ವಿಚಾರ ಎತ್ತಿದುದರಿಂದ ಅದು ಬೇರೆ ರೀತಿಯಾಗುತ್ತದೆ. ಪ್ರಸ್ತಾಪ ಮಾಡಿದರೆ ಬೇರೆ ರೀತಿಯಾಗುತ್ತದೆ. ಈಗ ಅದನ್ನು ತೆಗೆದುಕೊಂಡರೆ ಅದೊಂದು ದಾರಿ. ಇಲ್ಲದಿದ್ದರೆ ಅದರಲ್ಲಿ ಇರತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿದರೆ ಅದು ಇನ್ನೊಂದು ದಾರಿಯಾಗುತ್ತದೆ. ಅದನ್ನು ತೆಗೆದುಕೊಂಡರೆ ಅದೊಂದು ದಾರಿ, ಅದನ್ನು ಕಿತ್ತುಹಾಕಿಬಿಡಲು ಬಹುದು, ಅದು ಸರಿಯಾದ ದಾರಿ, ಇಲ್ಲದಿದ್ದರೆ ಅದು ಸತ್‌ಸಂಪ್ರದಾಯವಲ್ಲ. ಗುಣಾತ್ಮಕ ಗೌರವಕ್ಕೆ ಚ್ಯುತಿ ತರತಕ್ಕಂಥದ್ದು. ನೀವು ಗುಣದ ಗೌರವವನ್ನು ಎತ್ತಿ ಹಿಡಿಯತಕ್ಕಂಥ ಅಧ್ಯಕ್ಷರು ಇದ್ದೀರಿ. ನೀವು ಹೀಗೆ ಮಾಡುತ್ತಾ ಬರುತ್ತಿದ್ದೀರಿ. ಈಗಲೂ ಸಹ ಅದನ್ನೇ ಮಾಡುತ್ತಾ ಬರುತ್ತಿದ್ದೀರಿ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು.—ಅದೇನು ಹೇಳಿರಿ.

ಶ್ರೀ ಜಿ. ಮಾದೇಗೌಡ.—ಏನು ಇವತ್ತು ಚರ್ಚೆಯಾಗುತ್ತಿದೆ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರಲ್ಲ, ಅದೇನು ಪಾಯಿಂಟ್ ಆಫ್ ಆರ್ಡರ್ ಇರುತ್ತದೆ ಇದರ ವ್ಯಾಪ್ತಿಯೊಳಗೆ ಹೇಳಿರಿ.

ಶ್ರೀ ಜಿ. ಮಾದೇಗೌಡ.—ಅದನ್ನೇ ನಾನು ಹೇಳುವುದಕ್ಕೆ ಅವಕಾಶಕೊಡಿ ಎಂದು ಕೇಳಿದೆ. ನೀವು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ನಾನು ಕುಳಿತುಕೊಳ್ಳಬೇಕಾಗುತ್ತದೆ. ನಾನು ಒಂದು ಗಂಟೆಯಿಂದ ಇಲ್ಲಿ ಏನು ನಡೆಯುತ್ತಿದೆ ಅದರ ಬಗ್ಗೆ ಹೇಳಬೇಕಾಗಿದೆ. ಮಾನ್ಯ ರಮೇಶ್‌ಕುಮಾರ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಸಂಪೂರ್ಣವಾಗಿ ಸಭೆಯ ಮುಂದಿಟ್ಟಿದ್ದಾರೆ. ಈ ಸಭೆಯ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಮೇಶ್‌ಕುಮಾರ್‌ರವರು ಏನು ಹೇಳಿದ್ದಾರೆಯೋ ಅದನ್ನು ಹೇಳಿದ್ದಾರೆ. ಅದು ಸೂಕ್ತವೂ ಆಗಿದೆ. ಟೇಪ್ ಪ್ರದರ್ಶನ ಮಾಡಿಬಿಡಲಿ ಎಂದು ಸಭಾ ನಾಯಕರೇ ಒಪ್ಪಿಕೊಂಡಿದ್ದಾರೆ. ಬಹುಶಃ ಆ ಕಡೆ ಸದಸ್ಯರುಗಳೆಲ್ಲರೂ ಅವರನ್ನು ಅವರ ನಾಯಕರೆಂದು ತಿಳಿದುಕೊಂಡಿದ್ದರೂ ನಾವು ತಿಳಿದುಕೊಂಡಿಲ್ಲ.

(ಗೊಂದಲ)

ಶ್ರೀ ಎಂ. ರಘುಪತಿ.—ಕೋಪಮಾಡಿಕೊಳ್ಳಬೇಡಿ, ಅವರು ಟೇಪ್‌ಬಗ್ಗೆ ಮಾತನಾಡಬೇಕೆಂದು ಹೇಳಲಿಲ್ಲ. ಅವರು, ಅನ್‌ಪಾರ್ಲಿಮೆಂಟರಿ ಪದ ಉಪಯೋಗಿಸಿದರು ಎನ್ನುವ ಬಗ್ಗೆ ಹಕ್ಕುಭಾಧ್ಯತೆಯಾಗಿದೆಯೋ ಎನ್ನುವುದನ್ನು ತಿಳಿಯಬೇಕಲ್ಲ. ಆ ಕೆಲಸವನ್ನು ಮಾಡಲಿಕ್ಕೆ ಅವಕಾಶವನ್ನು ಕೊಡಿ.

ಶ್ರೀ ಜಿ. ಮಾದೇಗೌಡ.—ಪುನಃ ಒಂದು ಪ್ರಿವಿಲೇಜ್ ಮಾಡಲಿಕ್ಕೆ ಹೊರಟಿದ್ದಾರೆ ಇವರು.

(ಗೊಂದಲ)

ಶ್ರೀ ಎಂ. ರಘುಪತಿ.—ಅದು ಪ್ರಿವಿಲೇಜ್ ಆಗುವುದಿದ್ದರೆ ಮೂವ್‌ಮಾಡಿ. ಅದು ಏನೂ ತಪ್ಪಿಲ್ಲ. ಹಾಗೇನಾದರೂ ಪ್ರಿವಿಲೈಜ್ ಆಗುವುದಿದ್ದರೆ ನಿಮಗೆ ಮೂವ್‌ಮಾಡುವುದಕ್ಕೆ ಹಕ್ಕಿದೆ.

ಹಕ್ಕುಚ್ಯುತಿ ತಂದಿದ್ದಾರೆಂದು ನಿಮಗೆ ಮನವರಿಕೆಯಾಗುವುದಾದರೆ ಅವರಮೇಲೆ ಪ್ರಿವಿಲೇಜ್ ಮೂವ್‌ಮಾಡಿ.

ಶ್ರೀ ಜಿ. ಮಾದೇಗೌಡ.--ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.--ಕೂಡ್ರಿ ಈಗ ಹೇಳಿದರಲ್ಲ.

ಶ್ರೀ ಜಿ. ಮಾದೇಗೌಡ.--ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ......

ಶ್ರೀ ರಮೇಶ್‌ಕುಮಾರ್.--ಮಾನ್ಯ ಅಧ್ಯಕ್ಷರೇ, ನಾನು ಕನ್‌ಕ್ಲೂಡ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಮಾನ್ಯ ಅಧ್ಯಕ್ಷರೇ, ನಾನು ಏನು ಮಾತನಾಡುತ್ತೇನೆ ಎನ್ನುವ ಬಗ್ಗೆ ಊಹೆ ಮಾಡಿ ಪಾಯಿಂಟ್‌ಆಫ್ ಆರ್ಡರ್ ರೈಸ್ ಮಾಡಿದರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಶ್ರೀನಿವಾಸ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ನಾನು ವಿಷಯಾಂತರ ಮಾಡಿದ್ದೇವೆಂದು ಹೇಳಿದರು. ನಾನು ವಿಷಾಯಂತರ ಮಾಡಿದ್ದೇನೆ ಅಥವಾ ಇಲ್ಲ ಎನ್ನತಕ್ಕಂಥ ನಿರ್ಣಯವನ್ನು ಕೊಡತಕ್ಕಂಥಾ ಹಕ್ಕು ತಮಗೆ ಇದೆ. ತಮ್ಮ ನಿರ್ಣಯಕ್ಕೆ ನಾನು ತಲೆಬಾಗುತ್ತೇನೆ. ನಾನು ಅದನ್ನು ಬದಲಿಸಲು ಹೋಗಲಿಕ್ಕೆ ಇಚ್ಛೆಪಡುವುದಿಲ್ಲ. ಮಾನ್ಯ ಕೃಷ್ಣನ್‌ರವರು ಕ್ರೀಯಾಲೋ ಪವೆತ್ತಿದ್ದಾರೆ.

> "It is a brech of privilege and contempt of the House to present false, fraud or fabricated documents either of the House or of the Committee thereon with a view to deceive them."

ಅಂತ ಹೇಳಿದ್ದಾರೆ, ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. I have no intention to deceive the House It is not a fabricated document. It is a genuine document. It is not a fraud document. I would only like to submit this much. ಇದು ಅಪ್ರಸ್ತುತ, ಇದನ್ನು ತೆಗೆದುಕೊಳ್ಳುವುದಿಲ್ಲ, ಇದು ಬೇಕಾಗಿಲ್ಲ ಎಂದು ಹೇಳಿದರೆ ನಾನು ಬಲತ್ಕಾರವಾಗಿ ತಮಗೆ ಕೊಡುವುದಿಲ್ಲ. ಆದರೆ ನನಗೆ ಜವಾಬ್ದಾರಿ ಇದೆ. ಸಂದರ್ಭ ಬಂದಾಗ ಕೊಡಬೇಕಾಗುತ್ತದೆ. ನಾನು ಹೇಳಿದ ಮಾತನ್ನು ಸಾಬೀತು ಮಾಡಿ ಕೊಳ್ಳ ಬೇಕಾಗುತ್ತದೆ. ಇಲ್ಲದಿದ್ದರೆ ನನ್ನದು ಹೊಣೆಗೇಡಿತನವೆಂದು ಹೇಳಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಹೇಳಿದ್ದೇನೆ ಮತ್ತು ಈ ಸಭೆಯ ಗೌರವದ ಚ್ಯುತಿ ಆಗಿದೆಯೆಂದು ಈಗಾಗಲೇ ಹೇಳಿದ್ದೇನೆ. ತಾವು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದರೆ. I intend to present to you. You can take it as a property of the House. Take it right now. ಈಗ ಬೇಡ, ಬೇರೆ ಸಂದರ್ಭದಲ್ಲಿ ಕೊಡಿ ಎಂದರೆ, ಸಂಬಂಧಪಟ್ಟ ವಿಚಾರ ಬಂದಾಗ ಕೊಡಿ ಎಂದರೆ ಆಗ ನಾನು ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಾಚ್ಯ ಶಬ್ದಗಳನ್ನು ಬಳಸತಕ್ಕಂಥ ಅಭ್ಯಾಸ ಇದೆ ಎನ್ನುವುದನ್ನು ಪುಷ್ಟೀಕರಿಸುವುದಕ್ಕೆ, ಅವರು ಏನು ಮಾತನಾಡಿದ್ದಾರೆ ಎನ್ನತಕ್ಕದ್ದನ್ನು ಹೇಳಿದ್ದೇನೆ. ವಿವರಣೆಗೆ ನಾನು ಹೋಗಿಲ್ಲ.

SRI S. BANGARAPPA.--He is again repeating the same words.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡುತ್ತೇನೆ, ಅವರು ಮುಗಿಸಲಿ.

ಶ್ರೀ ರಮೇಶ್‌ಕುಮಾರ್.–ನನ್ನ ಶಕ್ತಿಮೀರಿ ಈ ಸಭೆಯ ಗೌರವವನ್ನು ಎತ್ತಿಹಿಡಿದಿದ್ದೇನೆ. ತಮ್ಮ ಅಧ್ಯಕ್ಷ ಸ್ಥಾನವನ್ನು ಎತ್ತಿಹಿಡಿಯುವುದಕ್ಕೆ ಈ ನೋಟೀಸ್‌ನ್ನು ಕೊಟ್ಟಿದ್ದೇನೆ. ಇದಕ್ಕೆ ಮಾನ್ಯತೆ ಕೊಡ ಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಟೇಪ್ ಬಗ್ಗೆ ಡಿಸೈಡ್ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಮೊಯಿಲಿಯವರೇ ನೀವು ಏನು ಹೇಳುತ್ತೀರಿ? ಇದು ಪ್ರಿವಿಲೇಜ್ ಮೋಶನ್ ಆಗುವುದಿಲ್ಲವೆಂದು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಹೌದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀ ರಮೇಶ್ ಕುಮಾರ್ ಅವರು ನಿಯಮ ೧೯೦ರ ಪ್ರಕಾರ ತಮಗೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ, ತಾರೀಖು ೨೭-೨-೧೯೮೬ರಂದು ನಡೆದಂಥ ಒಂದು ಘಟನೆಯ ಬಗ್ಗೆ, ಅವರನ್ನು ಉಲ್ಲೇಖಿಸಿ ತಮಗೆ ಈ ಸೂಚನೆಯನ್ನು ಕೊಟ್ಟು, ಈ ಒಂದು ಘಟನೆ ಸದನದ ಹಕ್ಕಿಗೆ ಚ್ಯುತಿ ಬರುತ್ತದೆ ಅಥವಾ ಅವರ ಭಾಷೆಯ ಪ್ರಕಾರ ಸದನದ ಘನತೆ ಕುಗ್ಗುತ್ತದೆ. ಎಂಬ ರೀತಿಯಲ್ಲಿ ಅವರು ಈ ಸೂಚನೆಯನ್ನು ಕೊಟ್ಟಿದ್ದಾರೆ. ಈ ಸೂಚನೆಯನ್ನು ಇಂಗ್ಲೀಷ್‌ನಲ್ಲಿ ಬರೆದಿದ್ದಾರೆ. ಈ ಸೂಚನೆಯನ್ನು ಒಂದೆರಡು ವಾಕ್ಯಗಳಲ್ಲಿ ನಮೂದಿಸಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ.—

> "There were further requests from the Hon'ble Members for further clarifications and the Hon'ble Speaker ruled that no more clarifications would be permitted on this. At this point of time, the Hon'ble Leader of the Opposition stood up and while casting aspersions on the Chair, protested against the ruling of the Chair and wanted the Hon'ble Speaker to allow further clarifications for the members. The Hon'ble Speaker did not agree with the Hon'ble Leader of the Opposition and thereon the Hon'ble Leader of the Opposition started shouting at the Chair and threatened that he would not allow the proceedings of the House to be carried on and when the Hon'ble Speaker pleaded with the Hon'ble Leader of the Opposition to resume his seat, the Hon'ble Leader of the Opposition did not obey the order of the Hon'ble Speaker and when the Hon'ble Speaker ordered not to record, the Leader of the Opposition said "I care too hoots for the records" and defied the authority of the Chair."

ಈ ಸಭೆಗೆ ಅವರ ಸೂಚನೆ ಸೀಮಿತವಾಗಿದೆ. ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟಂತಹ ಸೂಚನೆಯನ್ನು ಮತ್ತು ಸದನದಲ್ಲಿ ನಡೆದಂಥ ಕಾರ್ಯಕಲಾಪಗಳು, ಎರಡನ್ನೂ ತುಲನೆ ಮಾಡಿ ನೋಡಿದರೆ ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ಅವರೇನು ಈ ಕಾರ್ಯಕಲಾಪಗಳನ್ನು ಆಧಾರವಾಗಿಟ್ಟುಕೊಂಡು ಈ ಹಕ್ಕುಚ್ಯುತಿ ನೋಟೀಸನ್ನು ಕೊಟ್ಟರೋ ಅಥವಾ ಬೇರೆ ಕಾರಣದಿಂದ ಈ ಸೂಚನೆಯನ್ನು ಕೊಟ್ಟರೋ ಎಂದು ನನಗೆ ಹೇಳಲಿಕ್ಕೆ ಬರುವುದಿಲ್ಲ. ಏಕೆಂದರೆ, we should be factual. ಇದು ತಮ್ಮ ನೀತಿ, ಶಿಸ್ತಿಗೆ ಒಳಪಟ್ಟಿರತಕ್ಕಂಥಾದ್ದು. ತಾವು ಏನು ಶಿಸ್ತನ್ನು ಪಾಲಿಸಬೇಕೆಂದು ಅಪ್ಪಣೆ ಕೊಡುತ್ತೀರಿ ಅದನ್ನು ನಾವು ಪಾಲಿಸಬೇಕಾಗುತ್ತದೆ. ಇದು ತಮ್ಮ ಕ್ಷೇತ್ರಕ್ಕೆ Subjective Satisfaction ಆಗಿ ಇಲ್ಲಿ ತಮ್ಮ ಒಂದು ಅಭಿಪ್ರಾಯಕ್ಕೆ ಒಳಪಡುವಂತಹ ವಿಚಾರ ಇದು. ಇದು ಏನಾದರೂ ಮಾನ್ಯ ವಿರೋಧಪಕ್ಷದ ನಾಯಕರು ಶ್ರೀ ರಮೇಶ್‌ಕುಮಾರ್ ಅವರ ಮೇಲೆ ಅಥವಾ ಸಚಿವರ ಮೇಲೆ ಅಥವಾ ಒಂದು ರಾಜಕೀಯ ಗುಂಪಿನ ಮೇಲೆ ಈ ಸದನದಲ್ಲಿ ಅಥವಾ ಹೊರಗಡೆ ಮಾಡಿದಂಥ ಆಪಾದನೆ ಅಲ್ಲ. ಅಥವಾ ಆಪಾದನೆಯನ್ನು ಮಾಡಬೇಕೆಂದು ಹೋಗಿಲ್ಲ. ಅಥವಾ ದೂರು ಕೊಡುವುದಕ್ಕೂ ಹೋಗಿಲ್ಲ. ಅಥವಾ ಹಕ್ಕು ಚ್ಯುತಿ ಪ್ರಶ್ನೆ ಬರುತ್ತದ ಎಂದರೆ ಅದಕ್ಕೆ ಸಂಬಂಧ

ಪಟ್ಟಿದ್ದೂ ಅಲ್ಲ. ಇದು ತಮಗೆ ಸಂಬಂಧಪಟ್ಟಂಥ ವಿಚಾರ. ತಮಗೆ ಸೀಮಿತವಾದಂಥ ವಿಚಾರ. ಆ ದಿವಸ ನಿಜವಾಗಿಯೂ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಪರಿಸ್ಥಿತಿ ಹೇಗಿತ್ತೆಂಬುದು ತಮಗೆ ಗೊತ್ತಿದೆ. ಈ ಸದನದಲ್ಲಿ ಆ ದಿವಸ ಒಂದು ಸಮಯದಲ್ಲಿ ಯಾವ ಒಂದು ಭಾವೋದ್ವೇಗ ಇತ್ತು, ಮಾತಿನ ಚಕಮಕಿ ನಡೆಯುವಾಗ ಸಂದರ್ಭದ ಆವೇಶ ಏನು ಇತ್ತು, ಅದು ಪ್ರೊಸಿಡಿಂಗ್ಸ್‌ನಲ್ಲಿ ಸಿಗುವುದಿಲ್ಲ, ಅದು ಸಿಗದೇ ಇದ್ದಾಗ ನಾಲ್ಕು-ಹತ್ತು ದಿವಸಗಳಾದ ಮೇಲೆ ಪ್ರೊಸಿಡಿಂಗ್ಸ್‌ನ್ನು ತೆಗೆದು ಯಾರ ಲೋಪ ಎಲ್ಲಿ ಆಗಿದೆ ಎಂದು ಹುಡುಕಬೇಕಾಗುತ್ತದೆ. ಹಾಗೆ ಹುಡುಕುತ್ತಾ ಹೋದರೆ ನ್ಯಾಯವನ್ನು ಪರಿಪಾಲನೆ ಮಾಡುವುದಕ್ಕೆ ಆಗುವುದಿಲ್ಲ. ಅಂದರೆ ಇವತ್ತು ಮಾನ್ಯ ಸದಸ್ಯರು ಮಾನ್ಯ ವಿರೋಧ ಪಕ್ಷದ ನಾಯಕರ ಮೇಲೆ ಲೋಪದೋಷಗಳನ್ನು ಹುಡುಕಬೇಕೆಂದೇನು ಹೊರಟಿದ್ದಾರೆ, ಹುಡುಕಲಿಕ್ಕೆ ಪ್ರೊಸಿಡಿಂಗ್ಸ್‌ನಲ್ಲಿ ಅವರಿಗೆ ಸಿಕ್ಕಿಲ್ಲ. Not culled out from the proceedings. This is culled out from certain feelings which have been felt by the members honestly. You may feel honestly. You may be convinced. ಆ ದಿವಸ ಏನಾದರೂ ಹಕ್ಕುಚ್ಯುತಿ ಆಗಿದ್ದರೆ, ಅದರಿಂದ ಮಾನ್ಯ ಅಧ್ಯಕ್ಷರಿಗೆ ನೋವಾಗಿದ್ದರೆ, ನಾವು ಆ ದಿವಸವೇ ಅಪ್ಪಣೆ ಕೊಡುತ್ತಿದ್ದೀರಿ, If you are convinced that there was a breach of privilge or if you are convinced that there was a tendency to lower the prestige of the Chair of the House, I think then and there you have a liberty to pull us up. ಆದೇಶ ಕೊಡಲಿಕ್ಕೆ ತಮಗೆ ಹಕ್ಕಿದೆ. ಅದನ್ನು ನಾವು ಪಾಲಿಸಬೇಕಾಗುತ್ತದೆ, ಆ ದಿವಸ ತಾವು ಹೆಚ್ಚಿನ ಸಮಯ ಕೊಡಲಿಕ್ಕೆ, ಸ್ಪಷ್ಟೀಕರಣ ಕೇಳಲಿಕ್ಕೆ ಅವಕಾಶ ಕೊಡಲಿಲ್ಲ. ಒಂದೇ ದಿವಸದಲ್ಲಿ ಮೂರು ಗಂಟೆ, ನಾಲ್ಕು ಗಂಟೆ ಒಂದೊಂದು ಬೇಡಿಕೆಗೆ ಸಿಗುತ್ತಿತ್ತು. ಮೂರು-ನಾಲ್ಕು ಮಂದಿ ಸದಸ್ಯರಿಗೆ ಚರ್ಚೆಯಲ್ಲಿ ಭಾಗ ವಹಿಸಲಿಕ್ಕೆ ಆಗಿರಲಿಲ್ಲ. ತಮಗೆ ಗೊತ್ತಿದೆ ಅಧ್ಯಕ್ಷರೇ, ಅವರ ಸಮಸ್ಯೆ ಇದೆ, ಕ್ಷೇತ್ರದ ಸಮಸ್ಯೆ ಇದೆ, ರಾಜ್ಯದ ಸಮಸ್ಯೆ ಇದೆ. ಈ ಸಮಸ್ಯೆಗಳ ಬಗ್ಗೆ ಸದನದಲ್ಲಿ ಹೇಳಬೇಕು ಎಂಬ ಕಾತುರ, ಕಳವಳ ಆ ಸದಸ್ಯರಿಗೆ ಇರುವಾಗ ಅವರು ಎದ್ದುನಿಂತುಕೊಂಡಿರತಕ್ಕಂಥ ಸಂದರ್ಭದಲ್ಲಿ ತಮ್ಮ ಬೇಡಿಕೆಯನ್ನು ಆಗ್ರಹಪೂರ್ವಕವಾಗಿ, ಏರಿದ ಧ್ವನಿಯಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ.

ಆಗ ತಾವುಸಮಾಧಾನವಾಗಲಿ ಎಂದು ಬೇಡಿಕೆಗಳ ಮೇಲೆಮಂತ್ರಿಗಳು ಉತ್ತರಕೊಟ್ಟಮೇಲೆ ಸ್ಪಷ್ಟೀಕರಣ ಕೇಳಲು ಅವಕಾಶ ಕೊಡುತ್ತೀರಿ. ಸುಮಾರು ಒಂದೆರಡು ಗಂಟೆಗಳ ಕಾಲ ಸ್ಪಷ್ಟೀಕರಣ ಕೇಳಲು ತಾವು ಅವಕಾಶ ಕೊಡುತ್ತಿದ್ದೀರಿ. ಕಳೆದ ತಿಂಗಳ ೨೭ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ಸಾಮಾನ್ಯ ಆಯವ್ಯಯ ಪತ್ರದ ಮೇಲೆ ನಡೆದ ಚರ್ಚೆಗೆ ಉತ್ತರ ಕೊಟ್ಟರು, ಅದು ಬಹಳ ಪ್ರಾಮುಖ್ಯವಾದಂಥ ವಿಷಯವಾದ ಕಾರಣ ಅದರ ಮೇಲೆ ಮಾತನಾಡಲು ಬಹಳಷ್ಟು ಜನ ಸದಸ್ಯರು ಅವಕಾಶ ಕೇಳಿದ್ದರು. ಆದರೆ ಅದರಲ್ಲಿ ಶೇಕಡಾ ೫೦ ಜನ ಸದಸ್ಯರಿಗೂ ಸಹ ಮಾತನಾಡಲು ಅವಕಾಶ ಸಿಗಲಿಲ್ಲ. ಆಡಳಿತ ಪಕ್ಷದ ಅನೇಕ ಸದಸ್ಯರೂ ಕೂಡ ಅದರ ಮೇಲೆ ಮಾತನಾಡಲು ಆತುರರಾಗಿದ್ದರು. ಆದರೆ ಅವರಲ್ಲಿಯೂ ಕೆಲವರಿಗೆ ಮಾತನಾಡಲು ಅವಕಾಶ ಸಿಗಲಿಲ್ಲ. ಈ ಕಾರಣದಿಂದ ಮುಖ್ಯಮಂತ್ರಿಗಳ ಉತ್ತರದ ನಂತರ ಕೆಲವರಿಗೆ ಸ್ಪಷ್ಟೀಕರಣ ಕೇಳಲು ತಾವು ಅವಕಾಶ ಕೊಟ್ಟಿರಿ, ಆದರೆ ಅನೇಕ ಮಂದಿ ಆ ದಿನ ಸ್ಪಷ್ಟೀಕರಣ ಕೇಳಲು ಅವಕಾಶ ಕೊಡಬೇಕೆಂದು ತಮ್ಮನ್ನು ಕೇಳಿದಾಗ...

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ ಯಾವುದೇ ಸಂದರ್ಭದಲ್ಲಿ ಹಕ್ಕುಚ್ಯುತಿ ನಿರ್ಣಯವನ್ನು ಈ ಸಭೆಗೆ ಅಗೌರವ ಆಗಿದೆ ಎಂದು ಮಾನ್ಯ ಸದಸ್ಯರೊಬ್ಬರು ಇಲ್ಲಿ ಮಂಡಿಸಿದರೆ, ಆ ವಿಚಾರದ ಮೇಲೆ ಇಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ. ಈ ಬಗ್ಗೆ ಇರತಕ್ಕಂಥ ನಿಯಮವನ್ನು ನಾವು ಮೀರಿ ಹೋಗುವುದು ಸರಿಯಲ್ಲ. ಇಲ್ಲಿ ನಿಯಮ ೧೯೮ರಲ್ಲಿರುವ ಸಬ್-ರೂಲ್ ಎರಡರಲ್ಲಿ the following is stated.—

> "If objection to leave being granted is taken, the Speaker shall request those members who are in favour of leave being granted to rise in their places and if not less than ten members rise accordingly the speaket shallintimate that leave is granted. If less than ten member rise, the

Speaker shall inform the member that he has not the leave of the House''

ಎಂದು ಹೇಳಿದೆ. ಮಾನ್ಯ ಸದಸ್ಯರು ಇಲ್ಲಿ ಒಂದು ನೋಟೀಸ್ ಕೊಟ್ಟು ಆ ಬಗ್ಗೆ ತಮ್ಮ ಹೇಳಿಕೆ ಏನಿತ್ತೋ ಅದನ್ನು ತಮ್ಮ ಮುಂದೆ ಹೇಳಿದರು. ಇದಾದ ನಂತರ ಅದರ ಪರವಾಗಿ ಮತ್ತು ವಿರುದ್ಧವಾಗಿ ವಾದ ಮತ್ತು ವಿವಾದವನ್ನು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ನಿಯಮ 167ಳನ್ನೂ ಸಹ ಓದಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ಶ್ರೀ ವೀರಪ್ಪ ಮೊಯ್ಲಿ ಅವರ ವಾದ ಏನಿದೆ ಎಂದರೆ, ಅವರು ಯಾವ ಸಂದರ್ಭದಲ್ಲಿ ಆ ರೀತಿ ಹೇಳಿದರು ಎಂಬುದು ಮುಖ್ಯ ಮಾತಿನ ಚಕಮಕಿಯಲ್ಲಿ ಏನಾದರೂ ಹೇಳಿದರೆ ಅದು ಒಂದು ಮಹತ್ವದ ವಿಚಾರವಾಗುವುದಿಲ್ಲ ಎನ್ನುವಂತಹ ರೀತಿಯಲ್ಲಿ ವಾದ ಮಾಡುತ್ತಿದ್ದಾರೆ. ಆದರೆ ಇಲ್ಲಿ ಮಾತನಾಡುವವರು ತಮ್ಮ ನಾಲಿಗೆ ಮೇಲೆ ಹಿಡಿತವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿಗೆ ಸಭ್ಯಜನರು ಆರಿಸಿ ಬಂದಿದ್ದಾರೆಂದು ಜನರು ತಿಳಿದುಕೊಂಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಿದ್ದರೆ ಯಾವ ಸಂದರ್ಭದೊಳಗೆ ಯಾರಿಗೆ ತಮ್ಮ ನಾಲಿಗೆ ಮೇಲೆ ಹಿಡಿತ ಇತ್ತೋ ಅಥವಾ ಇಲ್ಲವೋ ಎಂಬುದನ್ನೂ ಸಹ ನೋಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿಗೆ ಸಭ್ಯ ಜನರು ಆರಿಸಿ ಬಂದಿದ್ದಾರೆಂದು ಜನರ ಗ್ರಹಿಕೆ ಆಗಿದೆ. ಇಲ್ಲಿ ಬೇಕಾದಷ್ಟು ಉದ್ವೇಗದ ಸನ್ನಿವೇಶಗಳು ಬರಬಹುದು ಕೆಲವೊಮ್ಮೆ ಅಧ್ಯಕ್ಷರು ಕೊಟ್ಟ ತೀರ್ಮಾನ ಕೆಲವರಿಗೆ ರುಚಿಸದೆ ಹೋಗಬಹುದು. ಆಗ ಅಧ್ಯಕ್ಷರನ್ನೇ ಬಯ್ಯುವುದು ಸರಿಯೇ ? 'I care two hoots'. ಅಂದರೆ ಏನರ್ಥ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ಎಲ್ಲಿದೆ ? ಮಾನ್ಯ ಸಭಾನಾಯಕರು. ಸ್ವಲ್ಪ ಸಮಾಧಾನದಿಂದ ನಾವು ಹೇಳುವುದನ್ನು ಕೇಳಬೇಕು. ಇಷ್ಟೊಂದು ಅವಸರ ಪಟ್ಟರೆ ಹೇಗೆ ? ಮಾನ್ಯ ಬಂಗಾರಪ್ಪನವರನ್ನು ಕಟ್ಟೆಗೆ ಕಳುಹಿಸುವುದಕ್ಕೆ ನಿಮಗೆ ಅಷ್ಟೊಂದು ಆತುರ ಏಕೆ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ, ಮಾನ್ಯ ವಿರೋಧಪಕ್ಷದ ನಾಯಕರಾದಂಥ ಶ್ರೀ ಬಂಗಾರಪ್ಪನವರನ್ನು ಕಟ್ಟೆಗೆ ಕಳುಹಿಸುವ ಆತುರ ನನಗಿಲ್ಲ, ಅಲ್ಲಿಯು ಕೆಲವು ಜನರಿಗೆ ಇದೆ. ಮೊದಲು ಅದನ್ನು ಸರಿಮಾಡಿಕೊಳ್ಳಿ. ನಾವು ಇಲ್ಲಿ ಮಾತನಾಡುವಾಗ ಸಭ್ಯ ಭಾಷೆಯನ್ನು ಸುಸಂಸ್ಕೃತ ಭಾಷೆಯನ್ನು ಬಳಸಬೇಕೇ ಹೊರತು ಅವಾಚ್ಯ ಭಾಷೆಯನ್ನು ಉಪಯೋಗ ಮಾಡಬಾರದು. ಈ ಸಭೆಯ ಅಧ್ಯಕ್ಷರಾದ ತಾವು ಈ ಸದನದ ಗೌರವನ್ನು ರಕ್ಷಣೆ ಮಾಡತಕ್ಕಂಥ ಮತ್ತು ಇಲ್ಲಿನ ಸದಸ್ಯರುಗಳ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥ ಮತ್ತು ಇಲ್ಲಿನ ಸದಸ್ಯರುಗಳ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ಆದ್ದರಿಂದ ಇಲ್ಲಿ ತಮಗೇನಾದರೂ ಅಗೌರವವಾದರೆ ಇಡೀ ಸದನಕ್ಕೇ ಅಗೌರವ ಆದಂತೆ. ಈ ಎಲ್ಲ ಕಾರಣಗಳಿಂದ ಮಾನ್ಯ ಸದಸ್ಯರು ಇಲ್ಲಿ ಮಂಡಿಸಿರುವಂತಹ ನಿರ್ಣಯದ ಮೇಲೆ ವಾದವಿವಾದ ಮಾಡಲು ತಾವು ಅವಕಾಶ ಕೊಟ್ಟರೆ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅವರು ಮೊದಲು ಏನು ಹೇಳಿದರು, ಅನಂತರ ಏನು ಹೇಳಿದರು, ಯಾವ ಅರ್ಥದಲ್ಲಿ ಹೇಳಿದರು ಎಂದು ಇಲ್ಲಿ ವಾದ ಮಾಡುವುದು ಸರಿಯಲ್ಲ. ಈ ವಿಷಯವನ್ನು ತಾವು ಪ್ರಿವಿಲೇಜ್ ಕಮಿಟಿಗೆ ವಹಿಸಿದರೆ, ಅವರು ಪ್ರತಿಯೊಂದು ವಿಚಾರವನ್ನೂ ನೋಡುತ್ತಾರೆ. ಇವರು ಆ ದಿನ ಏನು ಮಾತನಾಡಿದರು, ಅದರ ಹಿಂದಿನ ದಿವಸಗಳಲ್ಲಿ ಏನೇನು ಮಾತನಾಡಿದರು ಎಂಬುದನ್ನೆಲ್ಲಾ ಅವರು ನೋಡಲಿ. ಇದು ಅವರಿಗೆ ಬಿಟ್ಟದ್ದು. ಮುಖ್ಯವಾಗಿ ಅವರು ಆ ದಿನ ಇಲ್ಲಿ ಹೇಳಿದಂಥ ಮಾತು ಈ ಸಭೆಗೆ ಅಗೌರವ ತರತಕ್ಕದ್ದಾಗಿದೆ ಮತ್ತು ಕುಂದು ತರುವಂಥಾದ್ದಾಗಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮುಖ್ಯ ಮಂತ್ರಿಗಳ ಕ್ರಿಯಾಲೋಪ ಸರಿಯಲ್ಲ,

ಅಧ್ಯಕ್ಷರು.—ಇದು ಪ್ರಿವಿಲೇಜ್ ಆಗುತ್ತದೋ ಅಥವಾ ಇಲ್ಲವೋ ಎಂಬುದನ್ನು ಹೇಳಿಬಿಡಿ,

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರು ಯಾವ ಹಂತದಲ್ಲಿ ಹೇಳುತ್ತಿದ್ದಾರೆಂದರೆ, when it is a question of raising the matter of privilege ನಾವು ಏನಾದರೂ ಆಬ್ಜೆಕ್ಟ್

ಮಾಡಿದರೆ ರೂಲ್ ಏನಿದೆ ಎಂಬುದನ್ನು ನೋಡಬೇಕಾಗುತ್ತದೆ. ನಿಯಮ ೧೯೪ರ ಪ್ರಕಾರ, after raising, the matter it will have to be considered by the House. ನಿಯಮ ೧೯೩ರ ಪ್ರಕಾರ ವಿಷಯವನ್ನು ಪ್ರಸ್ತಾಪ ಮಾಡಲು ತಾವು ಅನುಮತಿ ಕೊಟ್ಟಮೇಲೆ i.e.

> "If leave under rule 194 is granted, the House may consider the question and come to a decision or refer to a committee of Privileges on a motion made either by the Member who has raised the question of privilege or by any other Member"

We have reached a stage wherein the House is considering 6th question raised by the Hon. Member. Considering any question always involves at least, limited debate for and against. ಆದ್ದರಿಂದ ನಾವು ಹೇಳುವುದನ್ನು ಹೇಳಲೇ ಬೇಕಾಗುತ್ತದೆ. ಈ ಕಾರಣದಿಂದ ಮಾನ್ಯ ಸಭಾನಾಯಕರ ಕ್ರಿಯಾಲೋಪ ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮ ೧೯೫ರಲ್ಲಿ ಈ ರೀತಿ ಹೇಳಿದೆ.—

> "Notwithstanding anything contained in these rules, the Speaker may refer any question of privilege to the Committee of Privilegs for examination,investigation or report"

Rule 195 is very clear. Sir, you have got discretion. You can excersise your powers under rule 195.

ಆದ್ದರಿಂದ ಇದು ತಮ್ಮ ಒಂದು ಅಧಿಕಾರವ್ಯಾಪ್ತಿಯಲ್ಲಿಯೇ ಬರುತ್ತದೆ. ನಿಯಮ ೧೯೪ರ ಪ್ರಕಾರ ಈ ಸಭೆಯ ಒಪ್ಪಿಗೆ ಪಡೆದು ಪ್ರಿವಿಲೇಜ್ ಕಮಿಟಿರೆಫರ್ ಮಾಡುವುದು ಒಂದು ವಿಧಾನ. ಆದರೆ ನಿಯಮ೧೯೫ರಪ್ರಕಾರ ತಮಗೇ ಅಧಿಕಾರ ಇದೆ. ಆದ್ದರಿಂದ ಮಾನ್ಯಮುಖ್ಯಮಂತ್ರಿಗಳು ಹೇಳಿದಂತೆ ಈ ಬಗ್ಗೆ ಇಲ್ಲಿ ಎಲ್ಲರಿಂದಲೂ ವಿವರಣೆ ಕೇಳಬೇಕಾದ ಅವಶ್ಯಕತೆ ಏನೂ ಇಲ್ಲ. ಈಗಾಗಲೇ ತಾವು ಇಲ್ಲಿ ಒಂದಿಬ್ಬರ ಅಭಿಪ್ರಾಯವನ್ನು ತೆಗೆದು ಕೊಂಡಿದ್ದೀರಿ. ಆದಕಾರಣ ತಮ್ಮ ಅಭಿಪ್ರಾಯದಲಿ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕೆಂದಿದ್ದರೆ ಈ ಸಭೆಯ ಅಭಿಪ್ರಾಯ ಕೇಳದೆ ಪ್ರಿವಿಲೇಜ್ ಕಮಿಟಿಗೆ ಇದನ್ನು ಕಳುಹಿಸಿಕೊಡುವಂತಹ ಸುಮೋಟೋ ಅಧಿಕಾರ ತಮಗೆ ಇದೆ. ಆದ್ದರಿಂದ ಅದನ್ನು ತಾವು ಚಲಾಯಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ನಿಯಮ ೧೯೧ (೨)ರಲ್ಲಿ ಏನಿದೆ ಎಂಬುದನ್ನು ಓದುತ್ತೇನೆ....

ಅಧ್ಯಕ್ಷರು.—ತಾವು ಅದನ್ನು ಓದುವುದಕ್ಕೆ ಮೊದಲು ಮಾನ್ಯ ಕಾನೂನು ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳೋಣ. ತಾವು ಕುಳಿತುಕೊಳ್ಳಿ.

SRI A. LAKSHMISAGAR.—Sir, I only add to what Sri Bommai has said. You can take a decision under rule 195 suo motto even without bringing it to the notice of the House, and refer the matter to the Committee on Privileges. Therefore, my submission is, if you are satisfied upon it, notice having been given to you by the Hon. Member Sri RameshKumar and others, suo motto, you can refer this matter to the Committee on Privileges.

೭-೦೦ ಪಿ. ಎ.

ಶ್ರೀ ಜೆ. ಹೆಚ್ ಪಟೇಲ್.—ಮಾನ್ಯ ಅಧ್ಯಕ್ಷರೇ, ಒಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ, ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರ ಮೇಲಾಗಲೀ, ಸರ್ಕಾರ ಮಾನ್ಯ ಸದಸ್ಯರ ಮೇಲಾಗಲೀ ದೂರುಗಳನ್ನು ಮಾಡಿದಾಗ ಪ್ರಿವಿಲೇಜ್ ಮೋಷನ್ ಕಳುಹಿಸಬಹುದು. ಮಾನ್ಯ ಸ್ಪೀಕರ್‌ರವರಿಗೆ ಸರಿಯಾದ ಶಬ್ದಗಳನ್ನು ಉಪಯೋಗ ಮಾಡಿ ಮಾತನಾಡದಿದ್ದರೆ, ಅದು ಸದನದ ಗೌರವಕ್ಕೆ ಚ್ಯುತಿ ತರತಕ್ಕಂಥಾದ್ದು ಆಗುತ್ತದೆ. ಆದ್ದರಿಂದ ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಬೇಕೇ ಹೊರತು ಇದರ ಬಗ್ಗೆ ಇನ್ನೂ ಹೆಚ್ಚು ಕೇಳಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಹೇಳಿದ್ದನ್ನೂ ನಾನು ಕೇಳಿದೆ. ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದನ್ನೂ ನಾನು ಕೇಳಿದ್ದೇನೆ. ನನಗಾದರೂ ಅನಿಸುವುದೇನೆಂದರೆ, ಮಾನ್ಯ ಸದಸ್ಯರಾದ ರಮೇಶ್‌ಕುಮಾರ್‌ರವರು ಹಕ್ಕುಚ್ಯುತಿ ನಿರ್ಣಯದ ಮೇಲೆ ತಮಗೆ ನೋಟೀಸ್‌ನ್ನು ಕೊಟ್ಟಿದ್ದಾರೆ. ರೂಲ್ ೧೯೦ರ ಪ್ರಕಾರ.

> "A member may, with the consent of the Speaker, raise a question involving a breach of privilege either of a member or the House or of a Commitee thereof."

Rule 193 says that

> "The Speaker if he gives consent under rule 190 and holds that matter proposed to be discussed is in order. shall after the questions and before the list of business is entered upon, call the memder concerned, who shall rise in his place and while asking for leave to raise the question of privilege make a short statement relevant there to."

ಅವರು ಸ್ಟೇಟ್‌ಮೆಂಟ್ ಮಾಡಿದ್ದೂ ಆಯಿತು, ಅದರ ಬಗ್ಗೆ ಕನ್‌ಸೆಂಟ್ ಕೊಟ್ಟಿರಿ.

> "Provided that where the Speaker has refused his consent under rule 190 or is opinion that the matter proposed to be discussed is not in order, he may, if he thinks it necessary read the notice of question of question of privilege and state that he refused consent or holds that the notice of not in order."

Sir, that has not been done by you.

> "Provided further that the Speaker may, if he is satisfied about the urgency of the matter, allow a question of privilege to be raised at any time during the course of a sitting after the disposal of questions"

Sir, now you have allowed. Consent has been given by you to raise the matter. That means leave has been granted to him. Now as per Rule 194 there is no option
ಕನ್‌ಸೆಂಟ್ ಕೊಟ್ಟಿರುವುದರಿಂದ, ಅವರು ರೈಸ್ ಮಾಡಿದ್ದಾರೆ. Rule 194 says,

> "If leave under rule 193 is granted, the House may consider the question and come to a decision or refer it to a Committee of Privileges on a motion made either by the

member who has raised the question of privilege or by any other member.''

Sir, he has raised the matter and now it is a part of discussion. The House has to discuss.

ಶ್ರೀ ಆರ್. ವೆಂಕಟರಾಮಯ್ಯ.—ಅದು ಸಾಕಾಗುವುದಿಲ್ಲ. ನಿಯಮ ೧೯೩ ಸಬ್ ಕ್ಲಾಸ್ ೨ನ್ನು ನೋಡಿದರೆ, ಅನುಮತಿ ಕೊಡುವ ವಿಷಯದಲ್ಲಿ, ಆಕ್ಷೇಪವನ್ನು ಎತ್ತಿದರೆ, ಯಾವ ಸದಸ್ಯರಿಗೆ ಅನುಮತಿ ನೀಡಲಾಗಿದೆಯೋ, ಆ ಸದಸ್ಯರನ್ನು ತಮ್ಮ ಸ್ಥಾನದಲ್ಲಿ ನಿಂತುಕೊಳ್ಳಬೇಕೆಂದು ಹೇಳಬೇಕು ಅವರ ಜೊತೆಗೆ ಇನ್ನೂ ೧೦ ಮಂದಿ ಸದಸ್ಯರು ಎದ್ದು ನಿಂತರೆ ಅನುಮತಿಯನ್ನು ನೀಡಿದ್ದೇನೆಂದು ಅಧ್ಯಕ್ಷರು ಹೇಳತಕ್ಕದ್ದು. ಅದರಿಂದ ಏನಾಗುತ್ತದೆ ಎಂದರೆ, ೧೦ ಜನ ಎದ್ದು ನಿಂತರೆ ಇದಕ್ಕೆ ಸದಸ್ಯರ ಅನುಮತಿ ಇದೆಯೆಂದು ಗೊತ್ತಾಗುತ್ತದೆ. ರೂಲ್ ೧೯೩ರಲ್ಲಿ ಇದನ್ನು ಕ್ಲಿಯರ್ ಆಗಿ ಹೇಳಲಾಗಿದೆ. ಆದ್ದರಿಂದ ತಾವು ಇದನ್ನು ಹಕ್ಕು ಭಾದ್ಯತಾ ಕಮಿಟಿಗೆ ಒಪ್ಪಿಸಬೇಕು. ಮಾನ್ಯ ರಮೇಶ್ ಕುಮಾರ್‌ರವರು ಎತ್ತಿರತಕ್ಕ ನಿರ್ಣಯಕ್ಕೆ ೧೦ ಜನ ಸದಸ್ಯರ ಸಪೋರ್ಟ್ ಇದೆಯೋ ಇಲ್ಲವೋ ಎಂದು ನೋಡಬೇಕು.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ...

ಅಧ್ಯಕ್ಷರು.—ನೀವು ಕೂಡ್ರಿ. ನಿಮಗಿಂತ ಸೀನಿಯರ್ ಆದ ವೀರಪ್ಪ ಮೊಯ್ಲಿಯವರು ಚೆನ್ನಾಗಿ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ರಮೇಶ್‌ಕುಮಾರ್ ರವರು ವಿಷಯವನ್ನು ಪ್ರಸ್ತಾಪ ಮಾಡಿದ ಕೂಡಲೇ ನಾವು ಎದ್ದು ನಿಂತದ್ದು ಏಕೆ ಎಂದರೆ, ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ...

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ನನಗೆ ಮಾತನಾಡಲು ತಾವು ಅನುಮತಿ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೇ, ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಅಧ್ಯಕ್ಷರು.—ಎಲ್ಲಾ ಕೂಡ್ರಿ. ಇವರು ಹೇಳುವುದನ್ನು ಕೇಳ್ರಿ.

ಶ್ರೀ ವೈ. ಕೆ. ರಾಮಯ್ಯ.—ನಾನು ಒಂದು ದಿವಸಕ್ಕೆ ೧೦ ಸಾರಿ ಎದ್ದು ನಿಲ್ಲುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಯೀಲ್ಡ್ ಆದರೆ ಮಾತ್ರ ನೀವು ಮಾತನಾಡುವುದಕ್ಕೆ ಸಾಧ್ಯ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ಇವರಿಗೆ ಮಂತ್ರಿಮಂಡಲವನ್ನು ಮಾರಾಟ ಮಾಡಿಲ್ಲ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.—ನನಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು.—ಅವರದು ಪಾಯಿಂಟ್ ಆಫ್ ಆರ್ಡರ್ ಇದೆ, ತಾವು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಇರುವುದರಿಂದ ಅವರಿಗೆ ಅವಕಾಶ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನಿಮಗೂ ಅವಕಾಶ ಕೊಟ್ಟಿದ್ದೇವೆ. ಈಗ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ವೀರಪ್ಪನವರೇ ನೀವು ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಸಭಾ ನಾಯಕರ ಪಾಯಿಂಟ್ ಆಫ್ ಆರ್ಡರ್ ಏನಾಯಿತು? ಮಾನ್ಯ ಬೊಮ್ಮಾಯಿಯವರು ಎತ್ತಿದ ಪಾಯಿಂಟ್ ಆಫ್ ಆರ್ಡರ್ ಏನಾಯಿತು ? ಒಂದು ಪ್ರೊಸೀಡಿಂಗ್ಸ್‌ನಲ್ಲಿ ಎಷ್ಟು ಪಾಯಿಂಟ್ ಆಫ್ ಆರ್ಡರ್ಸ್ ಆಗಬೇಕು ? ನಾವು ಮಾತನಾಡುವುದಕ್ಕೆ ತಾವು ಅಪ್ಪಣೆ ಕೊಡಿ.

(ಗೊಂದಲ)

ಅಧ್ಯಕ್ಷರು.. ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ.........

ಅಧ್ಯಕ್ಷರು —ನಿಮ್ಮದು ಪಾಯಿಂಟ್ ಆಫ್ ಆರ್ಡರ್ ಇದ್ದರೆ, ನಿಮಗೆ ಅವಕಾಶವನ್ನು ಆಮೇಲೆ ಮಾಡಿಕೊಡುತ್ತೇನೆ. ಈಗ ಅವರು ಹೇಳಲಿ......

ಶ್ರೀ ಜಿ.ಎಸ್. ಶಿವನಂಜಪ್ಪ.—ಈಗ ನೀವು ವೀರಪ್ಪ ಮೊಯಿಲಿಯವರನ್ನು ಕರೆದರೆ, ಅವರು ಹೇಳಬೇಕು......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಯಾರೂ ಮಾತನಾಡಿದುದೂ ರಿಕಾರ್ಡ್‌ಗೆ ಹೋಗುವುದಿಲ್ಲ. ವೈ. ಕೆ. ರಾಮಯ್ಯನವರು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದಾರೆ. ಬೇರೆ ಯಾರಾದರೂ ಮಾತನಾಡಿದರೆ, ಅದು ರಿಕಾರ್ಡ್‌ಗೆ ಹೋಗುವುದಿಲ್ಲ. ಅವರಿಗೆ ಅವಕಾಶ ಮಾಡಿ ಕೊಡುತ್ತಿದ್ದೇನೆ. ಇತರರು ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.— ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಪಾಯಿಂಟ್ ಆಫ್ ಆರ್ಡರ್ ಮೇಲೆ ಅವರು ಮಾತನಾಡುತ್ತಿದ್ದಾರೆ, ಅವರಿಗೆ ಮಾತನಾಡಲು ಹೇಳಿದ್ದೇನೆ. ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಆಮೇಲೆ ನಾನು ರೂಲಿಂಗ್ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು —ದಯವಿಟ್ಟು ಕುಳಿತುಕೊಳ್ಳಬೇಕು......
ಇದು ಯಾವುದೂ ರಿಕಾರ್ಡ್‌ಗೆ ಹೋಗುವುದಿಲ್ಲ...ಅವರು ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡುತ್ತಿದ್ದಾರೆ, ತಾವು ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ನಾವು ಪಾಯಿಂಟ್ ಆಫ್ ಆರ್ಡರ್ ವಿಚಾರದಲ್ಲಿ ಅಡ್ಡ ಬರುವುದಿಲ್ಲ. ನನ್ನ ಒಂದು ಸಣ್ಣ ಸೂಚನೆ ಅಂದರೆ, ಈಗ ಸುಮಾರು ನನ್ನ ಲೆಕ್ಕದ ಪ್ರಕಾರ ೧೦ ಕ್ರಿಯಾಲೋಪಗಳು ತಮ್ಮ ಮುಂದೆ ಇವೆ. ೧೦ ಕ್ರಿಯಾಲೋಪಗಳ ಮೇಲೆಯೂ ಕೂಡಾ ತಾವು ಆಲೋಚನೆ ಮಾಡಿ ಅಪ್ಪಣೆ ಕೊಡದಿದ್ದರೆ What will happen to the position. You are an authority. My concern is, no one should consider the Speaker as indecisive.

ಶ್ರೀ ನಾರಾಯಣ ಕುಮಾರ್.—ಅಧ್ಯಕ್ಷರೆ,......

ಶ್ರೀ ವೈ.ಕೆ. ರಾಮಯ್ಯ.—ಅಧ್ಯಕ್ಷರೇ, ಸದನದ ಕಾರ್ಯಕಲಾಪಕ್ಕೆ ಅಡ್ಡಿ ತರಬೇಕೆಂದು ನನಗೆ ಕಿಂಚಿತ್ತೂ ಮನಸ್ಸು ಇಲ್ಲ. ಮಾನ್ಯ ಹಿರಿಯ ಸದಸ್ಯರಾದ ಮೊಯಿಲಿಯವರು ಮಾತನಾಡುವುದಕ್ಕೆ ಅಡ್ಡಿ ಮಾಡಬೇಕೆಂದು ಕೂಡಾ ಮನಸ್ಸು ಇಲ್ಲ. ತಮಗೆ ಗೊತ್ತಿದೆ, ಯಾವುದೇ ಸಮಯದಲ್ಲಿ ಈ ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಬರುವಂತಹ ರೀತಿಯಲ್ಲಿ ಎದ್ದು ನಿಲ್ಲುವ ಅಭ್ಯಾಸವೂ ಕೂಡ ನಾನು ಬೆಳೆಸಿಕೊಂಡಿಲ್ಲ. ಆದರೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನ್ಯಾಯಾಲಯದಲ್ಲಿ ನ್ಯಾಯಾಧೀಶರು ಮತ್ತು ಸದನದಲ್ಲಿ ತಮಗೆ ಯಾವುದೇ ವಿಷಯಗಳು ಗೊತ್ತಿಲ್ಲ, ಅದಕ್ಕಾಗಿ ಆ ಕಡೆಯವರು ಮತ್ತು ಈ ಕಡೆಯವರು ತಮಗೆ ಪಾಠವನ್ನು ಹೇಳಿಕೊಡುತ್ತಾರೆ ಎನ್ನುವುದು ನಮ್ಮ ಅಭಿಪ್ರಾಯ ಅಲ್ಲ. ಯಾವುದೇ ಒಂದು ವಿಷಯವನ್ನು ತೀರ್ಮಾನ ಮಾಡುವಾಗ ತಾವುಗಳು ಸದಸ್ಯರ ಅನಿಸಿಕೆಗಳನ್ನು ಕೇಳುತ್ತೀರಿ, ಅದು ಸ್ವಾಭಾವಿಕ. ಈ ಪ್ರಕಾರವಾಗಿ ವಾದ ವಿವಾದಗಳನ್ನು ಕೇಳುವುದಕ್ಕೆ ಮೊದಲು ಮಾಡಿದ ಮೇಲೆ ಎಲ್ಲಿಯವರೆಗೆ ಈ ವಾದವನ್ನು ಕೇಳಬಹುದು? ಮಾನ್ಯ ಮೊಯಿಲಿಯವರು ಸದನದ ಕಾಲಹರಣ ಆಗುತ್ತಿದೆ. ಅನಾವಶ್ಯಕವಾಗಿ ಸಮಯದ ಪೋಲು ಆಗುತ್ತಿದೆ ಎಂದು ಹೇಳಿದ್ದಾರೆ. ಆ ಕಡೆಯವರಾಗಲಿ, ಈ ಕಡೆಯವರಾಗಲಿ, ಎಲ್ಲಿಯವರೆಗೆ ಒಂದು ವಿಷಯದ ಬಗ್ಗೆ ನೀವು ಕನ್ವಿನ್ಸ್ ಆಗುವುದಿಲ್ಲವೋ ತೃಪ್ತಿ ಆಗುವುದಿಲ್ಲವೋ, ಅಲ್ಲಿಯವರೆಗೆ ವಾದಗಳನ್ನು ಕೇಳಬಹುದು. You have already admitted the notice of privilege Motion. ಉತ್ತಮವಾದಂತಹ ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಎರಡು ಕಡೆಯವರೂ ನಿಮಗೆ ಸಹಾಯ ಮಾಡುತ್ತಾರೆ. ಅದರ ಹೊರತಾಗಿ ತಮಗೆ ಬುದ್ಧಿಯನ್ನು ಹೇಳುವುದಕ್ಕಾಗುವುದಿಲ್ಲ. ಸ್ಪೀಕರ್ಸ್, ಜಡ್ಜ್‌ಸ್ ಎಲ್ಲವನ್ನೂ ತಿಳಿದುಕೊಂಡಿರುತ್ತಾರೆ ಎಂದು ನನ್ನ ಭಾವನೆ. ತಾವುಗಳು ಎಲ್ಲವನ್ನು ತಿಳಿದುಕೊಂಡು ಮಾತನಾಡುತ್ತೀರಿ. ಉತ್ತಮವಾದಂತಹ ಡಿಸಿಷನ್ ತೆಗೆದುಕೊಳ್ಳಲಿಕ್ಕೆ, ತೀರ್ಮಾನ ತೆಗೆದುಕೊಳ್ಳಲಿಕ್ಕೆ ಎರಡು ಕಡೆಯವರೂ ವಾದ ಮಾಡಿ ತಮಗೆ ಸಹಾಯ ಮಾಡುತ್ತಾರೆ. ಆದರೆ ಎಲ್ಲಿಯವರೆಗೆ ತಾವುಗಳು ವಾದವನ್ನು ಕೇಳಿಕೊಂಡು ಹೋಗುತ್ತೀರಿ?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಅವರು ಮುಕ್ತಾಯ ಮಾಡಲಿ.

ಶ್ರೀ ಧರ್ಮಸಿಂಗ್.—ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡುತ್ತಿದ್ದಾರೆ. ಸಾಕಷ್ಟು ಜನ ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಾರೆ.......

ಅಧ್ಯಕ್ಷರು.—ಅವರು ಹೇಳುತ್ತಿರುವುದು ಇಷ್ಟೆಲ್ಲಾ ಕಾಲಹರಣ ಮಾಡುವುದು ಸರಿಯಲ್ಲ ಎಂದು ಇದಕ್ಕೆ ಅವಕಾಶ ಕೊಡಬೇಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ.—ನಿಮಗೆ ಯಾವುದಾದರೂ ಒಂದು ವಿಷಯ ಗೊತ್ತಿಲ್ಲದಿದ್ದರೆ, ವಾದ-ವಿವಾದಗಳನ್ನು ಕೇಳುತ್ತಾ ಇದ್ದೀರಲ್ಲ, ಎಲ್ಲಿಯವರೆಗೆ ಕೇಳುತ್ತಾ ಇರುತ್ತೀರಿ? ಮೂರು ದಿನಗಳವರೆಗೂ ಕೇಳುತ್ತಾ ಕುಳಿತು ಕೊಳ್ಳುತ್ತೀರಾ?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಆ ಕುರಿತು ಏನು ಹೇಳುತ್ತಾರೆ. ಹೇಳಿ ಮುಕ್ತಾಯ ಮಾಡಲಿ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಎಲ್ಲರೂ ಕುಳಿತುಕೊಳ್ಳಬೇಕು. ಇದು ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.—ಪ್ರಿವಿಲೇಜ್ ಮೋಷನ್ ತಮ್ಮ ಮುಂದೆ ಇದೆ. ಅದನ್ನು ಏನು ಮಾಡಬೇಕೆಂದು ತಾವುಗಳು ತೀರ್ಮಾನ ಮಾಡಬೇಕಾಗಿದೆ. ಈ ವಿಷಯದಲ್ಲಿ ಸಭಾನಾಯಕರಾದ ಮುಖ್ಯಮಂತ್ರಿಗಳವರು ಒಂದು ವಿಷಯವನ್ನು ತಮ್ಮ ಮುಂದೆ ಪ್ರಸ್ತಾಪ ಮಾಡಿದ್ದಾರೆ. ಈಗ ತಾವು ಯಾವ ಸ್ಟೇಜ್‌ನಲ್ಲಿ ಇದ್ದೀರಿ ಅಂದರೆ, ಈ ವಿಷಯವನ್ನು ತೆಗೆದುಕೊಳ್ಳಬೇಕೇ ಬೇಡವೇ ಎನ್ನುವ

ಹಂತದಲ್ಲಿದ್ದೀರಿ. ಇನ್ನು ಹೆಚ್ಚು ವಾದ ವಿವಾದಗಳನ್ನು ಕೇಳುವುದಕ್ಕೆ ಸಾಧ್ಯವಿಲ್ಲ. ಆ ಒಂದು ಹಂತ ಮುಗಿದು ಹೋಗಿದೆ. ಆದ್ದರಿಂದ......

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ.—ಈ ಸದನದ ನಾಯಕರು ಹೇಳಿದ ಪ್ರಕಾರ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳಬೇಕೆ, ಬೇಡವೆ ಎಂಬ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವ ಹಂತದಲ್ಲಿ ತಾವು ಇಲ್ಲ. ಈಗ ಏನಾಗಿದೆ ನಿಯಮ ೧೯೪ರ ಪ್ರಕಾರ ನೀವು ಆಕ್ಟ್ ತೆಗೆದುಕೊಳ್ಳಬೇಕೆಂದು ಸದನದ ನಾಯಕರು ಆಗಲೇ ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರುವುದನ್ನು ನಾನು ಈಗ ಹೇಳುತ್ತಾ ಇದ್ದೇನೆ. ಮುಂದೆ ಇದನ್ನು ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳಬೇಕೆ, ಬೇಡವೆ ಅಂತ ವಾದವಿವಾದವನ್ನು ಕೇಳಲಿಕ್ಕೆ ಇಲ್ಲಿ ಸ್ಕೋಪ್ ಇಲ್ಲ. ಆದುದರಿಂದ ದಯವಿಟ್ಟು ವಾದವಿವಾದವನ್ನು ಕೇಳುವುದನ್ನು ಬಿಟ್ಟು ಬಿಟ್ಟು ಮುಂದಿನ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

ಅಧ್ಯಕ್ಷರು.—ವೀರಪ್ಪನವರೇ, ಆಗುತ್ತದೆ ಅಥವಾ ಇಲ್ಲ ಎಂದು ಹೇಳಿಬಿಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೆ, ಇಲ್ಲಿ ಹಲವಾರು ಸದಸ್ಯರು ಪಾಯಿಂಟ್ ಆಫ್ ಆರ್ಡರ' ಎತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಮೊಯಿಲಿಯವರು, ನಾನು ಮಾನ್ಯ ಬೊಮ್ಮಾಯಿಯವರು ಎಲ್ಲರೂ ಮಾತನಾಡಿದ್ದಾಯಿತು. ಇಲ್ಲಿ ಪ್ರಶ್ನೆ ಏನು ಬರುತ್ತದೆ ಅಂದರೆ, ತಮ್ಮ ವ್ಯಾಪ್ತಿ, ತಮ್ಮ ಅಧಿಕಾರ, ಪಾಯಿಂಟ್ ಆಫ್ ಆರ್ಡರ್ ಕೇಳಿದ್ದರ ಬಗ್ಗೆ, ತಾವುಗಳು ಒಂದೊಂದು ತೀರ್ಮಾನ ಮಾಡಿ ಒಬ್ಬೊಬ್ಬರಿಗೆ ಅವಕಾಶವನ್ನು ಕೊಡಬೇಕಾಗಿದೆ. ಇಲ್ಲವೇ, ಎಲ್ಲವನ್ನೂ ಒಟ್ಟು ತೆಗೆದುಕೊಂಡು ತೀರ್ಮಾನ ಮಾಡಬೇಕಾಗಿದೆ. ಇದರ ಬಗ್ಗೆ ತೀರ್ಮಾನ ಮಾಡುವುದರಲ್ಲಿ ತಮಗೆ ಅಧಿಕಾರ ಜಾಸ್ತಿ ಇದೆ. ಮತ್ತು ಪುನಃ ಪಾರ್ಲಿಮೆಂಟರಿ ಪ್ರೊಸೀಜರ್ ಪ್ರಕಾರ ಕೌಲ್ ಅಂಡ್ ಶಕ್‌ಧಾರ್‌ರವರ ಪುಸ್ತಕದ ಪುಟ ೮೦೧ರಲ್ಲಿ ಏನು ಹೇಳುತ್ತಾರೆ ಅಂದರೆ;

"Points of order already decided cannot be re-opened on the plea that when it was first raised the member could not locate and quote the rule under which he wanted to raise the point of order.

On a point of order being raised, the member who is speaking at that time must give way. No debate is allowed on a point of order, but the Speaker may, if he thinks fit, hear members before giving the decision.

When two or more points of order are raised on a subject-matter, the Speaker may take them one by one and give his decision.

Sir, I quote from page 801 of Kaul and Shakdar :

"A member wishing to raise a Point of Order has the right to be heard before a decisions be given by the Speaker. On his formulating a Point of Order, the Speaker decides whether the point raised is a Point of Order and if so, gives his decision thereon which is final. Members

> cannot protest against the Speaker's ruling, to do so is a contempt of the House and the Speaker. Rulings given by the Chair cannot be discussed in the House nor can any clarification or explanation sought."

ಪುಟ ಎರಡರಲ್ಲಿ ಕೂಡ ಅದೇ ರೀತಿಯ ಅರ್ಥ ಬರುವಂತೆ ಇದೆ. ತಾವು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ಆದ್ದರಿಂದ ಎಲ್ಲಾ ಪಾಯಿಂಟ್ ಆಫ್ ಆರ್ಡರ್‌ಗಳಿಗೂ ತಾವು ರೂಲಿಂಗ್ ಕೊಡಬೇಕಾಗುತ್ತದೆ. ತಮ್ಮ ರೂಲಿಂಗ್ ತಕ್ಷಣ ಕೊಡಬಹುದು ಅಥವಾ ತಾವು ರೂಲಿಂಗ್ ಕೊಡುವುದನ್ನು ಕಾದಿರಿಸಿಟ್ಟುಕೊಳ್ಳಬಹುದು. ಆ ಅಧಿಕಾರ ತಮಗೆ ಇದೆ. Now, the subject matter is the question of privilege raised by hon'ble Member Sri K. Ramesh Kumar. On this subject matter several Points of Order have been raised. Either you may take them one by one and dispose them off or you may dispose of all the Points of orders collectively. ಈಗ ತಾವು ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಒಂದು ಪಾಯಿಂಟ್ ಆಫ್ ಆರ್ಡರ್ ಮೇಲೆ ಮತ್ತೊಂದು ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಬರುವುದಿಲ್ಲ. ಆದ್ದರಿಂದ ಈಗ ಎತ್ತಿರತಕ್ಕಂಥ ಪಾಯಿಂಟ್ ಆಫ್ ಆರ್ಡರ್‌ಗೆ ತಮ್ಮ ರೂಲಿಂಗ್ ಕೊಟ್ಟರೆ ವಿಷಯ ಪರಿಸಮಾಪ್ತಿಯಾಗುತ್ತದೆ. ತಾವು ಒಂದು ಸತ್ಸಂಪ್ರದಾಯವನ್ನು ಸಹ ಪಾಲನೆ ಮಾಡಿದಂತೆ ಆಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲ ಸ್ವಾಮಿ ಅದು ಬೇಕಾಗಿಲ್ಲ. ತಾವು ನಿಯಮ ೩೩೩ ಅನ್ನು ನೋಡಿದರೆ ಅದು ಬೇಕಾಗುವುದಿಲ್ಲ. ಈಗ ಎತ್ತಿರತಕ್ಕಂಥ ಕ್ರಿಯಾಲೋಪಗಳೆಲ್ಲವನ್ನೂ ಒಂದೇ ಸಾರಿ ಅವುಗಳಲ್ಲಿ ಏನೂ ತಿರುಳು ಇಲ್ಲವೆಂದು ಹೇಳಿ ತಳ್ಳಿ ಹಾಕಬಹುದು. ನಿಯಮ ೩೩೩ ಬಹಳ ಕ್ಲಿಯರ್ ಆಗಿದೆ. ಒಂದೆ ಸಮನೇ ಸುಮಾರು ೬೦–೭೦ ಜನ ಮಾನ್ಯ ಸದಸ್ಯರು ಒಂದರ ಮೇಲೊಂದು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದರೆ ತಾವು ಅದಕ್ಕೆಲ್ಲಾ ರೂಲಿಂಗ್ ಕೊಡಬೇಕಾದರೆ ಇಡೀ ಒಂದು ದಿವಸ ಬೇಕಾಗುತ್ತದೆ. ಈಗಲೇ ಸಾಕಷ್ಟು ಚರ್ಚೆಯಾಗಿದೆ, ಆದ್ದರಿಂದ ತಾವು ತಮ್ಮ ತೀರ್ಮಾನವನ್ನು ಕೊಡಬಹುದು ಸ್ವಾಮಿ.

ಅಧ್ಯಕ್ಷರು,—ಈಗ ಸಾಕಷ್ಟು ವಿಷಯವನ್ನು ಆ ಕಡೆಯವರು ಹೇಳಿದ್ದನ್ನೂ ಕೇಳಿದ್ದೇನೆ. ಈ ಕಡೆಯವರು ಹೇಳಿದ್ದನ್ನೂ ಕೇಳಿದ್ದೇನೆ. ಈಗ......

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪಮೊಯಿಲಿಯವರು ವಿಷಯವನ್ನು ಇನ್ನೂ ಪೂರ್ತಿ ಮಾಡಿಲ್ಲ, ಅವರು ವಿಷಯವನ್ನು ಪೂರ್ತಿ ಮಾಡಲಿ,.........

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಭಾಧ್ಯಕ್ಷರೇ, ಇವತ್ತು ಇಲ್ಲಿ ಏನಾಗಿದೆ ಎಂದರೆ ಈ ವಿಧಿ ಬಿಂದುವಿನ ವಿಧಿಲೀಲೆ.........

ಅಧ್ಯಕ್ಷರು.—ಮಾನ್ಯ ಸದಸ್ಯರು ಏನು ನೋಟೀಸ್ ಕೊಟ್ಟಿದ್ದಾರೋ ಅದಕ್ಕೆ ಸಂಬಂಧಪಟ್ಟಂತಹ ದಾಖಲೆ ಇಲ್ಲಿದೆ. ಈಗ ಇದುವರೆವಿಗೂ ನೀವು ಹೇಳಿದ್ದನ್ನು ಕೇಳಿದ್ದೇನೆ, ಆ ಕಡೆಯವರು ಹೇಳಿದ್ದನ್ನು ಕೇಳಿದ್ದೇನೆ. ಅದೆಲ್ಲಕ್ಕಿಂತ ಮೇಲಾಗಿ ಅವರು ಕೊಟ್ಟಿರತಕ್ಕಂಥ ನೋಟೀಸ್ ಡಾಕ್ಯುಮೆಂಟ್ ಏನಿದೆ ಅದಕ್ಕೆ ಸಂಬಂಧಪಟ್ಟಂತೆ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆಯೋ ಅಥವಾ ಇಲ್ಲವೋ ಎನ್ನುವುದನ್ನು ಮಾತ್ರ ತಾವು ಹೇಳಿ ಮುಗಿಸಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನು ಡಾಕ್ಯುಮೆಂಟ್ ಬಿಟ್ಟು ಮಾತನಾಡುವುದಕ್ಕೆ ಹೋಗುವುದೇ ಇಲ್ಲ. ಈಗ ತಮಗೆ ಗೊತ್ತಿದ್ದ ಹಾಗೆ, ಈ ಸದನದಲ್ಲಿ ಹೊಸ ಒಂದು ಸತ್ಸಂಪ್ರದಾಯವನ್ನು ಯಾರೂ ಹಾಕುವುದು ಬೇಡ. ಅದು ಮಾನ್ಯ ಬಂಗಾರಪ್ಪನವರ ವಿಷಯ ಬಂದಾಗ ಆಗಲಿ ಅಥವಾ ಮಾನ್ಯ ವಿರೋಧಪಕ್ಷದ ನಾಯಕರ ವಿಷಯ ಬಂದಾಗ ಆಗಲಿ ಯಾವುದೇ ರೀತಿಯ ಒಂದು ಹೊಸ ಸತ್ಸಂಪ್ರದಾಯವನ್ನು ನಾವು ಇಲ್ಲಿ ಗುಡ್ಡೆ ಹಾಕುವುದು ಬೇಡ. ಈ ಸದನದಲ್ಲಿ

ಹಿಂದೆ ನಾವು ಸಾಕಷ್ಟು ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಬಂದಿದ್ದೇವೆ. ಪ್ರಿವಿಲೇಜ್ ಮೋಷನ್ ಬಗ್ಗೆ ಕೂಡ ನಮಗೆಲ್ಲಾ ಗೊತ್ತಿದೆ. ಯಾರೇ ಒಬ್ಬ ಸದಸ್ಯರು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟರೆ ಅದನ್ನು ರೈಸ್ ಮಾಡುವಾಗ ಲೀವ್ ಮಾಡಬಹುದು, ಅಥವಾ ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡಬಹುದು ಅಥವಾ ತಾವೇ ಅದನ್ನು ವಿತ್‌ಹೆಲ್ಡ್ ಮಾಡಬಹುದು. ಆದರೆ ಇಲ್ಲಿ ವಿಷಯ ವನ್ನು ಚರ್ಚೆಗೆ ತೆಗೆದುಕೊಳ್ಳುವ ಮೊದಲೇ ಒಂದು ಬೇರೆ ಸತ್ಸಂಪ್ರದಾಯವನ್ನು ಹಾಕುವುದು ಬೇಡ. ತಮಗೆ ಗೊತ್ತಿದ್ದ ಹಾಗೆ ಹಿಂದಿನ ಎಲ್ಲಾ ಸಭಾನಾಯಕರು ಒಂದು ಪರಂಪರೆಯನ್ನು ಹಾಕಿಕೊಂಡು ಬಂದಿದ್ದಾರೆ. ಈಗ ಮಾನ್ಯ ಸದಸ್ಯರು ಕಳುಹಿಸಿಕೊಟ್ಟಿರುವ ಪ್ರಿವಿಲೇಜ್ ಮೋಷನ್‌ನಲ್ಲಿ ತಮಗೆ ಚ್ಯುತಿ ತಂದಿದ್ದಾರೆ, ತಮಗೆ ಅವಮಾನ ಆಗಿದೆ ಎಂದು ಪ್ರತಿಪಾದನೆ ಮಾಡಿ ಈ ಪ್ರಿವಿಲೇಜ್ ಮೋಷನ್ ತಂದಿದ್ದಾರೆ. ಅವರು ತಂದಿರತಕ್ಕಂಥ ಪ್ರಿವಿಲೇಜ್ ಮೋಷನ್‌ನಲ್ಲಿ ಸಬ್ಜೆಕ್ಟ್ ಕ್ಲಿಯರ್ ಆಗಿದೆ. ಆದ್ದರಿಂದ ನಾವು ತಮಗೆ ಅಸಿಸ್ಟ್ ಮಾಡುವುದಕ್ಕೆ ಮಾತನಾಡುತ್ತಿದ್ದೇವು. ತಾವು ಅವಕಾಶ ಇಲ್ಲ, ಬೇಡವೆಂದು ಹೇಳಿದ್ದರೆ ನಾವು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ತಮಗೆ ಮಾನ್ಯ ಸಭಾ ನಾಯಕರೂ ಸಹ ಅಸಿಸ್ಟ್ ಕೊಟ್ಟಿದ್ದು ಇದೆ. ಅದೇ ರೀತಿಯಲ್ಲಿ ಸನ್ಮಾನ್ಯ ಸಚಿವರಾದಂಥ ಶ್ರೀಮಾನ್ ರಾಮಯ್ಯನವರು ಮಾತನಾಡುತ್ತಾ ಹೇಳಿದರು, ಇದು ಗಂಭೀರವಾಗಿ ಚರ್ಚೆಯಾಗಬೇಕು, ಉನ್ನತ ಮಟ್ಟದಲ್ಲಿ ಚರ್ಚೆಯಾಗಬೇಕು, ನ್ಯಾಯಯುತವಾದಂಥ ಚರ್ಚೆಯಾಗಬೇಕು ತಾವು ನ್ಯಾಯಯುತ ವಾದಂಥ ಒಂದು ನಿರ್ಣಯವನ್ನು ಕೈಕೊಳ್ಳಬೇಕು ಎಂದು ಮಾನ್ಯ ಸಚಿವರು ಹೇಳಿದರು, ಅವರು ಹೇಳಿದಂಥ ಮಾತನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ ಅವರು ಹೇಳಿದ ಹಾಗೆ ನ್ಯಾಯಯುತ ವಾಗಿ ಚರ್ಚೆಯಾಗಬೇಕು, ನ್ಯಾಯಯುತವಾದ ನಿರ್ಣಯ ಕೈಗೊಳ್ಳಬೇಕೆಂದು ಹೇಳುತ್ತಾ ಹೇಳುತ್ತಾ ಅವರು ಕುಣಿಗಲ್ ಕಡೆಗೆ ಹೊರಟು ಹೋದರು. ಇಲ್ಲಿ ವಿಷಯದ ತೀವ್ರತೆಯನ್ನು ಅರಿತುಕೊಳ್ಳಬೇಕು. ಇವತ್ತು ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಮೇಶ್‌ಕುಮಾರ್‌ರವರು ಏನು ಒಂದು ಸೂಚನೆಯನ್ನು ತಂದಿದ್ದಾರೋ ಆ ಸೂಚನೆ ಈ ಸದನದ ಘನತೆ ಮತ್ತು ಗೌರವವನ್ನು ಕಾಪಾಡತಕ್ಕಂಥ ಶಬ್ದಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಬಳಸಿಲ್ಲ, ಅದರಿಂದ ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ, ಎಂದು ಹೇಳಿ ಅವರು ಸಹ ಮನವರಿಕೆ ಮಾಡಿಕೊಡಲು ತಮಗೆ ಅಸಿಸ್ಟ್ ಮಾಡಿದ್ದಾರೆ. ಮತ್ತು ಮಾನ್ಯ ಸದಸ್ಯರು ನೋಟೀಸ್‌ನಲ್ಲಿ ಏನು ಕೊಟ್ಟಿದ್ದಾರೆ ? ತಮ್ಮ ಘನತೆ ತಮ್ಮ ಗೌರವಕ್ಕೆ ಧಕ್ಕೆಯಾಗಿದೆ ಎಂದು ಅವರು ತಮ್ಮನ್ನು ಡಿಫೆಂಡ್ ಮಾಡಿದ್ದಾರೆ. ಹಿಂದೆ ಸದನದಲ್ಲಿ ಯಾರಾದರೂ ಮಾನ್ಯ ಸದಸ್ಯರು ಅವಾಚ್ಯ ಶಬ್ದಗಳನ್ನು ಬಳಸಿದರೆ ಆ ಪದಗಳನ್ನು ತಾವು ಕಡತದಿಂದ ತೆಗೆದು ಹಾಕಿರುವಂಥಾದ್ದು ಸಹ ಇದೆ. ಆಗ ಯಾವುದೇ ಪ್ರಿವಿಲೇಜ್ ಮೋಷನ್ ಬರಲಿಲ್ಲ. That is absolutely your decision or convincing of the matter. ಈ ಘಟನೆ ನಡೆದಿದ್ದು ದಿನಾಂಕ ೨೭ನೇ ಫೆಬ್ರವರಿ ತಿಂಗಳಲ್ಲಿ. ಆದರೆ ಈ ಪ್ರಿವಿಲೇಜ್ ಮೋಷನ್ ಅನ್ನು ಮಾನ್ಯ ಸದಸ್ಯರು ಮಾರನೆ ದಿನ ತರಲಿಲ್ಲ. ಇದು ಒಂದು ಭಾವೋದ್ವೇಗದಿಂದ ನಡೆದಂಥ ಘಟನೆ. ಇವತ್ತು ಒಂದು ಹೊಸದಾದಂಥ ವಿಚಾರವನ್ನು ನಮ್ಮ ಮಾನ್ಯ ಸದಸ್ಯರು ಎತ್ತಿದ್ದಾರೆ. ಇದರಲ್ಲಿ ಏನು ಇದೆ. ತಾವು ಕೊಟ್ಟಿರತಕ್ಕಂಥ ದಸ್ತಾವೇಜು ನನ್ನ ಬಳಿ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ತಾವು ಈಗ.........

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪಮೊಯ್ಲಿಯವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡಿ ಮುಗಿಸಲಿ. ಅವರು ಎಷ್ಟು ಸಾರಿ ಕುಳಿತುಕೊಂಡು ಮತ್ತೆ ಮತ್ತೆ ಮೇಲಕ್ಕೆ ಏಳಬೇಕು......

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಿ ಮುಗಿಸುತ್ತೇನೆ. ಮಾನ್ಯ ಸಭಾನಾಯಕರು ಸೇರಿದಂತೆ ಎಷ್ಟು ಸಾರಿ ಇಂಟ್ರಪ್‌ಷನ್ ಮಾಡುವುದು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು.........

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತ ಶ್ರೀ ವೀರಪ್ಪಮೊಯ್ಲಿಯವರು ಮಾತನಾಡಿ ಮುಗಿಸಲಿ. ಆಮೇಲೆ ಬೇಕಾದರೆ ಮಾನ್ಯ ಸಭಾನಾಯಕರು ಮಾತನಾಡಲಿ......

(ಗೊಂದಲ)

ಅಧ್ಯಕ್ಷರು.—ವೀರಪ್ಪಮೊಯ್ಲಿಯವರೇ ಸಭಾನಾಯಕರು ಏನು ಹೇಳುತ್ತಾರೋ ಕೇಳೋಣ, ತಾವು ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೇನು ?

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ಸದಸ್ಯರು ಮಾತನಾಡುವಾಗ ಸ್ವಲ್ಪ ಸೌಜನ್ಯತೆಯಿಂದ ಕೇಳಬಾರದೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ ಅಧ್ಯಕ್ಷರೇ, ನಾನು ಬೇಗ ಮುಗಿಸುತ್ತೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು ನೀವು ಒಂದು ಹೊಸ ಪರಂಪರೆಯನ್ನು ಹಾಕುತ್ತಿದ್ದೀರಿ ಎಂದು. ಬಹುಶಃ ಅವರು ಏತಕ್ಕೆ ಹೇಳಿದರೋ ನನಗೆ ಗೊತ್ತಿಲ್ಲ. ಯಾರು ಹೊಸ ಪರಂಪರೆಯನ್ನು ಹಾಕಿದ್ದಾರೆ ? ಈಗ ಈ ಪ್ರಿವಿಲೇಜ್ ಮೋಷನ್ ವಿಚಾರದಲ್ಲಿ ತಮಗೂ ಡಿಸ್‌ಕ್ರಿಷನ್ ಇಲ್ಲ. ಇನ್ನು ನಿಲುವಳಿ ಸೂಚನೆಯಲ್ಲಿ ತಮಗೆ ಡಿಸ್‌ಕ್ರಿಷನ್ ಇದೆ. ಆ ಬಗ್ಗೆ ತಾವು ಯೋಚನೆ ಮಾಡಿ ನಿಲುವಳಿ ಸೂಚನೆಯ ಮಹತ್ವವನ್ನು ತೂಗಿ ನೋಡಿ ವಿಷಯ ಮಹತ್ವದ್ದು ಆಗಿದ್ದರೆ ಆಗ ತಾವು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟು ಪ್ರಿಲಿಮಿನರಿಯಾಗಿ ಎರಡೂ ಕಡೆಯ ಆರ್ಗ್ಯುಮೆಂಟ್ಸ್ ಅನ್ನು ಕೇಳಬಹುದು .....

SRI M. VEERAPPA MOILY.—This is a threat to the speaker.

(Interruption)

SRI M. VEERAPPA MOIY.—You cannot cow down the speaker.

(Interruption)

7-30 P. M.

SRI RAMAKRISHNA HEGDE.—

"When a member seeks to raise a question of privilege agianst another member, the speaker, before giving his consent to the raising of the matter in the House, always gives an opportunity to the member complained against to place before the Speaker or the House such fact as may be pertinent to the matter."

It is only to the Member against whom notice is given and not any other member. It is very very clear under the rules. I am only quoting rules, when it is said so, the Speaker has no option I am sorry to say this, These rules have been framed by this House. Wherever the Speaker shall have to do, he shall have to do. Again it is also said.

"The Speaker is empowered to refer suo moto any question of privilege or contempt of the Committee of

> privileges for Examination, investigation and report. In doing so, the Speaker need not bring the matter before the House for consideration and decision as to whether the matter be so referred to the Committee."

He need not bring before this House at all. And it is a matter of breach of privilege of this House and therefore no need for any disussion. According to rules, you have to call the members who are in favour of this motion.

SRI M. VEERAPPA MOILY.—I will answer this point. Permit me to answer this.

ಅಧ್ಯಕ್ಷರು.—ಅವರು ಚರ್ಚೆಗೆ ಅವಕಾಶ ಇಲ್ಲವೆಂದು ಹೇಳುತ್ತಾರೆ. ಮೆಂಬರ್ ಕನ್‌ಸರ್ನ್ಡ್ ಯಾರು ಇರುತ್ತಾರೆ, ಅವರು ಮಾತನಾಡಬಹುದು. ಬಂಗಾರಪ್ಪನವರ ಪರವಾಗಿ ಹೇಳುತ್ತೀರಾ "ಹೌದು" ಎಂದರು, ಅವರ ಪರವಾಗಿ ಹೇಳುತ್ತಿದ್ದರೆ, ಸರಿ. ಬಂಗಾರಪ್ಪನವರು ಹೇಳುತ್ತಾರೆ, ಎಂದರೆ, ಅವರು ಹೇಳಲಿ. ಇಲ್ಲ, ಅವರ ಪರವಾಗಿ ಹೇಳುವುದಾದರೆ ಹೇಳಿ. ಪಾಯಿಂಟ್ ಆಫ್ ಆರ್ಡರ್ ಈ ಕಡೆಯವರೂ ಎತ್ತಿದ್ದಾರೆ, ಆ ಕಡೆಯವರೂ ಎತ್ತಿದ್ದಾರೆ. ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಾನು ಹೇಳಿದ್ದೇನೆ. ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಹತ್ತಾರು ಜನರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಇಲ್ಲಿ ಅಡ್ವಾನ್‌ಟೇಜ್, ಡಿಸ್ ಅಡ್ವಾನ್‌ಟೇಜ್ ಪ್ರಶ್ನೆ ಅಲ್ಲ. ಮಾನ್ಯ ರಮೇಶ್‌ಕುಮಾರ್ ಅವರು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ ಮುಂದಿನ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ. ಮಾನ್ಯ ಬಂಗಾರಪ್ಪನವರು ಈಗ ಹೇಳಬೇಕು. ಇಲ್ಲವೇ ಅವರ ಪರವಾಗಿ ಹೇಳುವುದಾದರೆ ಹೇಳಲಿ. ಒಂದು ವೇಳೆ ಅವರೇ ಹೇಳುವಂತಿದ್ದರೆ, ಮಾನ್ಯ ಮೊಯ್ಲಿ ಯವರು ಹೇಳುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಯಾವ ವಿಚಾರದಲ್ಲಿ ಹೇಳಬೇಕೆಂಬ ಬಗ್ಗೆ ನನ್ನ ಮೇಲೆ ಹಕ್ಕುಬಾಧ್ಯತಾ ನಿರ್ಣಯ ತಮ್ಮ ಒಪ್ಪಿಗೆಗೋಸ್ಕರ ಮಂಡನೆ ಮಾಡಿದ್ದಾರೆ......

ಅಧ್ಯಕ್ಷರು.—ಇದು ಆಗುತ್ತದೋ, ಇಲ್ಲವೋ ಎಂಬುದನ್ನು ಹೇಳಿ.

SRI M. VEERAPPA MOILY.—We are questioning the admissability of this motion. We will have to know, how did you consent. We are questioning the propriety.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನನ್ನ ಮೇಲೆ ಆಗಲೀ, ಮಾನ್ಯ ಸದಸ್ಯರ ಮೇಲೆ ಆಗಲೀ. ಸಚಿವರ ಮೇಲೆ ಆಗಲೀ, ಹಕ್ಕುಬಾಧ್ಯತಾ ನಿರ್ಣಯವನ್ನು ಕೊಡತಕ್ಕ ಹಕ್ಕು ನಿಯಮಾವಳಿ ಪ್ರಕಾರ ಇದೆ. ಇದರ ಬಗ್ಗೆ ಅಂತಿಮ ತೀರ್ಮಾನವನ್ನು ತಾವು ಕೊಡಬಹುದು. ಇಲ್ಲಿ ಈ ವಿಚಾರವನ್ನು ಮಾನ್ಯ ರಮೇಶ್‌ಕುಮಾರ್ ಅವರು ಪ್ರಸ್ತಾಪ ಮಾಡಿದ್ದಾರೆ. ಆ ಕಡೆ ಸಭಾ ನಾಯಕರಲ್ಲದೆ, ಅನೇಕ ಸಚಿವರೂ ಮಾತನಾಡಿದ್ದಾರೆ.

ಅಧ್ಯಕ್ಷರು.— ಬರೀ ಟೇಪಿನ ಬಗ್ಗೆ ಮಾತ್ರ ಮಾತನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಈ ವಿಚಾರದಲ್ಲಿ ಬಂಗಾರಪ್ಪನವರು ಸಂಬಂಧಪಟ್ಟವರು. ಅವರು ಮಾತನಾಡಲಿ. ಬೇರೆ ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಸಭಾಧ್ಯಕ್ಷರೇ, ಈ ವಿಚಾರವನ್ನು ಪ್ರಸ್ತಾಪ ಮಾಡಿದಮೇಲೆ ಬರೀ ಕ್ರಿಯಾಲೋಪದ ಬಗ್ಗೆ ಸಂಪುಟದ ಸಚಿವರು ಮಾನ್ಯ ಸದಸ್ಯರು ಮಾತನಾಡಿದ್ದರೆ ಈ ಪ್ರಶ್ನೆ ಬೇರೆ ಆಗುತ್ತಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅವರು ಬರೀ ಕ್ರಿಯಾಲೋಪದ ಬಗ್ಗೆ ಮಾತನಾಡಲಿಲ್ಲ. ನಿಯಮಾವಳಿ ೧೯೪ರ ವ್ಯಾಪ್ತಿಯನ್ನು ಕೂಡ ಪ್ರಸ್ತಾಪ ಮಾಡಿದರು. ಎಲ್ಲವೂ

ಕ್ರಿಯಾಲೋಪವಾಗುತ್ತವೆ. ಆದ್ದರಿಂದ ಇವತ್ತು ಅಂತಿಮವಾಗಿ ಕೇಳತಕ್ಕ ಅವಶ್ಯಕತೆ ಇಲ್ಲ. ನೀವು ತೀರ್ಮಾನ ಮಾಡಬೇಕು. We have no objection to the matter being referred to the Committee of Privileges. Admissibility ಎನ್ನತಕ್ಕಂಥ ಅಭಿಪ್ರಾಯವನ್ನು ಕುರಿತು ಅವರು ಮಾತನಾಡಿದ್ದಾರೆ.

ಅಧ್ಯಕ್ಷರು. – ನಿಮ್ಮ ಅಭಿಪ್ರಾಯ ಕೊಡಿ, ಈಗ ನೀವು ಹೇಳುವುದಕ್ಕೆ ಅಧಿಕಾರ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ನಮ್ಮ ಅಭಿಪ್ರಾಯವನ್ನು ಕೇಳ ಬೇಕಾದರೆ ಮಾನ್ಯ ಕೃಷ್ಣನ್‌ರವರೂ, ಮಾನ್ಯ ವೆಂಕಟರಾಮಯ್ಯನವರು, ಇವರೆಲ್ಲಾರೂ ಕೂಡ ಸಂಪೂರ್ಣವಾಗಿ......

SRI ABDUL NAZEER SAB.—There is no question of admissability, This is not an adjournment motion.

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ಎಂ. ಎಸ್. ಕೃಷ್ಣನ್‌ರವರೂ, ವೆಂಕಟರಾಮಯ್ಯ ನವರೂ ಮಾತನಾಡಿದ್ದಾರೆ. ಮಾನ್ಯ ವೀರಪ್ಪಮೊಯ್ಲಿಯವರೂ, ಮಾನ್ಯ ಶ್ರೀನಿವಾಸರವರೂ ಮಾತನಾಡಿದ್ದಾರೆ. ಅವರು ಮಾತನಾಡಿದರೂ ಅಂತಿಮವಾಗಿ ಮುಗಿಸುವುದಕ್ಕಾಗಲಿಲ್ಲ. ಅನೇಕ ಕ್ರಿಯಾಲೋಪಗಳ ಸರಮಾಲೆ, ಮಧ್ಯೆ ಮಧ್ಯೆ ಪ್ರವೇಶ, ಹೀಗಾಗಿ ಮಾತನ್ನು ಮುಗಿಸುವುದಕ್ಕಾಗಲಿಲ್ಲ. ಈ ಸಂದರ್ಭದಲ್ಲಿ ತಾವು ಹೇಳಿದಿರಿ, ಬಂಗಾರಪ್ಪನವರು ಮಾತನಾಡಲಿ ಇಲ್ಲ, ಅವರ ಪರವಾಗಿ, ನೀವು ಮಾತನಾಡಿ ಎಂದು ಹೇಳಿದಿರಿ. ಇಲ್ಲಿ ಸಭಾಧ್ಯಕ್ಷರು ಪೂರ್ತಿ ಆಲಿಸಬೇಕು. ನನ್ನ ವಿಚಾರದಲ್ಲಿ ನಾನಂತೂ ಹೇಳಿಕೆ ಕೊಡಲೇಬೇಕು. ಏಕೆಂದರೆ, ತಾವು ಅಂತಿಮ ತೀರ್ಮಾನ ಕೊಡಬೇಕು. ಆ ಕಡೆ ಕುಳಿತಿರತಕ್ಕ ಮಾನ್ಯ ಸದಸ್ಯರು......

(Interruptions)

SRI M. VEERAPPA MOILY.—I have not yielded. You have not permitted them

(ಗೊಂದಲ)

ಶ್ರೀ ಧರ್ಮಸಿಂಗ್.—ತಾವು ಇದನ್ನು ಹತೋಟಿ ಮಾಡಬೇಕು, ಇಲ್ಲದೇ ಹೋದರೆ ತೊಂದರೆ ಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮೊಯಿಲಿಯವರ ವಾದವನ್ನು ಸಂಪೂರ್ಣವಾಗಿ ಕೇಳಿದ ಮೇಲೆ......

ಅಧ್ಯಕ್ಷರು.—ಅವರು ಏನು ಹೇಳಬೇಕೋ ಅದನ್ನು ಹೇಳಿದ್ದಾರೆ, ಈಗ ನೀವು ಹೇಳಿ. ಬಂಗಾರಪ್ಪ ನವರೇ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಆ ಕಡೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಹಾಗೆ ಈ ಕಡೆಯವರಿಗೂ ಕೊಡಿ,

ಅಧ್ಯಕ್ಷರು.—ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳನ್ನು ಮಾತನಾಡಿ ಅಂತ ಹೇಳಿದೆ, ಅವರ ಪರವಾಗಿ ಬೇರೆ ಮಂತ್ರಿಗಳು ಮಾತನಾಡುತ್ತೇನೆಂದು ಹೇಳಿದರು. ಅವರು ಹಾಗೆ ಹೇಳಿದ್ದಕ್ಕೆ ಅವರನ್ನು ಮಾತನಾಡಿ ಅಂತ ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಬಂಗಾರಪ್ಪನವರು ವೀರಪ್ಪಮೊಯ್ಲಿ ತರಹ ಮಾತನಾಡುವುದಕ್ಕೆ ಸಾಧ್ಯವಿಲ್ಲ, ವೀರಪ್ಪಮೊಯ್ಲಿ ಅವರು ಬಂಗಾರಪ್ಪ ತರಹ ಮಾತನಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—ಆದುದರಿಂದಲೇನೇ ನೀವು ಮಾತನಾಡಿ ಮುಗಿಸಿ ಅಂತ ಹೇಳಿದ್ದು.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೇ, ನನ್ನ ವಿಚಾರ ಧಾರೆ, ನನ್ನ ಧಾಟಿ ವೀರಪ್ಪ ಮೊಯ್ಲಿ ಅವರಿಗೆ ಇಲ್ಲ. ವೀರಪ್ಪಮೊಯ್ಲಿ ಅವರ ವಿಚಾರ ಧಾರೆ, ಧಾಟಿ ನನಗೆ ಇಲ್ಲ.

(ಗೊಂದಲ)

ಅಧ್ಯಕ್ಷರು.--ಹಾಗಾದರೆ ಈಗ ಮಾತನಾಡುವ ಹಕ್ಕನ್ನು ತಮಗೇನೇ ಕೊಟ್ಟಿದ್ದೇನೆ. ನೀವು ಮಾತನಾಡಿ. ಇನ್ನು ಬಂಗಾರಪ್ಪನವರನ್ನು ಉಳಿದು ಬೇರೆ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ತಾವೆಲ್ಲಾ ಕೂಡಿರಿ.

(ಗೊಂದಲ)

ಅಧ್ಯಕ್ಷರು.--ದಯವಿಟ್ಟು ಎಲ್ಲಾರೂ ಕೂಡಿರಿ ಹೇಳುತ್ತೇನೆ. ನೀವು ಪಾಯಿಂಟ್ ಆಫ್ ಆರ್ಡರ್ ಎತ್ತಿದಿರಿ, ಅನಂತರ, ಈ ಕಡೆಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ಮುಖ್ಯಮಂತ್ರಿಗಳ ಪರವಾಗಿ ಸಂಬಂಧಪಟ್ಟ ಮಂತ್ರಿಗಳು ನಾನು ಮಾತನಾಡುತ್ತೇನೆಂದು ಹೇಳಿದರು. ಅವರು ಮಾತ ನಾಡಲಿ ಅಂತ ಅವಕಾಶ ಕೊಟ್ಟೆ. ಅದೇರೀತಿಯಾಗಿ ತಮ್ಮ ಕಡೆಯುವರೂ ಸಹ ಪಾಯಿಂಟ್ ಆಫ್ ಆರ್ಡರ್ ಎತ್ತಿದರು, ಆದರಿಂದ ತಮ್ಮ ಕಡೆಯುವರೆಗೂ ಅವಕಾಶ ಕೊಟ್ಟಿದ್ದೇನೆ. ಇನ್ನು ಚರ್ಚೆಗೆ ಆಸ್ಪದವಿಲ್ಲ. ಮಾನ್ಯ ಮಂತ್ರಿಗಳು ಯಾವ ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿ ಹಿಡಿದು ಹೇಳಿ ದರೋ ಆ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿ ಹಿಡಿದಿದ್ದೇನೆ. ಇನ್ನು ಈಗ ಯಾರೂ ಮಾತನಾಡು ವುದು ಬೇಡ. ಈಗ ಬಂಗಾರಪ್ಪನವರು ಒಬ್ಬರೇ ಮಾತನಾಡಲಿ ಅಂತ ಹೇಳಿದ್ದೇನೆ. ಅವರೊಬ್ಬರೇ ಮಾತನಾಡಲಿ.

(ಗೊಂದಲ)

SRI M. VEERAPPA MOILY.--I have got a point of Order.

ಅಧ್ಯಕ್ಷರು.—ಯಾವುದರ ಬಗ್ಗೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ಅದರ ಬಗ್ಗೆಯೇ ಹೇಳುತ್ತೇನೆ.

ಅಧ್ಯಕ್ಷರು.—ಹಾಗಾದರೆ ಅದರ ಮೇಲೆ ಪಾಯಿಂಟ್ ಆಫ್ ಆರ್ಡರ್ ಇಲ್ಲ. ಮೊದಲು ಯಾವು ದರ ಮೇಲೆ ಪಾಯಿಂಟ್ ಆಫ್ ಆರ್ಡರ್ ಅನ್ನುವುದನ್ನು ತಿಳಿಸಿ.

ಶ್ರೀ ಎಂ. ವಿರಪ್ಪಮೊಯ್ಲಿ.—ಅದರ ಮೇಲೆನೇ ಪಾಯಿಂಟ್ ಆಫ್ ಆರ್ಡರ್ ಇದೆ, ತಿಳಿಸು ತ್ತೇನೆ, ಅವಕಾಶ ಕೊಡಿ.

ಅಧ್ಯಕ್ಷರು.—ಯಾವ ರೂಲು ಅನ್ನುವುದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹೇಳುತ್ತೇನೆ, ಅವಕಾಶ ಕೊಡಿ. ನಾನು ಈ ಒಂದು ವಿಧಿ ಬಿಂದುವಿನ ಮೇಲೆ ಎತ್ತಿದ್ದೇನೆ.

ಅಧ್ಯಕ್ಷರು.—ಯಾವ ರೂಲು ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ರೂಲು ೧೯೦ ರ ಪ್ರಕಾರ ಪ್ರಿವಿಲೇಜ್ ಮೋಷನ್ ಏನು ಕೊಟ್ಟಿದ್ದಾರೆ ಅದರ ಅಡ್ಮಿಸಿಬಿಲಿಟಿ ಬಗ್ಗೆ ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಆದುದ ರಿಂದ ಸನ್ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ಏನು ಹೇಳುತ್ತೇನೆ ಅದನ್ನು ಕೇಳಿ ಅನಂತರ ತಾವು ರೂಲಿಂಗ್ ಕೊಡಿ.

(ಗೊಂದಲ)

ಅಧ್ಯಕ್ಷರು.—ತಾವೆಲ್ಲಾ ಕೂಡಿರಿ. ಮಾನ್ಯ ಮುಖ್ಯಮಂತ್ರಿಗಳು ಏನು ಒಂದು ಕ್ರಿಯಾಲೋಪ ವನ್ನು ಎತ್ತಿ ಮಾತನಾಡಿದರು ಅದನ್ನು ಎತ್ತಿಹಿಡಿದಿದ್ದೇನೆ. ಆದುದರಿಂದ ಇನ್ನು ಯಾರಿಗೂ ಮಾತ ನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಆ ರೂಲು ಈ ಪುಸ್ತಕದಲ್ಲಿದೆ ನೋಡಿ.

ಶ್ರೀ ಎಂ. ವೀರಪ್ಪಮೊಯ್ಲಿ.--ವಿರೋಧ ಪಕ್ಷದವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಹೇಳಿದಾಗ ಈರೀತಿ ಪುಸ್ತಕ ತೋರಿಸುತ್ತೀರಿ......

ಅಧ್ಯಕ್ಷರು.--ನಾನು ನಿಮ್ಮ ಪಾಯಿಂಟ್ ಆಫ್ ಆರ್ಡರನ್ನೂ ಕೇಳಿದ್ದೇನೆ. ದಯವಿಟ್ಟು ಈ ಪುಸ್ತಕದಲ್ಲಿ ಏನು ಇದೆ ಅದನ್ನೂ ನೋಡಿ. ಇವರು ಹೇಳಿದ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿ ಹಿಡಿದಿರುವುದರಿಂದ ಬೇರೆಯವರು ಮಾತನಾಡುವುದಕ್ಕೆ ಅವಕಾಶ ಇಲ್ಲ. ತಮಗೆ ಹೇಳಬೇಕಾದರೆ There is a force in the point of Order raised by the Hon'ble Chief Minister. ಆದ್ದರಿಂದ ಇದರ ಬಗ್ಗೆ ಮಾತನಾಡಲು ಬಂಗಾರಪ್ಪನವರಿಗೆ ಅವಕಾಶ ಕೊಟ್ಟಿದ್ದೇನೆ. ಬೇರೆ ಯಾರಿಗೂ ಅವಕಾಶ ಕೊಡುವುದಿಲ್ಲ.

(ಗೊಂದಲ)

SRI M. VEERAPPA MOILY.--In addition to my main point of order there is another point of order. Whether it is allow for the Honl Speaker to give a ruling to stop any speaker in the middle.

SRI M. RAGHUPATAHY.--Yes, the Speaker has got a right to do so.

(Interruption)

SRI M. VEERAPPA MOILY.--I have a right to speak and a right to conclude too.

MR. SPEAKER.--Provided I give the permission.

(INTERRUPTION)

MR. SPEAKER.--Nothing will go on record. There is a force in what the Chief Minister has said. He has brought it to my notice that no person other than the person concerned should speak.

SRI M. VEERAPPA MOILY.--There is no force in the point of order.

(INTERRUPTION)

SRI M. VEERAPPA MOILY.--Shall I contiune ?

ಅಧ್ಯಕ್ಷರು.--ತಾವು ಕೂಡಿರಿ. ನೀವು ಯಾವ ರೂಲು ಅನ್ನುವುದು ಹೇಳಿಲ್ಲ.

ಶ್ರಿ ಎಂ. ವೀರಪ್ಪ ಮೊಯ್ಲಿ.--ತಾವು ೧-೨ ನಿಮಿಷ ಯಿಲ್ಡ್ ಆಗಬೇಕು ಎಂದು ಹೇಳುತ್ತೇನೆ. ಈ ಸದನದ ಸದಸ್ಯರ ಸೌಜನ್ಯತೆ ಬಗ್ಗೆ ದುರುಪಯೋಗವಾತಕ್ಕಂಥಾ ಕಾಲದಲ್ಲಿ......

MR. SPEAKER.--But it is subject to rules.

(Interruption)

SRI R. VENKATARAMAIAH.--I read from Kaul and Shakdher.

"When a complaint of an alleged breach of privilege or contempt of the House is made by a member the proceedings in the House dealing with that complaint differ somewhat according as the person implicated is a member or a stranger."

There are two categories. One is member ; the other is stranger. "The main point of difference in the two cases is that before making a complaint against a member, a notice is given to him beforehand as a matter of courtesy. Further, when a member seeks to arise question of privilege against another member, the Speaker as already

stated, before giving his consent to the raising of the matter in the House, gives an opportunity to the member complained against, to place before the Speaker or the House such facts as he may have on the question.'

As a matter of courtesy, it is only Mr. Bangarappa, who has a right to speak now.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ, ಹೇಳಿದರು. ಈಗ ಮಾನ್ಯ ಆರ್. ವೆಂಕಟರಾಮಯ್ಯನವರೂ ಸಹ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರು. ಇವರು ಇಬ್ಬರೂ ಹೇಳಿರುವುದರಲ್ಲಿ ಫೋರ್ಸ್ ಇದೆ. ನಾನು ಅದನ್ನು ಹೇಳಿದ್ದೇನೆ. ಈಗ ಈ ಸಭೆಯನ್ನು ನಡೆಸುವುದಕ್ಕೆ ಅವಕಾಶ ಕೊಡಲಿಲ್ಲ ಎಂದರೆ ಅದು ಸರಿಯಲ್ಲ. ಮಾನ್ಯ ಸಭಾನಾಯಕರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಅವರು ಹೇಳಿದಂಥಾ ವಿಷಯಗಳನ್ನು ನಾನೂ ಕೂಡ ನೋಡಿದ್ದೇನೆ. ಅದನ್ನು ಬೇಕಾದರೆ ಈಗ ಓದುತ್ತೇನೆ. But it is my duty to give an opportunity to Mr. Bangarappa ಅವರೂ ಓದಿ ಹೇಳಿದ್ದಾರೆ, ಇವರೂ ಓದಿ ಹೇಳಿದ್ದಾರೆ...

SRI M. VEERAPPA MOILY.—If you could yield for a minute ನಾನು ತಮ್ಮ ವಿಷಯದ ಮೇಲೆ ಬರುವುದಿಲ್ಲ. ಸನ್ಮಾನ್ಯ ಸಭಾನಾಯಕರು ಇದರ ಬಗ್ಗೆ ಏನು ಹೇಳಿದರು, ಅವರು ಪಾಯಿಂಟ್ ಆಫ್ ಆರ್ಡರ್‌ನ್ನು ಏನು ರೈಸ್ ಮಾಡಿದರು ಹಾಗೆಯೇ ಶ್ರೀಮಾನ್ ಆರ್. ವೆಂಕಟರಾಮಯ್ಯನವರೂ ಕೂಡ ಪಾಯಿಂಟ್ ಆಫ್ ಆರ್ಡರ್ ಎತ್ತಿ ಹೇಳಿದರು. ಈ ಸದನದ ಯಾವ ಸದಸ್ಯರಿಗೇ ಆಗಲಿ, ಸಭಾನಾಯಕರಿಗಾಗಲಿ ಈ ವಿಧಿಬಿಂದುವನ್ನು ಎತ್ತಿ ಹೇಳುವ ಹಕ್ಕು ಇದೆ. That itself will not become a judgement that it is to be upheld by the Hon. Speaker. ಅದಾದ ಮೇಲೆ ನಾವು ಹೇಳಿದ್ದು. ಅದು ಸರಿಯಲ್ಲ ಎಂದು ನೀವು ಹೇಳಿದರೆ ಆ ಬಗ್ಗೆ ಪುನಃ ನಾವು ಸಬ್‌ಮಿಟ್ ಮಾಡಬೇಕು ಎಂದು ಮುಂದೆ ಬಂದಾಗ ತಾವು ಅವರು ಹೇಳಿದ್ದೇ ಸರಿ ನೀವು ಹೇಳಬೇಡಿ ಅಂತ ಹೇಳುವುದು ಏನು ಇದೆ ಈ ವಿಧಿಬಿಂದುವಿನ ಪ್ರಕಾರ ಅದರ ಬಗ್ಗೆ ತಮಗೆ ಇರತಕ್ಕಂಥಾ ಅಧಿಕಾರವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಅದರ ಮೇಲೆ ನಾನು ಕೊಶ್ಚನ್ ಮಾಡುವುದಿಲ್ಲ. ಇದರ ಮೇಲೆ ತೀರ್ಪು ಕೊಡುವ ಮೊದಲು ಈ ಕಡೆಯವರನ್ನು ಕೇಳಬೇಕಾಗುತ್ತದೆ. ಏಕೆಂದರೆ, This is a question of point of order. ಇದು ಒಂದನೆಯದು. ಎರಡನೆಯದಾಗಿ, ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದರು, ತಮಗೆ ಆಪ್ಷನ್ನೇ ಇಲ್ಲ ಎಂದು. ಹಾಗಾದರೆ ತಮಗೆ ಆಪ್ಷನ್ ಇಲ್ಲ ಎಂದು ರೂಲ್‌ನಲ್ಲಿ ಇಲ್ಲ. ಆದಕ್ಕೋಸ್ಕರ ನಾನು ವಿಧಿಬಿಂದು ಎತ್ತಿದೆ. ಅವರು ತಮಗ ಏನೂ ಆಪ್ಷನ್ ಇಲ್ಲ ಎಂದು ಉದ್ಧರಣೆ ಮಾಡಿದರು. ಆ ಉದ್ಧರಣೆ ಸರಿಯಾಗಿಲ್ಲ.

ಅಧ್ಯಕ್ಷರು.—ತಾವು ಏನು ಹೇಳಿದಿರಿ...

SRI M. VEERAPPA MOILY.—On his Point of Order I am submitting to this House ಇದರಲ್ಲಿ ನಿಮಗೂ ಆಪ್ಷನ್ ಇಲ್ಲ ಅಂದರೆ ಏನರ್ಥ. ಹಾಗಾದರೆ ನಿಯಮ ೧೯೩೩ನಲ್ಲಿ ತಾವು ಏನು ಮಾಡಬೇಕು ಅಂದರೆ ಪ್ರೊವಿಸೊ ೧ ಮತ್ತು ೨ ಬಿಟ್ಟೇ ಬಿಡಬೇಕು. ಬರೀ ಕ್ಲಾಸ್ ೨ ಆಫ್ ೧೯೩೩ ಮಾತ್ರ ಪರಿಗಣನೆಗೆ ತರಬೇಕು ಎಂದು ನಮ್ಮ ಸಭಾನಾಯಕರು ಅಪ್ಪಣೆ ಕೊಡಿಸಿದ ಹಾಗೆ ಆಯಿತು.

ಅಧ್ಯಕ್ಷರು.—ಅಪ್ಪಣೆ ಕೊಡಿಸಲಿಲ್ಲ. ಅವರು ಪಾಯಿಂಟ್ ಆಫ್ ಆರ್ಡರ್‌ರೈಸ್ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದ್ದುದನ್ನು ಹೇಳಲಿ. I raised a Point of order. He has mislead the House...

MR. SPEAKER.—No.

SRI M. VEERAPPA MOILY.—My humble submission ಏನೆಂದರೆ, ಈಗ ನಾವು ಅಡ್ಮಿಸಿಬಿಲಿಟಿ ಸ್ಟೇಜ್‌ನಲ್ಲಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ದಯವಿಟ್ಟು ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ರೂಲ ೧೯೩(೧)ರಲ್ಲಿ ತಮಗೆ ಆಪ್ಷನ್ ಇಲ್ಲ, ತಾವು ಇದನ್ನು ಕಮಿಟಿಗೆ ರೆಫರ್ ಮಾಡಬೇಕು ಎಂದು...

ಶ್ರೀ ಬಿ. ಎಸ್. ಯಡಿಯೂರಪ್ಪ. ಸ್ವಾಮಿ, ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ.

SRI M. VEERAPPA MOILY.—I will come to 193 (1).

"The Speaker if he gives consent under rule 190 and holds that the matter proposed to be discussed is in order, shall after the questions and before the list of business is entered upon, call the member concerned, who shall raise the question of privilege make a short statement relevant thereto :

ನನ್ನ ಪ್ರಕಾರ ಆ ಸ್ಟೇಜ್‌ಗೂ ನಾವು ಇನ್ನೂ ಬರಲಿಲ್ಲ. ಅವರಿಗೆ ರೈಸ್ ಮಾಡಲಿಕ್ಕೆ ಅವಕಾಶ ಕೊಟ್ಟಿರಿ. ಆಮೇಲೆ

Provided that where the Speaker has refused his consent under rule 190 or is of opinion that the matter proposed to be discussed is not in order, he may, if he thinks it necessary read the notice of question of privilege and state that he refuses consent or holds that the notice of question of privilege is not in order."

ಇದನ್ನು ಹೇಳತಕ್ಕಂಥ ಹಕ್ಕು ತಮಗೆ ಇದೆ. ತಮಗೆ ಆಪ್ಷನ್ ಇಲ್ಲ ಎಂದು ಸಭಾನಾಯಕರು ಹೇಳಿದ್ದಾರೆ, ಅದು ಸರಿಯಲ್ಲ. You have got an option to refuse leave. ಇದನ್ನು ತಾವು ಎಕ್ಸರ್‌ಸೈಸ್ ಮಾಡಬಹುದು. ಪ್ರೊವೈಡೆಡ್ ಫರ್ದರ್...

SRI B. S. YADIYURAPPA.—I am on a point of order.

ಶ್ರೀ ಎಂ. ವೀರಪ್ಪ ಮೊಯಿಲಿ.—ಎರಡನೇ ಪ್ರಾವಿಸೊ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮೊಯಿಲಿಯವರು ನಿಯಮ ೧೯೨ ಅಂದರು, ರೂಲ್ಸ್ ಪ್ರಕಾರ ಅದಲ್ಲ ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಅವರು ಮುಕ್ತಾಯ ಮಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಏಕೆಂದರೆ ಈ ರೂಲ್ ಯಾವುದೂ ನೋಡಬೇಡಿ, ಸಬ್‌ಕ್ಲಾಸ್ ೧೯೩(೨)ಗೆ ಕೂಡಲೇ ಹೋಗಿ ಎಂದು ಹೇಳಿದ್ದಾರೆ. ೧೯೨ನಲ್ಲಿ you have no option. ಆಮೇಲೆ '...shall request those members...ಎಂದು ಇದೆ. ಆ ಸ್ಟೇಜ್‌ಗೂ ನಾವು ಬರಲಿಲ್ಲ. First of all my submission is that we are still at admissibility stage. ೩ ಸ್ಟೇಜಸ್ ಇವೆ. ಒಂದು ಅಡ್ಮಿಸಿಬಿಲಿಟಿ ಸ್ಟೇಜ್, ನೆಕ್ಸ್ಟ್ ಕನ್ಸೆಂಟ್ ಕೊಡತಕ್ಕಂಥಾದ್ದು, ಆಮೇಲೆ ಡಿಸೈಡ್ ಮಾಡತಕ್ಕಂಥಾದ್ದು. ಈಗ ಡಿಸೈಡ್ ಮಾಡತಕ್ಕಂಥಾ ಸ್ಟೇಜ್‌ಗೆ, ೩ನೇ ಹಂತಕ್ಕೆ ಹೋಗಬೇಕು. ಯು ಹ್ಯಾವ್ ನೋ ಅದರ್ ಆಪ್ಷನ್ ಎಂದು ಮಾನ್ಯ ಸಭಾನಾಯಕರು ಏನು ಹೇಳಿದ್ದಾರೆ ಅದು ಕಾನೂನು ಮತ್ತು ನಿಯಮಕ್ಕೆ ಅನುಗುಣವಾಗಿಲ್ಲ, ಸರಿಯಾಗಿಲ್ಲ ಮತ್ತು ಪರಂಪರೆಗೆ ಕೂಡ ಸರಿಯಾಗಿಲ್ಲ. ಇಟ್ ಈಸ್ ಎಗೆನೆಸ್ಟ್ ಆಫ್ ಕನ್ವೆನ್‌ಷನ್ಸ್ ಅಂಡ್ ಪ್ರಾಕ್ಟೀಸ್ ಎಂದು ಹೇಳಿ ಮುಗಿಸಿದ್ದೇನೆ. ಇದನ್ನು ಮುಂದುವರಿಸಲಿಕ್ಕೆ ಅಪ್ಪಣೆ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಮಾನ್ಯ ವೀರಪ್ಪ ಮೊಯ್ಲಿಯವರು ನಾವು ಇನ್ನೂ ೧೯೨ರಲ್ಲಿದ್ದೇವೆ ಎಂದು ಹೇಳಿದರು. ನಿಯಮ ೧೯೩(೧)ರಲ್ಲಿ ಏನಿದೆ ಎಂದರೆ :

"ಅಧ್ಯಕ್ಷರು ೧೯೧ನೇ ನಿಯಮದ ಮೇರೆಗೆ ಅನುಮತಿ ನೀಡಿದಾಗ, ಹಾಗೂ ಚರ್ಚಿಸ ಬೇಕಾದ ವಿಷಯವು ಕ್ರಮವಾಗಿದೆಯೆಂದು ಭಾವಿಸಿದಾಗ ಪ್ರಶ್ನೆಗಳ ತರುವಾಯ ಮತ್ತು ಕಾರ್ಯಕಲಾಪಗಳ ಪಟ್ಟಿಯು ಪ್ರಾರಂಭವಾಗುವುದಕ್ಕೆ ಮುಂಚೆ ಪ್ರಶ್ನಿಸಲು ಅಪೇಕ್ಷಿಸುವ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರೆಯತಕ್ಕದ್ದು. ಆ ಸದಸ್ಯರು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲತಕ್ಕದ್ದು ಮತ್ತು ಹಕ್ಕುಬಾಧ್ಯತೆ ಪ್ರಶ್ನೆಯನ್ನು ಹಾಕಲು ಅನುಮತಿ ಕೋರಿ, ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಹೇಳಿಕೆಯನ್ನು ನೀಡಬೇಕು."

ಎಂದು ಇದೆ. ನಿಯಮ ೧೯೩(೧)ರಲ್ಲಿ ಸಂಕ್ಷಿಪ್ತ ಹೇಳಿಕೆಯನ್ನು ನೀಡಬೇಕು ಎಂದು ಇದೆ. ಅಂದರೆ ಈಗಾಗಲೇ ಒಂದು ಸಾರಿ ಸಂಕ್ಷಿಪ್ತ ಹೇಳಿಕೆ ಆಗಿರುವುದರಿಂದ ೧೯೩ನ್ನು ದಾಟಿ ಹೋಗಿದೆ. ಆಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ನಾನು ಒಪ್ಪುವುದಿಲ್ಲ, ತಮಗೂ ಅಧಿಕಾರ ಇಲ್ಲ ಎನ್ನುವುದು ಸರಿಯಲ್ಲ. ತಮಗೂ ಆಪ್‌ಷನ್ ಇಲ್ಲ ಎಂದು ಹೇಳಿದ್ದು ಸರಿಯಲ್ಲ. ಏಕೆಂದರೆ, ನಿಯಮ ೧೯೪ರಲ್ಲಿ ಏನಿದೆ ಎಂದರೆ :

"೧೯೪ನೇ ನಿಯಮದ ಮೇರೆಗೆ ಅನುಮತಿ ನೀಡಿದರೆ ಆ ಪ್ರಶ್ನೆಯನ್ನು ಸದನವು ಪರಿಶೀಲಿಸಬಹುದು : ಹಾಗೂ ಒಂದು ನಿರ್ಣಯಕ್ಕೆ ಬರಬಹುದು ಅಥವಾ ಹಕ್ಕುಬಾಧ್ಯತೆ ಪ್ರಶ್ನೆಯನ್ನು ಹಾಕಿರುವ ಸದಸ್ಯರಿಂದಾಗಲೀ ಅಥವಾ ಇತರ ಯಾರೇ ಸದಸ್ಯರಿಂದಾಗಲೀ ಮಾಡಿದ ಪ್ರಸ್ತಾವವನ್ನು ಹಕ್ಕುಬಾಧ್ಯತೆ ಸಮಿತಿಗೆ ಕಳುಹಿಸಬಹುದು."

ಎಂದು ಇದೆ. ಈಗ ೧೯೩ಅನ್ನು ದಾಟಿರುವುದರಿಂದ ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ದಯಮಾಡಿ ಸಂಕ್ಷಿಪ್ತವಾದ ವಿವರಣೆಯನ್ನು ತೆಗೆದುಕೊಂಡು, ಸದನ ಏನು ಅಭಿಪ್ರಾಯಪಡುತ್ತದೆ ಅದನ್ನು ತೆಗೆದುಕೊಂಡು ಇದನ್ನು ತಳ್ಳಿಹಾಕಬೇಕೋ ಅಥವಾ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸಬೇಕೋ ನೋಡಿ. ೧೯೪ರ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಇದರ ಪ್ರಕಾರ ಮಾನ್ಯ ಬಂಗಾರಪ್ಪನವರಿಗೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ. ಮತ್ತು ಇದರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲಎಂದು ಹೇಳುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ಯಡಿಯೂರಪ್ಪನವರು ಹೇಳಿದ್ದರ ಮೇಲೆ ಒಂದು ವಿಷಯವನ್ನು ಹೇಳಬೇಕು.

ಅಧ್ಯಕ್ಷರು.—ಈಗ ಸಾಕಾದಷ್ಟು ಕೇಳಿದ್ದೇನೆ,

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಯಡಿಯೂರಪ್ಪನವರು ನಿಯಮ ೧೯೩ರ ಪ್ರಕಾರ ಇವತ್ತಿನ ದಿವಸ ಅವರಿಗೆ ತಾವು ಅವಕಾಶ ಕೊಟ್ಟಿದ್ದೀರಿ. ನಿಯಮ ೧೯೪ ನೇರವಾಗಿ ಅಟ್ರಾಕ್ಟ್ ಆಗುತ್ತದೆ ಎಂದು ಹೇಳಿದರು. ಹಾಗೆ ಆಗುವ ಹಾಗೆ ಕಾಣೆ. ಏಕೆಂದರೆ, ನಿಯಮ ೧೯೨ ನೋಡಿ. ನಿಯಮ ೧೯೩ರ ಪ್ರಕಾರ ಮೂವ್ ಮಾಡುವುದಕ್ಕೆ ಅವರಿಗೆ ಕನ್ಸೆಂಟ್ ಕೊಟ್ಟಿದ್ದೀರಿ ಅವರು ನಿಯಮ ೧೯೦ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ, ತಾವು ಕನ್ಸೆಂಟ್ ಕೊಟ್ಟಿದ್ದೀರಿ, ಅವರು ಮಾತನಾಡಿದ್ದಾರೆ. ಮಾತನಾಡಿದ ಮೇಲೆ ಲೀವ್ ಕೊಡಿ ಎಂದು ಕೇಳಿದ್ದಾರೆ. ಲೀವ್‌ಗೆ ಅಬ್ಜೆಕ್ಟ್ ಮಾಡಬಹುದು ಅಥವಾ ಮಾಡದೇ ಇರಬಹುದು. ಮಾನ್ಯ ಮೊಯಿಲಿಯವರು ೧೯೨ರ ಪ್ರಕಾರ ಅಬ್ಜೆಕ್ಟ್ ಮಾಡಿದ್ದಾರೆ, ನಿಯಮ ೧೯೩(೨)ರಲ್ಲಿ ಏನಿದೆಯೆಂದರೆ,

"If objection to leave be granted is taken, the Speaker shall request those members who are in favour of leave being granted to rise in their places and if not less than ten members rise accordingly, the Speaker shall intimate that leave is granted. If less then ten members rise, the

Speaker shall inform the members that he has not the leave of the house.''

ಎಂದು ಇದೆ. ಪ್ರಶ್ನೆ ಏನು ಬರುತ್ತದೆ ಎಂದರೆ.........

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದು ಯಾವಾಗ, ಅಧ್ಯಕ್ಷರು ಅನುಮತಿ ನಿರಾಕರಿಸಿದಾಗ. ಈಗಾಗಲೇ ಅವರು ಪರ್ಮಿಷನ್ ಕೊಟ್ಟಿದ್ದಾರೆ.

SRI M. S. KRISHNAN.—The question of admissibility of this does not arise at all. 'There is no option' You have no option but to ask for the leave of the House. ಮಾನ್ಯ ವಿರೋಧಪಕ್ಷದ ನಾಯಕರನ್ನು ಮಾತ್ರ ಕೇಳಬೇಕು. ಆ ಕಡೆ ಕೇಳಿಯಾಯಿತು. ತಾವು ತೀರ್ಮಾನ ಕೊಡಬೇಕು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಬೇರೆಯವರಿಗೆ ಅವಕಾಶವಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಒಂದು ವಿಧಿ ಬಿಂದುವನ್ನು ಎತ್ತಿದಾಗ ಸ್ಪಷ್ಟವಾಗಿ ಹೇಳಿದರು, ಈ ಬಗ್ಗೆ ಹೇಳಿಕೆ ಕೊಡುವುದಕ್ಕೆ ಯಾವ ಸದಸ್ಯರ ಮೇಲೆ ಹಕ್ಕುಚ್ಯುತಿ ಆಪಾದನೆ ಇದೆಯೋ ಅವರಿಗೆ ಮಾತ್ರ ಅವಕಾಶ ಕೊಡಬೇಕು ಎನ್ನುವ ವಿಚಾರ ಎತ್ತಿದರು. ಆ ಬಗ್ಗೆ ಸ್ಪಷ್ಟವಾಗಿ ತೀರ್ಪನ್ನು ಈಗಾಗಲೇ ತಾವು ಕೊಟ್ಟಿದ್ದೀರಿ. ಬೇರೆ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶವಿಲ್ಲ, ಬಂಗಾರಪ್ಪನವರಿಗೆ ಮಾತ್ರ ಅವಕಾಶವಿದೆ ಎಂದು ತೀರ್ಪು ಕೊಟ್ಟಿದ್ದೀರಿ. ಆ ತೀರ್ಪನ್ನು ಪ್ರಶ್ನಿಸಲಿಕ್ಕೆ ಯಾರಿಗೂ ಅವಕಾಶವಿಲ್ಲ. ಆದುದರಿಂದ ಈಗಾಗಲೇ ತೀರ್ಪನ್ನು ಕೊಟ್ಟಿದ್ದೀರಿ, ಆ ತೀರ್ಪಿನ ಪ್ರಕಾರ ಮಾನ್ಯ ಬಂಗಾರಪ್ಪನವರಿಗೆ ಅವಕಾಶಮಾಡಿಕೊಡಿ. ಅವರು ಹೇಳಿಕೆ ಕೊಟ್ಟಮೇಲೆ ಮುಂದಿನ ಕ್ರಮ ಕೈಗೊಳ್ಳಬೇಕು. ಆಮೇಲೆ ಇನ್ನೊಂದು ವಿಚಾರ ಹೇಳಿದರು, ಚೀಫ್ ಮಿನಿಸ್ಟರ್ ನಿಮಗೆ ಅಧಿಕಾರ ಇಲ್ಲ ಎನ್ನುವ ಮಾತನ್ನು ಹೇಳಲಿಲ್ಲ. ದೇರಿಸ್ ನೊ ಆಪ್ಷನ್ ಅಂದರೆ ಅಧಿಕಾರ ಬೇರೆ, ಆಪ್ಷನ್ ಬೇರೆ. ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಕೃಷ್ಣನ್‌ರವರು ಹೇಳಿದಂತೆ ನಾವು ಆ ಸ್ಟೇಜ್ ಮೀರಿ ಹೋಗಿದ್ದೇವೆ. You have no option but to ask for the leave of the House. ಎನ್ನುವ ಸೆನ್ಸ್‌ನಲ್ಲಿ ಹೇಳಿದ್ದು. ಆಪ್ಷನ್ ಏಕೆ ಇಲ್ಲ ಅಂದರೆ ಮತ್ತು ಯಾವ ಹಂತದಲ್ಲಿದ್ದೇವೆ ಅಂದರೆ ಚರ್ಚೆಯಾಗಿ ಸದಸ್ಯರು ವಿಷಯವನ್ನು ಎತ್ತಿದಮೇಲೆ ಇವತ್ತು ಯಾವ ಸದಸ್ಯರ ಮೇಲೆ ಆಪಾದನೆ ಇದೆ ಅವರೇ ಉತ್ತರ ಕೊಟ್ಟರೆ ಸರಿ, ಕೊಡದೇ ಹೋದರೆ You have no option but to ask for the leave of the House. ಅದು ಒಂದು ಇದೆ. ಇನ್ನೊಂದು ವಿಚಾರ ಮೊದಲೇ ಹೇಳಿದ್ದೇನೆ. ರೂಲ್ ೧೬೫ರ ಪ್ರಕಾರ ಈ ಮನೆಯನ್ನೂ ಕೇಳದೆ ತಮಗೆ ಕನ್ವಿನ್ಸ್ ಆದರೆ ಈ ಮನೆಗೆ ರೆಫರ್ ಮಾಡದೆ ಡಿಸಿಷನ್ ತೆಗೆದುಕೊಳ್ಳಬಹುದು. ಅದೂ ಇದೆ. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈಗ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರಿಗೆ ಅವಕಾಶಕೊಡಿ. ಅವರು ಆ ಅವಕಾಶವನ್ನು ಉಪಯೋಗಮಾಡಿಕೊಂಡು ಹೇಳಿಕೆ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಬಂಗಾರಪ್ಪನವರು ಅವರ ಅಭಿಪ್ರಾಯವನ್ನು ಹೇಳಲಿ. ಹೇಳಿದನಂತರ.........

(ಗೊಂದಲ)

MR. SPEAKER.—I will not allow any Hon. Member except Sri Bangarappa. He is the person concerned.

೮–೦೦ ಪಿ. ಎಂ.

ರಾಜ್ಯದ ಹಿತದೃಷ್ಟಿಯಿಂದ ಇಷ್ಟು ಸಮಯವನ್ನು ವೇಸ್ಟ್ ಮಾಡಿದ್ದು ಸರಿಯಲ್ಲ. ಎಲ್ಲರ ಅಭಿಪ್ರಾಯವನ್ನೂ ಕೇಳಿದ್ದೇನೆ. ಇವರೂ ಹೇಳಿದ್ದಾರೆ, ಅವರೂ ಹೇಳಿದ್ದಾರೆ. ಈಗ ರೂಲಿಂಗ್ ಕೊಟ್ಟಿದ್ದೇನೆ. ಮಾನ್ಯ ಬಂಗಾರಪ್ಪನವರು ಮಾತನಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಮಾತನಾಡುವುದಲ್ಲ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕೂಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕಡೆ ಮಾತ್ರ ಕೂರಿಸುವುದಿಲ್ಲ. ಆ ಕಡೆಯೂ ಕೂರಿಸ ಬೇಕಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಹೇಳಿದನಂತರ ರೂಲಿಂಗ್ ಕೊಡುತ್ತೇನೆ. ಅವರ ಹೆಸರು ಇದರಲ್ಲಿದೆ. ಆದುದರಿಂದ ಅವರಿಗೆ ಅವಕಾಶ ಕೊಟ್ಟಿದ್ದೇನೆ. ನಿನ್ನೆ ಮಾನ್ಯ ಬಂಗಾರಪ್ಪನವರು ಇರಲಿಲ್ಲ, ಅವರಿಗೆ ಅವಕಾಶ ಕೊಡಬೇಕಾಗುತ್ತದೆ. ನಿನ್ನೆ ಇದ್ದದ್ದನ್ನು ಇವತ್ತು ಇಟ್ಟಿದ್ದೇನೆ. ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಅಪ್ಪಣೆ ಕೊಡಿಸಿದ್ದರಿಂದ ನಾನು ಮಾತನಾಡಿದೆ. ರಾಜ್ಯದ ಹಿತದೃಷ್ಟಿಯಿಂದ ಎರಡು ಗಂಟೆಗಳ ಕಾಲ ವೇಸ್ಟ್ ಮಾಡಿದ್ದೇವೆಂದು ಹೇಳುತ್ತೀರಿ. ಅದನ್ನು ಅವರಿಗೆ ಹೇಳಬೇಕು, ನಮಗಲ್ಲ. ನಮ್ಮಿಂದ ಇದು ಪ್ರಾರಂಭವಾಗಲಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ರಮೇಶ್‌ಕುಮಾರ್ ರವರು ನಿಯಮಾವಳಿ ೧೯೦ರ ಪ್ರಕಾರ ಈ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ತಮ್ಮ ಒಪ್ಪಿಗೆಗಾಗಿ ಮಂಡನೆ ಮಾಡಿದ್ದಾರೆ. ಇದನ್ನು ಒಪ್ಪಬೇಕೋ ಬಿಡಬೇಕೋ ವಿಚಾರದಲ್ಲಿ ಸಾಕಷ್ಟು ಪ್ರಮಾಣ ದಲ್ಲಿ ಚರ್ಚೆಯಾಗಿದೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕಂತಹ ನೋಟೀಸ್ ಏನಿದೆ, ಇದರಲ್ಲಿ ಬಂದಿರತಕ್ಕ ವಿಚಾರ ಹಾಗೂ ಅದಕ್ಕೆ ಪೂರಕವಾಗಿ ಹೇಳಿಕೆಯಲ್ಲಿ ಬಂದಿರತಕ್ಕಂತಹ ಅಂಶಗಳೂ ಕೂಡ ಇವೆ. ಈ ವಿಷಯದಲ್ಲಿ ವಿವರವಾಗಿ ಹೇಳುವುದಕ್ಕೆ ನಮಗೆ ಅವಕಾಶ ಸಿಕ್ಕಲಿಲ್ಲ ಎಂದು ನಮ್ಮ ಕಡೆ ಕುಳಿತಿರ ತಕ್ಕಂತಹ ಸದಸ್ಯರು ಹೇಳಿದರು. ಅದೇನೇ ಇರಲಿ. ತಾವು ಅಂತಿಮವಾಗಿ ತೀರ್ಪನ್ನು ಕೊಟ್ಟಿದ್ದೀರಿ, ನಾನು ಮಾತನಾಡಬೇಕೆಂದು. ನಿಯಮಾವಳಿ ೧೯೧-೯೦-೯೨-೯೩-೯೪-೯೫ಕ್ಕೆ ಸಂಬಂಧಪಟ್ಟಿರತಕ್ಕಂತಹ ಈ ವಿಷಯದ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಚರ್ಚೆಯಾಗಿದೆ. ನಾನು ನಿಯಮಾವಳಿ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದು ಸಾಕಷ್ಟು ಪ್ರಮಾಣದಲ್ಲಿ ಚರ್ಚೆಯಾಗಬೇಕೆಂದು ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದರು. ಆ ದಿನ ಈ ವಿಷಯ ನಡೆದಾಗ ಯಾವ ಒಂದು ಸಂದರ್ಭವಿತ್ತು ಎಂಬುದನ್ನು ನೋಟೀಸ್‌ನಲ್ಲಿ ತಿಳಿಸಿದ್ದಾರೆ. With the conclusion of the general discussion on the budget and reply by the Hon'ble Chief Minister on 27th February 1986, the Hon. Speaker allowed the Members to seek clarifications. ಪ್ರತಿಯೊಂದು ವಿಷಯದಲ್ಲಿ ಚರ್ಚೆಯಾದಾಗ ಮಾನ್ಯ ಸದಸ್ಯರು ವಿವರಗಳನ್ನು ಕೇಳತಕ್ಕಂಥಾದ್ದು, ಮಾನ್ಯ ಸಚಿವರು ಉತ್ತರಗಳನ್ನು ಕೊಡತಕ್ಕಂಥಾದ್ದು ಒಂದು ಸಂಪ್ರದಾಯ, ಪದ್ಧತಿಯನ್ನು ನಾವು ಇಟ್ಟು ಕೊಂಡು ಬಂದಿದ್ದೇವೆ. There were further requests from the Hon. Speaker ruled that no more clarifications would be permitted on this. At this point of time, the Hon. Leader of the Opposition stood and while casting aspersions on the Chair, protested aganist the ruling of the Chair and wanted the Hon. Speaker to allow further clarifications. ವಿವರಣೆಗಳನ್ನು ಚೆನ್ನಾಗಿ ಕೇಳತಕ್ಕಂತಹ ಸಂದರ್ಭಗಳು ಉಳಿದಿರತಕ್ಕಂತಹ ಮಾನ್ಯ ಸದಸ್ಯರಿಗೂ ಸಿಕ್ಕಲಿ ಎಂಬ ಆಸೆಯಿಂದ ಒತ್ತಡವನ್ನು ಮಾಡಿದ್ದಾರೆ. ಅವತ್ತು ಸದನದ ಕಾರ್ಯಕಲಾಪ ಏನು ನಡೆಯಿತು. ಅದರ ಸಂಪೂರ್ಣ ವರದಿ ಇದೆ. ಅದರಲ್ಲಿ ಏನಿದೆ? ಹೊಸದಾಗಿ ನಾನು ಆ ಮಾತನ್ನು ಹೇಳಿಲ್ಲ. ತಾವು ಹೇಳಿರತಕ್ಕಂಥಾ ಮಾತನ್ನೇ ಉದ್ಧರಿಸಿದ್ದೆ. ತಾವು ಸಹಜವಾಗಿ ಹೇಳಲೇ ಬೇಕಾಗುತ್ತದೆ. ಸಭಾಧ್ಯಕ್ಷರಾಗಿ ಕೂತಿರತಕ್ಕಂತಹವರು ಹೇಳಬೇಕು. ಎಲ್ಲರಿಗೂ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ, ವಿವರಣೆ ಬೇಕಾದರೆ ಕೇಳಬಹುದು, ಅದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು

ಹೇಳತಕ್ಕಂಥಾದ್ದರಲ್ಲಿ ತಪ್ಪೇನೂ ಇಲ್ಲ. ಯಾರೇ ಸಭಾಧ್ಯಕ್ಷರಾಗಿದ್ದರೂ ಕೂಡ ಹೇಳಬೇಕಿತ್ತು. ಅದನ್ನು ಹೇಳಿದ್ದರಿಂದ ನಮ್ಮ ಕಡೆಯ ಸದಸ್ಯರು ಆ ದಿವಸ ಎಲ್ಲರೂ ಮಾತನಾಡುವುದಕ್ಕೆ ಸಾಧ್ಯವಾಗಲಿಲ್ಲ. ಹಲವಾರು ಕಾರಣಗಳಿಂದ ಬೇರೆ ಬೇರೆ ವಿಚಾರಗಳನ್ನು ಚರ್ಚೆ ಮಾಡುತ್ತಿರಬೇಕಾದರೆ. ಬೇರೆ ವಿಚಾರಗಳು ಅಡ್ಡ ಬಂದು ಆ ಒಂದು ವಿಷಯಕ್ಕೆ ಸಮಯ ಖರ್ಚಾಗತಕ್ಕಂಥಾದ್ದನ್ನು ಕಂಡಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗಲಿಲ್ಲವೆಂದು ನನ್ನ ಹತ್ತಿರ ಬಂದು ಹೇಳಿದರು. ನಾವು ಕ್ಲಾರಿಫಿಕೇಷನ್ ಕೇಳಬೇಕು ಅದಕ್ಕೆ ಕಾಲಾವಕಾಶ ಬೇಕೆಂದು ನನ್ನ ಹತ್ತಿರವೂ ಹೇಳಿದ್ದಾರೆ. ತಮ್ಮ ಹತ್ತಿರವೂ ಕೇಳಿಕೊಂಡರು. ಎಲ್ಲರಿಗೂ ಅಲ್ಲದಿದ್ದರೂ ಅನೇಕ ಜನರಿಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡುತ್ತೇನೆಂದು ತಾವು ಹೇಳಿದ್ದೀರಿ ಎಷ್ಟೋ ಸಾರಿ ಸದನದಲ್ಲಿ ಚರ್ಚೆಯಾಗುತ್ತಿರಬೇಕಾದರೆ ಎಲ್ಲರೂ ಭಾಷಣ ಮಾಡಿದ್ದಾರೆ. ಎಲ್ಲರೂ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗದಿದ್ದರೆ ನಂತರ ಕೆಲವು ಜನರು ವಿವರಣೆ ಕೇಳತಕ್ಕಂತಹ ಒಂದು ಸಂಪ್ರದಾಯವನ್ನು ಇಟ್ಟುಕೊಂಡಿರುವ ರೀತ್ಯ ನಮಗೂ ಸಿಕ್ಕಲಿ ಎಂದು ಕೆಲವು ಸಾರಿ ಎದ್ದು ನಿಂತಾಗ ಸಾಕೆಂದು ಹೇಳಿದ್ದೀರಿ. ೩-೪ ಜನಕ್ಕೆ ಹೇಳಿದ್ದೀರಿ. ೫-೬ ಜನ ಮಾತನಾಡಿದ್ದಾರೆ. ಸಾಕು ಕುಳಿತುಕೊಳ್ಳಿ ಎಂದು ಹೇಳಿದ್ದೀರಿ ಸಭಾಧ್ಯಕ್ಷರು ಕಾರ್ಯಕಲಾಪವನ್ನು ನಡೆಸಲು ಅನುಕೂಲವಾಗುವುದಕ್ಕೋಸ್ಕರ ಕುಳಿತಿರತಕ್ಕಂಥಾ ದಾಖಲೆಗಳು ಬೇಕಾದಷ್ಟು ಇದೆ. ತಾವು ಕೂಡ ಅದನ್ನು ಒಪ್ಪುತ್ತೀರಿ. ಆ ದಿವಸ ಕೆಲವು ಮುಖ್ಯವಾಗಿರತಕ್ಕಂತಹ ಪ್ರಶ್ನೆಗಳನ್ನು ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಕತಕ್ಕಂತಹ ಒಂದು ಉದ್ದೇಶ ಈ ಕಡೆ ಕುಳಿತಿರತಕ್ಕಂತಹ ಮಾನ್ಯ ಸದಸ್ಯರಿಗೆ ಇತ್ತು. ಆ ಉದ್ದೇಶದಿಂದ ಅವರ ಒತ್ತಡ ಹೆಚ್ಚಾಯಿತು. ಆ ಪ್ರಸಂಗ ಏನೆಂದು ಗೊತ್ತಿದೆ. ನಾನೂ ಕೂಡ ಎದ್ದು ನಿಂತಿದ್ದೆ ಯಾರು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗಿಲ್ಲ ಅವರಿಗೆ ವಿವರಣೆ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೀರಿ. ದಯವಿಟ್ಟು ಅವಕಾಶ ಮಾಡಿಕೊಡಿ ಎಂಬ ಒತ್ತಡವನ್ನು ಅವರು ಮಾಡಿದರು. ನಾನೂ ಮಾಡಿದೆ. ಹೆಚ್ಚಾಗಿ ಒತ್ತಡವನ್ನು ಮಾಡಿದ್ದೇವೆ, ಸಾಕು ಇನ್ನು ಇದರ ಬಗ್ಗೆ ವಿವರಣೆ ಕೇಳತಕ್ಕಂತಹ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ತಾವು ಆಡಿದಾಗ ಮತ್ತೊಮ್ಮೆ ತಮ್ಮ ಮೇಲೆ ಒತ್ತಡವನ್ನು ತಂದು ವಿವರಣೆ ಕೇಳಲು ಅವಕಾಶ ಮಾಡಿಕೊಡಿ ಎಂದು ಸದಸ್ಯರು ಒತ್ತಡವನ್ನು ತಂದಿದ್ದರು. ಆಗ ಆ ಕಡೆಯವರಿಗೆ, ಈ ಕಡೆಯವರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳತಕ್ಕಂತಹ ಪುಟ್ಟಪುಟ್ಟಿದೆಯೆಂದು ನಮ್ಮ ಭಾವನೆ. ಅಂತಹ ಸಂದರ್ಭದಲ್ಲಿ ದಾಖಲೆಗೆ ಹೋಗಬಾರದು ಅನ್ನತಕ್ಕಂತಹ ಮಾತನ್ನು ಮೊದಲನೇ ಬಾರಿಗೆ ಅಲ್ಲ. ಅನೇಕ ಬಾರಿ ಹೇಳಿರತಕ್ಕಂಥಾದ್ದನ್ನು ಕಂಡಿದ್ದೇವೆ. ನಾವು ಮಾತನಾಡುವುದು ದಾಖಲೆಗೆ ಹೋಗಬೇಕೆಂಬ ವಿಚಾರಕ್ಕಿಂತಲೂ ನಾವು ವಿಷಯವನ್ನು ಪ್ರಸ್ತಾಪ ಮಾಡಬೇಕು, ಅದಕ್ಕೆ ಸರ್ಕಾರದಿಂದ ಉತ್ತರವನ್ನು ಪಡೆಯಬೇಕೆನ್ನುವುದು ನಮ್ಮ ಮುಖ್ಯವಾದ ಗುರಿ ನಾವು ಮಾತನಾಡಿದ್ದು ದಾಖಲೆಗೆ ಹೋಗಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಏಕೆಂದರೆ, ಸರ್ಕಾರ ಉತ್ತರ ಕೊಡುತ್ತದೆ, ಅದು ದಾಖಲೆಗೆ ಹೋದರೆ ಅಷ್ಯೂರೆನ್ಸ್ ಆಗುತ್ತದೆ ನಾಳೆ ಸರ್ಕಾರ ಅವರು ಕೊಟ್ಟಿರತಕ್ಕಂತಹ ಮಾತನ್ನು ನಡೆಸಲು ಸಾಧ್ಯವಾಗದಿದ್ದರೆ ಭರವಸೆ ಸಮಿತಿಗೆ ರೆಫರ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ದಾಖಲೆ ಇದ್ದರೆ ಸರ್ಕಾರ ಹೇಳಿಕೆಯನ್ನು ಕೊಟ್ಟಿದ್ದರೆ, ಅದನ್ನು ಭರವಸೆ ಸಮಿತಿಗೆ ಒಯ್ಯಬಹುದೆಂಬ ಸದುದ್ದೇಶ ಇದರಲ್ಲಿ ಇರುತ್ತದೆ. ಇದು ವಿರೋಧಪಕ್ಷಗಳ ಸದಸ್ಯರಿಗೆ ಹಾಗೂ ಆ ಕಡೆ ಇರತಕ್ಕಂತಹ ಸದಸ್ಯರಿಗೆ ಇರತಕ್ಕಂತಹ ಹಕ್ಕು.

ಈ ಸದನ ಒಬ್ಬ ವ್ಯಕ್ತಿಯನ್ನು ಮಾನ್ಯಸದಸ್ಯರೆಂದು ಪರಿಗಣಿಸುತ್ತದೆ. ಎರಡೂ ಕಡೆಯ ಸದಸ್ಯರು ಆ ಕಡೆಯವರಾಗಬಹುದು ಈ ಕಡೆಯವರಾಗಬಹುದು ಆ ಪ್ರಶ್ನೆ ಬಂದಾಗ ಇನ್‌ವಾಲ್ವ್ ಆಗಿರುತ್ತೇವೆ. ಆ ದೃಷ್ಟಿಯಿಂದ ತಾವು ಎಷ್ಟೇ ಹೇಳಿದರೂ ಒತ್ತಡ ಮಾಡುತ್ತೇವೆ. ಕೆಲವೊಮ್ಮೆ ಅವಕಾಶ ಮಾಡಿಕೊಟ್ಟಿದ್ದೀರಿ ನಾವು ಒತ್ತಡ ಮಾಡಿದ್ದೇವೆ ಎನ್ನುವುದನ್ನು ಒಪ್ಪಬಹುದು. ಕೆಲವೊಮ್ಮೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಉತ್ತರವನ್ನು ಸರ್ಕಾರ ಕೊಡುತ್ತದೆ ಮುಖ್ಯಮಂತ್ರಿಗಳು ಇರಬಹುದು ಅಥವಾ ಮಂತ್ರಿಮಂಡಲದ ಸದಸ್ಯರು ಯಾರೇ ಇರಬಹುದು ಮಂತ್ರಿಮಂಡಲದಲ್ಲಿರತಕ್ಕ ಸದಸ್ಯರು ಉತ್ತರ ಕೊಡಬಹುದು ನಿಜ ಆ ಸಂದರ್ಭದಲ್ಲಿ ನಾನು ಒಂದು ಮಾತನ್ನು ಆಡಿದ್ದೇನೆ. ಈ ಸದನದ ಘನತೆ, ಗೌರವ ಚರ್ಚೆಯ ಮಟ್ಟ ಅದನ್ನು ಕೊಡತಕ್ಕ ವಿಚಾರದಲ್ಲಿ ಚರ್ಚೆಯ ವಿಷಯ ಬಂದಾಗ, ಇವತ್ತು ಮೊದಲನೆಯ ಸಾರಿ ಪ್ರಸ್ತಾಪ ಮಾಡುತ್ತಿಲ್ಲ, ಅವರು ನಾವು ಎಲ್ಲರೂ ಸೇರಿ ನಿಮ್ಮನ್ನು ಅಲ್ಲಿ

ಕೂರಿಸಿದ್ದೇವೆ. ವಿರೋಧವಿಲ್ಲದೆ ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿ ಅಲ್ಲಿ ಕೂರಿಸಿದ್ದೇವೆ, ಅದು ಸದನದ ಹೆಮ್ಮೆ ಅಲ್ಲಿ ನಿಮ್ಮನ್ನು ಕೂಡಿಸಿದಾಗ ಸಂಪೂರ್ಣ ಸಹಕಾರವನ್ನು ಎಲ್ಲಾ ಸದಸ್ಯರು ಕೊಡಬೇಕಾಗುತ್ತದೆ. ಸದನದ ಮೂಲೆಯಲ್ಲಿ ಕುಳಿತಿರತಕ್ಕ ಸದಸ್ಯರು ಸಹಕಾರ ಕೊಡ ತಕ್ಕದ್ದು ಅದು ಸಹಜವಾದುದು ಸಹಕಾರವನ್ನು ಕೊಡತಕ್ಕದ್ದು ನಮ್ಮ ಆದ್ಯಕರ್ತವ್ಯದ ಪ್ರಶ್ನೆ ಕರ್ನಾಟಕ ವಿಧಾನಸಭೆಯಲ್ಲಿ ಉಚ್ಚ ಮಟ್ಟದ ಚರ್ಚೆ ನಡೆದಿದೆ ಅದು ನಡೆಯಬೇಕು ಸಾಲದ್ದಕ್ಕೆ ಈ ಸಂಪ್ರದಾಯಕ್ಕೆ ಎಲ್ಲಿಲ್ಲದ ಕಳೆಯನ್ನು ನೀಡಬೇಕೆನ್ನುವ ಸದುದ್ದೇಶದಿಂದ ನಾವು ಇಲ್ಲಿದ್ದೇವೆ. ಒತ್ತಡದ ವಿಷಯ ಬಂದಾಗ, ಘನತೆಯನ್ನು ಅನುಸರಿಸಿ ಚರ್ಚೆಯ ಮಹತ್ವವನ್ನು ಅನುಸರಿಸಿ ಮತ್ತೊಂದು ಅರ್ಥ ಬರುವುದಕ್ಕೆ ಅವಕಾಶವಿದೆ ಮನಸ್ಸಿನಲ್ಲಿ ಏನೂ ಇರುವುದಿಲ್ಲ ಎನ್ನತಕ್ಕ ಅಂಶವನ್ನು ಹಲವಾರು ಬಾರಿ ಪ್ರತಿಪಾದನೆ ಮಾಡಿರತಕ್ಕದ್ದು ಕೂಡ ಉಂಟು. ತಾವು ಕೂಡ ಹೇಳಿದ್ದೀರಿ. ಈ ಪ್ರಶ್ನೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಆಡಿದ್ದಾರೆ ಯಾವ ಪದವನ್ನು ಪ್ರಯೋಗ ಮಾಡಬೇಕು, ಮತ್ತೊಬ್ಬರಿಗೆ ಈ ಸದನದ ಘನತೆ ಗಾಂಭೀರ್ಯವನ್ನು ಕಾಪಾಡತಕ್ಕ ರೀತಿಯಲ್ಲಿ ಉತ್ತರ ಕೊಡಬಹುದು ಮತ್ತು ಇದರಲ್ಲಿ ಸಭ್ಯತೆಯ ಪ್ರಶ್ನೆ ಇರಬೇಕು ಎನ್ನುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ನಾನು ಉಪಯೋಗ ಮಾಡತಕ್ಕ ಪದಗಳು ಒಂದು ರೀತಿಯಾದರೆ ಈ ಸದನ ದಲ್ಲಿ ಬೇರೆ ಸದಸ್ಯರು ಉಪಯೋಗ ಮಾಡಿರತಕ್ಕ ಪದಗಳನ್ನು ಸಹಸ್ವಲ್ಪ ಹೋಲಿಕೆ ಮಾಡಿ ನೋಡೋಣ ಅದನ್ನು ಬಳಸಬೇಕು ಎನ್ನುವ ಆಸಕ್ತಿಯಿಲ್ಲ. ನಾನು ಯಾವ ಪದ ಪ್ರಯೋಗ ಮಾಡಿದ್ದೇನೆಂದರೆ "I care two hoots for the records" ಎನ್ನತಕ್ಕದ್ದು ಅದನ್ನು ಉದಾಹರಿಸಿ ಮಾನ್ಯ ರಮೇಶ್ ಕುಮಾರ್‌ರವರು ಹಕ್ಕು ಬಾಧ್ಯತಾ ಪ್ರಶ್ನೆಯನ್ನು ಎತ್ತಿದ್ದಾರೆ. two hoots ಅಂದರೆ ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ that is recognised dictionary ಅದರಲ್ಲಿ ಕನ್ನಡ ವ್ಯಾಖ್ಯಾನ ವನ್ನು ಇಟ್ಟಿದ್ದಾರೆ ಹೂಟ್ಸ್ hoots ಅಂದರೇನು ? ಅಸಮಾಧಾನ ಅತೃಪ್ತಿ. ಎಂದು ಅದೇ ರೀತಿ (hoods) ಹೂಡ್ಸ್ ಎನ್ನುವ ಮತ್ತೊಂದು ಪದ ಇದೆ. ಯಾವ ರೀತಿ ಪದ ಪ್ರಯೋಗ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ ದಾಖಲೆಗಳ ಬಗ್ಗೆ ನನಗೆ ಗೌರವವಿಲ್ಲವೆನ್ನುವ ಪ್ರಶ್ನೆಯಲ್ಲ ಈ ದಾಖಲೆಗಳಿಗೆ ನಾನು ಎಷ್ಟು ಗೌರವ ಕೊಡಬೇಕೋ ಅಷ್ಟು ಗೌರವನ್ನು ಕೊಡುತ್ತೇನೆ. "I care two hoots for records" ಅದಕ್ಕೆ ಅರ್ಥ ಡಿಕ್ಷನರಿಯಲ್ಲಿದೆ. I care two hoots ಅಂದರೆ I honour these records ಎನ್ನತಕ್ಕದ್ದು ಸ್ಪಷ್ಟವಾಗಿರತಕ್ಕ ಅರ್ಥ ಆಲ್‌ಸ್ಟೆಟ್ ನಿಮ್ಮ ಅರ್ಥದಲ್ಲಿ ಹೂಟ್ಸ್ (hoots) ಅಂದರೆ......

(ನಗು)

MR. SPAKER.--He is a very good lawyer.

SRI M. RAGHUPATHY.--He is creating a new dictionary I am happy.

ಶ್ರೀ ಎಸ್. ಬಂಗಾರಪ್ಪ.—ನೀವು ಅದಕ್ಕೆ ಎಜುಕೇಶನ್ ಮಿನಿಸ್ಟರ್. Oxford dictionary recognised and accepted by all of us here.

ಅಧ್ಯಕ್ಷರು.—ನೀವು ಅನ್ನುವುದು ಹೂಡ್ಸ್ ಎಂದು ಹೇಳುತ್ತೀರಿ ಏನು ? ತಾವು ಅದೇನು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಹೂಡ್ಸ್ ಅಂದರೆ I honour these records ಅದು ಆಕ್ಸ್ ಫರ್ಡ್ ಡಿಕ್ಷನರಿಯಲ್ಲಿ ಇದೆ. ಹೂಟ್ಸ್ ಅನ್ನುವುದಕ್ಕೂ ಅರ್ಥವಿದೆ, ಹೂಟ್ಸ್ ಅಂದರೆ ಅತೃಪ್ತಿ, ಅಸಮಾಧಾನ ಎನ್ನತಕ್ಕ ಅರ್ಥವಿದೆ ತಾವು nothing should go on record ಎನ್ನತಕ್ಕ ಮಾತನ್ನು ಹೇಳಿದಾಗ ನಮಗೆ ಅತೃಪ್ತಿ ಅಸಮಾಧಾನ ಆಗುತ್ತದೆ ಎಂದು ಅದರ ಅರ್ಥ. ಕನ್ನಡದಲ್ಲಿ ಹೇಳುವುದಾದರೆ ಅದರಿಂದ ತಮ್ಮ ವಿವರಣೆಯನ್ನು ಕೇಳಿದ್ದೇನೆ ಅದನ್ನು ಕೇಳಲು ನಮಗೆ ಸಾಧ್ಯವಾಗು ತ್ತಿಲ್ಲ......

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಏನು ಅರ್ಥವಿದೆ ?

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಅರ್ಥ ಆಗಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಡಿಕ್ಸ್‌ನರಿಯಲ್ಲಿ ಅದರ ಮೇಲೆ ಏನಿದೆ ಅದರ ಅರ್ಥ ಸ್ವಲ್ಪ ಹೇಳ ಬೇಕು ಕೆಳಗಡೆಯದು ಆಯಿತು ನಾನು ಹೇಳಲೇ ?

ಶ್ರೀ ಎಸ್. ಬಂಗಾರಪ್ಪ.—ಮೇಲಿನದನ್ನು ಹೇಳಿದ್ದೇನೆ ಈಗ ಕೆಳಗಡೆಗೆ ಬರುತ್ತಿದ್ದೇನೆ ನನ್ನ ಮಾತಿನ ಅರ್ಥ ಕೆಳಗಡೆಗೆ ಬರುತ್ತದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಬಂಗಾರಪ್ಪನವರು ಮೇಲಿನಿಂದ ಕೆಳಗೆ ಬರುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—'ಅತೃಪ್ತಿ ಅಸಮಾಧಾನ' ಎನ್ನುವುದು ನನ್ನ ಸ್ಪಷ್ಟವಾಗಿರತಕ್ಕ ಅಭಿಪ್ರಾಯ I care two hoots ಎಂದು ಹೇಳಿದಾಗ ಗಲಾಟೆ ಸಾಕಷ್ಟು ಇತ್ತು, ತಮಗೆ ಗೊತ್ತಿರುವ ಹಾಗೆ I care two hoods ನಾನು ಉಪಯೋಗ ಮಾಡಿರತಕ್ಕದ್ದು I cary two hoots for the records ಅಂದರೂ ಕೂಡ ಪ್ರಿವಿಲೇಜ್‌ನ ಪ್ರಶ್ನೆ ಬರುವುದಿಲ್ಲವೆನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ಅದು ನನ್ನ intention ಸಹ ಅಲ್ಲ.

ಶ್ರೀ ಎಂ. ರಘುಪತಿ.—ಹಾಗಾದರೆ ನೀವು ಹೇಳಿದ ಶಬ್ದದ ಅರ್ಥವನ್ನು ಸಮರ್ಥನೆ ಮಾಡಿ ಕೊಳ್ಳುತ್ತಿದ್ದೀರಾ ?

ಶ್ರೀ ರಾಜವರ್ಧನ್.—ಟೇಪ್‌ನಲ್ಲಿ ರೆಕಾರ್ಡ್ ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ಈ ಸದನದಲ್ಲಿ ತಮಗೆ ಅಗೌರವ ತೋರಿಸುತ್ತಿದ್ದೇವೆ, ಸದನಕ್ಕೆ ಅಗೌರವ ತೋರಿಸುತ್ತಿದ್ದೇವೆಂದು ಒಂದೇ ಸಾರಿಗೆ ಹೇಳುವ ಆ ಉದ್ದೇಶವೂ ನಮಗೆ ಇಲ್ಲ ಅವಶ್ಯಕತೆ ಇಲ್ಲ ಅದು ಸಂಪ್ರದಾಯವೂ ಅಲ್ಲ ನಾನು ಆಗಲೇ ಹೇಳಿದಹಾಗೆ ನಾನು ನಮ್ಮ ಪಕ್ಷದವರು ಯಾರೂ ಕೂಡ ಆ ತರಹ ಭಾವನೆ ಇಟ್ಟುಕೊಂಡು ನಡೆದುಕೊಂಡಿಲ್ಲ. ನಿಮಗೆ ಸಂಪೂರ್ಣ ನಮ್ಮ ಬೆಂಬಲವನ್ನು ಕೊಡುತ್ತೇವೆ, ಅದರ ಬಗ್ಗೆ ಅನುಮಾನ ಬೇಕಾಗಿಲ್ಲ ನಾನು ಮತ್ತೊಮ್ಮೆ ಸ್ಪಷ್ಟ ಪಡಿಸುತ್ತೇನೆ ಅಧ್ಯಕ್ಷರಿಗೆ ಅಗೌರವ ತೋರಿಸಬೇಕೆನ್ನುವ ಉದ್ದೇಶ ನಮಗಿಲ್ಲ ನಾವು ಅಗೌರವನ್ನು ತೋರಿಸುವುದಿಲ್ಲ, ಆ ಉದ್ದೇಶವೂ ಇಲ್ಲ ಸಂಪೂರ್ಣ ಗೌರವವನ್ನು ಕೊಟ್ಟು ನಾವು ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಆಡಿದರು ಅದು "must on your part" ಎಂದು ಡೈರೆಕ್ಷನ್ ನಮೂನೆಯಲ್ಲಿ ಅದನ್ನು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಇಲ್ಲ nothing to go on record.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಆ ಥ್ರೆಟ್ ನಿಮಗೆ ಕೊಟ್ಟಿರತಕ್ಕದ್ದು ಎನ್ನತಕ್ಕ ಭಾವನೆ ನಮಗೆ ಬಂದಿದೆ ಆದ್ದರಿಂದ ನಮ್ಮ ಭಾವನೆಯನ್ನು ನಿಮಗೆ ಕಳುಹಿಸಿ ಕೊಟ್ಟಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಆ ಮಾತನ್ನು ಅಧ್ಯಕ್ಷರು ಹೇಳಬೇಕು

ಶ್ರೀ ಎಸ್. ಬಂಗಾರಪ್ಪ.—ಅನಂತರ ಸಭ್ಯತೆಯ ಉದಾಹರಣೆಯನ್ನು ಕೊಟ್ಟು ಸಭಾನಾಯಕರ್ರ ಸಭ್ಯತೆಯ ಪದಗಳನ್ನು ಪ್ರಯೋಗ ಮಾಡಿರತಕ್ಕದ್ದು ಏನಿದೆ ಅದನ್ನು ಎಲ್ಲರೂ ಕಲಿಯಬೇಕಾಗುತ್ತದೆ ೧೯೮೪-೮೫ರಲ್ಲಿ ಚುನಾವಣೆಯ ಮೊದಲು ವಿರೋಧಪಕ್ಷದ ನಾಯಕರಾದ ಮಾನ್ಯ ಮೊಯಿಲಿಯವರನ್ನು ಕುರಿತು ಇಂತಹ ವಿಚಾರಗಳು ಪ್ರಸ್ತಾಪಕ್ಕೆ ಬಂದಾಗ 'ನಿಮಗೆ ಕೆಳಗಡೆ ಕಡಿಯುತ್ತಾ ಇದೆಯಾ. ಎನ್ನತಕ್ಕ ಮಾತನ್ನು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಇದು ಸರಿಯಲ್ಲ ತಾವು ಇದುವರೆಗೂ ಬರಾಬರಿ ಹೇಳಿ ಕೊಳ್ಳುತ್ತಾ ಬಂದಿದ್ದೀರಿ. ಈಗ ಚೆನ್ನಾಗಿ ಹೇಳುತ್ತಾ ಇದ್ದೀರಿ ತಾವು ಇಲ್ಲಿಗೆ ಮುಗಿಸಿ ಡೋಂಟ್ ಡಿವಿಯೇಟ್ ತಾವು ಹೇಳುವುದನ್ನು ಹೇಳಿ ಬೇಗ ಮುಗಿಸಿ ಬಿಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ಈ ಸದನದ ಘನತೆ ಗೌರವಗಳನ್ನು ಎತ್ತಿಹಿಡಿಯಬೇಕೆಂಬ ಮಾತು ಹಿಂದೆ ಅವರು ವಲ್ಗರ್ ಮಾತು ಬಳಸಿದಾಗ ಅವರಿಗೆ ನೆನಪಿಗೆ ಬರಲಿಲ್ಲವೇ ?

(ಗೊಂದಲ)

ಶ್ರೀ ಎಂ. ರಘುಪತಿ.—ಪಾಯಿಂಟ್ ಆಫ಼ ಆರ್ಡರ್

ಶ್ರೀ ಎಸ್. ಬಂಗಾರಪ್ಪ.—ನೋ ನೋ...........

ಅಧ್ಯಕ್ಷರು.—ನೀವು ಆ ತರಹ ಮಾತಾಡುವುದು ಸರಿಯಲ್ಲ ಅವುಗಳನ್ನು ಎಕ್ಸ್‌ಪಂಜ್ ಮಾಡು ತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಏಕೆ ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಇವರು ನನ್ನಲ್ಲಿ ನನ್ನ ಪಕ್ಷದಲ್ಲಿ ಹುಳುಕನ್ನು ಹುಡುಕುತ್ತಿದ್ದಾರೆ ಅದಕ್ಕೆ

ಅಧ್ಯಕ್ಷರು.—ಅದೆಲ್ಲ ಹೇಳಬೇಡಿ ನೀವು ಅವರ ಮೇಲೆ ಅವರು ನಿಮ್ಮ ಮೇಲೆ ಹೇಳಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕೇಳಿ ಇಲ್ಲಿ ನಮಗಿರುವ ರೂಲ್ಸು ರೆಗ್ಯುಲೇಷನ್ ನೋಡಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ ಹಾಗೆ ಇಲ್ಲಿ ಮಾಡಬಾರದೆಂದಿದ್ದರೆ ನಾನು ನನ್ನ ಚೇಂಬರ್‌ಗೇ ಕರೆಸಿ ತೀರ್ಮಾನ ತೆಗೆದುಕೊಳ್ಳುತ್ತಿದ್ದೆ ಯಾವುದೇ ವಿಷಯವನ್ನೂ ಇಷ್ಟುದ್ದ ಬೆಳಸಬಾರದು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ರಮೇಶ್‌ಕುಮಾರ್ ಮಾತನಾಡುತ್ತಿರುವಾಗ ಬಳಸಿದ ಕೆಲವು ಪದಗಳನ್ನು, ಹಾಗೆಯೇ ಎಂ. ಎಸ್. ಕೃಷ್ಣನ್‌ರವರು ಬಳಸಿದ ಕೆಲವು ಪದಗಳನ್ನು ಕಡತದಿಂದ ತೆಗೆಯಲಾಗಿದೆ ಹರಿಜನರಿಗಾಗಿ ನಾವೂ ಹೋರಾಟ ಮಾಡಿದ್ದೇವೆ,

(ಗೊಂದಲ)

ಅಧ್ಯಕ್ಷರು.—ನೀವು ಅವರಿಗೆ ಹೇಳಿದಿರಿ ಅವರು ನಿಮಗೆ ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ಇಲ್ಲಿ ಏಕೆ ವಿಚಾರ ಎತ್ತಲಾಗಿದೆ ಎಂದರೆ ಯಾವಾಗ ನಾವು ಬಾಟ್ಲಿಂಗ್ ವಿಷಯ ಎತ್ತಿ ರಾಜೀನಾಮೆಗಾಗಿ ಕೇಳಿದೆವೋ ಆಗ ಅವರು ಈ ವಿಷಯ ಎತ್ತಿದರು.

(ಗೊಂದಲ)

SRI M. RAGHUPATHY.—I am on a point of order

ಅಧ್ಯಕ್ಷರು.—ಬಾಟ್ಲಿಂಗ್ ವಿಷಯ ಎಲ್ಲ ಯಾವುದೂ ಇಲ್ಲಿ ಬರುವುದಿಲ್ಲ ಅದನ್ನು ಎಕ್ಸ್‌ಪಂಜ್ ಮಾಡಿ.

(ಗೊಂದಲ)

ಶ್ರೀ ಎಸ್, ಬಂಗಾರಪ್ಪ.—ಟೇಪಿಗೂ ನಮಗೂ ಸಂಬಂಧ ಇದೆ ಅದರಲ್ಲಿ ನಮ್ಮನ್ನು ಕುರಿತು ಬಳಸಿಕೊಳ್ಳಲಾಗಿದೆ.

(ಗೊಂದಲ)

ಅಧ್ಯಕ್ಷರು.—ಇಷ್ಟು ಇಲ್ಲಿಗೆ ಸಾಕು ಎಲ್ಲರೂ ಕೂಡಿ ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈಗ ಟೇಪಿನ ವಿಚಾರ ಮಾತಾಡೋಣ ಅವರೂ ಟೇಪು ತೆಗೆದುಕೊಂಡು ಬರಲಿ.

(ಗೊಂದಲ)

ಅಧ್ಯಕ್ಷರು.—ಈಗ ನಿಯಮ ೧೯೫ರ ಪ್ರಕಾರ ಪ್ರಿವಿಲೇಜ್ ಕಮಿಟಿಗೆ ಈ ಪ್ರಕರಣವನ್ನು ರೆಫರ್ ಮಾಡಲಾಗಿದೆ.

ಇಂದಿಗೆ ಸಭೆಯು ಮುಕ್ತಾಯವಾಗಿ ಮತ್ತೆ ನಾಳೆ ಬೆಳಿಗ್ಗೆ ೧೦ ಗಂಟೆಗೆ ಸೇರುವುದು.

(ಸದನವು ಎಂಟುಗಂಟೆ ೨೮ ನಿಮಿಷಕ್ಕೆ ಮುಕ್ತಾಯವಾಗಿ ಪುನ: ಮರು ದಿನ ಗುರುವಾರ ಬೆಳಿಗ್ಗೆ ೧೦ ಗಂಟೆಗೆ ಸೇರಲು ನಿಶ್ಚಯಿಸಿತು)